ಸೋಮವಾರ, ಜನವರಿ 24, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 24 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಣ
ವಾಯುಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಅಧ್ಯಯನಕ್ಕಾಗಿ ರೂರ್ಕಿ ಐಐಟಿ ಆನ್‌ಲೈನ್ ಕೋರ್ಸ್ ಆರಂಭಿಸಿದೆ. ಕೋರ್ಸ್ ಕುರಿತ ವಿವರ ಇಲ್ಲಿದೆ.

ರಾಜ್ಯದ ಆರೋಗ್ಯ ಕೇಂದ್ರಗಳಲ್ಲಿ ಕಾಣದ ಬದಲಾವಣೆ


ಸಿಬ್ಬಂದಿ ಕೊರತೆಗಿಲ್ಲ ಮದ್ದು!

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಆಸ್ಪತ್ರೆಗಳ ಮೇಲಿನ ಅತಿಯಾದ ಒತ್ತಡವನ್ನು ಕಂಡು ಕಂಗಾಲಾಗಿದ್ದ ಕೇಂದ್ರ ಸರ್ಕಾರ, ದೇಶದಾದ್ಯಂತ ಪ್ರಾಥಮಿಕ ಆರೋಗ್ಯ ಕೇಂದ್ರಗಳು (ಪಿಎಚ್‌ಸಿ) ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು (ಸಿಎಚ್‌ಸಿ) ಮೇಲ್ದರ್ಜೆಗೇರಿಸಲು ನಿರ್ದೇಶನ ನೀಡಿತ್ತು. ಎಂಟು ತಿಂಗಳ ಬಳಿಕವೂ ರಾಜ್ಯದ ಈ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ತಾಂಡವವಾಡುತ್ತಿದ್ದು, ಯಾವ ಬದಲಾವಣೆಯೂ ಕಣ್ಣಿಗೆ ಗೋಚರಿಸುತ್ತಿಲ್ಲ.

ರಾಜ್ಯದಲ್ಲಿ 2,359 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 204 ಸಮುದಾಯ ಆರೋಗ್ಯ ಕೇಂದ್ರಗಳಿವೆ. ರಾಜ್ಯದ ಬಹುಸಂಖ್ಯೆಯ ಜನರು ಆರೋಗ್ಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಕೆಳಹಂತದ ಈ ಆಸ್ಪತ್ರೆಗಳನ್ನೇ ನೆಚ್ಚಿಕೊಂಡಿದ್ದಾರೆ. ಗ್ರಾಮೀಣ ಭಾಗದಲ್ಲಂತೂ ಪಿಎಚ್‌ಸಿ, ಸಿಎಚ್‌ಸಿಗಳೇ ಆರೋಗ್ಯ ವ್ಯವಸ್ಥೆಯ ಜೀವಾಳವಾಗಿವೆ. ಕೋವಿಡ್ ಬಳಿಕ ಈ ಆಸ್ಪತ್ರೆಗಳ ಮೇಲೆ ಮತ್ತಷ್ಟು ಒತ್ತಡ ಹೆಚ್ಚಾಗಿದೆ. ಸಿಬ್ಬಂದಿ ಕೊರತೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದ್ದು, ಗ್ರಾಮೀಣ ಆರೋಗ್ಯ ಸೇವೆ ಕುಸಿಯುವ ಭೀತಿಯಲ್ಲಿದೆ.

ವರ್ಷದ ಹಿಂದೆ ಪಿಎಚ್‌ಸಿ ಮತ್ತು ಸಿಎಚ್‌ಸಿಗಳಲ್ಲಿ ವೈದ್ಯರ ಕೊರತೆಯೂ ವ್ಯಾಪಕವಾಗಿತ್ತು. 2021ರ ಮೇ ತಿಂಗಳಲ್ಲಿ ಆರೋಗ್ಯ ಇಲಾಖೆಯು 1,763 ವೈದ್ಯರನ್ನು ನೇಮಕಾತಿ ಮಾಡಿಕೊಂಡಿತ್ತು. ಅವರಲ್ಲಿ 1,048 ಮಂದಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳೇ ಇದ್ದರು. ಅವರನ್ನು ರಾಜ್ಯದಾದ್ಯಂತ ಪಿಎಚ್‌ಸಿ ಮತ್ತು ಸಿಎಚ್‌ಸಿಗಳಿಗೆ ನಿಯೋಜನೆ ಮಾಡಿದ್ದು, ವೈದ್ಯರ ಕೊರತೆಯ ಸಮಸ್ಯೆ ಬಹುತೇಕ ಪರಿಹಾರವಾದಂತಾಗಿದೆ.



ಸಿಬ್ಬಂದಿಯೇ ಇಲ್ಲ: ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಒಬ್ಬ ವೈದ್ಯರ ಜತೆಗೆ ಒಬ್ಬ ಸ್ಟಾಫ್ ನರ್ಸ್, ಒಬ್ಬ ಪ್ರಯೋಗಾಲಯ ತಂತ್ರಜ್ಞ, ಒಬ್ಬ ಫಾರ್ಮಸಿಸ್ಟ್, ಒಬ್ಬ ಗುಮಾಸ್ತ, ಒಬ್ಬ ಡೇಟಾ ಎಂಟ್ರಿ ಆಪರೇಟರ್, ಕನಿಷ್ಠ ಇಬ್ಬರು 'ಡಿ' ದರ್ಜೆ ನೌಕರರು ಮತ್ತು ಆಯಾ ಆರೋಗ್ಯ ಕೇಂದ್ರಗಳ ವ್ಯಾಪ್ತಿಗೆ ಅನುಸಾರವಾಗಿ ಆರೋಗ್ಯ ಸಹಾಯಕರು ಇರಬೇಕು.

'ಪಿಎಚ್‌ಸಿ ಮತ್ತು ಸಿಎಚ್‌ಸಿಗಳಲ್ಲಿ ಹಿಂದೆ ವೈದ್ಯರ ಕೊರತೆ ತೀವ್ರವಾಗಿತ್ತು. ಕೆಲವು ತಿಂಗಳಿಂದ ವೈದ್ಯರ ಕೊರತೆ ಕಡಿಮೆ ಇದೆ. ಆದರೆ, ಸಿಬ್ಬಂದಿ ಕೊರತೆ ತೀವ್ರವಾಗಿದೆ. ಶುಶ್ರೂಷಕರು, ಪ್ರಯೋಗಾಲಯ ತಂತ್ರಜ್ಞರು, ಫಾರ್ಮಸಿಸ್ಟ್, ಗುಮಾಸ್ತ, ಡೇಟಾ ಎಂಟ್ರಿ ಆಪರೇಟರ್‌ಗಳಲ್ಲಿ ಕೆಲವು ಹುದ್ದೆಗಳು ದೀರ್ಘಕಾಲದಿಂದ ಖಾಲಿ ಉಳಿದಿರುವುದನ್ನು ನೋಡಬಹುದು.

ಆರೋಗ್ಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ

ಹುದ್ದೆ	ಮಂಜೂರು	ಭರ್ತಿ	ಖಾಲಿ
ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು	2,355	2,252	103
ಮುಖ್ಯ ವೈದ್ಯಾಧಿಕಾರಿ	706	291	415
ಹಿರಿಯ ಮುಖ್ಯ ವೈದ್ಯಾಧಿಕಾರಿ	241	146	95
ಕಚೇರಿ ಅಧೀಕ್ಷಕರು	598	486	112
ಪ್ರಥಮ ದರ್ಜೆ ಗುಮಾಸ್ತರು	2,341	1,221	1,120
ದ್ವಿತೀಯ ದರ್ಜೆ ಗುಮಾಸ್ತರು	1,736	1,157	579
ಶುಶ್ರೂಷಾಧಿಕಾರಿ	8,667	7,341	1,326
ಹಿರಿಯ ಶುಶ್ರೂಷಾಧಿಕಾರಿ	652	474	178
ಫಾರ್ಮಾಸಿಸ್ಟ್	2,932	1,974	958
ಹಿರಿಯ ಫಾರ್ಮಾಸಿಸ್ಟ್	472	345	127
ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	9,706	7,500	2,206
ಹಿರಿಯ ಮಹಿಳಾ ಆರೋಗ್ಯ ಸಹಾಯಕಿ	1,406	570	836
ಕಿರಿಯ ಆರೋಗ್ಯ ಸಹಾಯಕ (ಪುರುಷ)	5,921	3,625	2,296
ಹಿರಿಯ ಆರೋಗ್ಯ ಸಹಾಯಕ (ಪುರುಷ)	1,289	820	429
ಡಿ ದರ್ಜೆ ನೌಕರರು	16,845	6,644	10,201

4ನೇ ಪುಟ ನೋಡಿ

'ಸಮುದಾಯ ಹಂತಕ್ಕೆ ಓಮೈಕ್ರಾನ್'

ನವದೆಹಲಿ (ಪಿಟಿಐ): ರೂಪಾಂತರ ಸೋಂಕು 'ಓಮೈಕ್ರಾನ್' ಈಗ ದೇಶದಲ್ಲಿ ಸಮುದಾಯದಲ್ಲಿ ಹರಡುವ ಹಂತದಲ್ಲಿದೆ. ಬಹುತೇಕ ಮೆಟ್ರೊ ನಗರಗಳಲ್ಲಿ ಇದು ಪ್ರಬಲವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ವರದಿಯಾಗುತ್ತಿವೆ.

ಐಎನ್‌ಎಸ್‌ಎಸಿಒಜಿ (ಇಂಡಿಯಾ ಸಾರ್ಸ್ ಕೋವ್ -2 ಜೆನೋಮಿಕ್ ಕನ್ಸೋರ್ಟಿಯಂ) ಭಾನುವಾರ ಬಿಡುಗಡೆ ಮಾಡಿದ ವಾರ್ತಾಪತ್ರ ಇದನ್ನು ದೃಢಪಡಿಸಿದೆ. ದೇಶದಲ್ಲಿ ಓಮೈಕ್ರಾನ್‌ನ ಉಪ ರೂಪಾಂತರ ತಳಿ 'ಬಿ.ಎ.2' ಪ್ರಕರಣಗಳು ಗಮನಾರ್ಹ ಸಂಖ್ಯೆಯಲ್ಲಿ ಪತ್ತೆಯಾಗಿವೆ ಎಂದೂ ತಿಳಿಸಿದೆ.

ಈಗ ದೃಢಪಟ್ಟಿರುವ ಓಮೈಕ್ರಾನ್‌ನ ಬಹುತೇಕ ಪ್ರಕರಣಗಳು ಲಕ್ಷಣ ರಹಿತವಾಗಿವೆ ಅಥವಾ ಅಲ್ಪ ಪರಿಣಾಮದ್ದಾಗಿವೆ. ಮೂರನೇ ಅಲೆಯಲ್ಲಿ ಆಸ್ಪತ್ರೆಗೆ ದಾಖಲು ಅಥವಾ ಐಸಿಯುಗೆ ಸೇರುವವರ ಸಂಖ್ಯೆ ಹೆಚ್ಚಿದ್ದರೂ ಅಪಾಯದ ಸ್ಥಿತಿಗತಿಯಲ್ಲಿ ಗಮನಾರ್ಹ ಬದಲಾವಣೆಯೇನೂ ಆಗಿಲ್ಲ ಎಂದು ಹೇಳಿದೆ.

ಹೊಸದಾಗಿ ಪತ್ತೆಯಾಗಿರುವ ಬಿ.1.640.2 ಹೆಸರಿನ ರೂಪಾಂತರಿಯನ್ನು ಗಮನಿಸಲಾಗುತ್ತಿದೆ. ಇದು, ತೀವ್ರವಾಗಿ ಹರಡಲಿದೆ ಎಂಬುದಕ್ಕೆ ಯಾವುದೇ ನಿದರ್ಶನಗಳಿಲ್ಲ. ಇದು, ಸದ್ಯ ಗಂಭೀರವಾಗಿ ಪರಿಗಣಿಸಬೇಕಾದ ತಳಿಯಲ್ಲ. ಭಾರತದಲ್ಲಿ ಇಂಥ ತಳಿಯ ಪ್ರಕರಣಗಳು ಪತ್ತೆಯಾಗಿಲ್ಲ.

ಐಎನ್‌ಎಸ್‌ಎಸಿಒಜಿ ಇದುವರೆಗೂ ಒಟ್ಟು 1,50,710 ಮಾದರಿಗಳನ್ನು ವಂಶವಾಹಿ ಅನುಕ್ರಮಣಿಕೆ ಪರೀಕ್ಷೆಗೆ ಪರಿಗಣಿಸಿದ್ದು, 1,27,697 ಮಾದರಿಗಳ ಪರೀಕ್ಷೆಯನ್ನು ಪೂರ್ಣಗೊಳಿಸಿದೆ ಎಂದು ತಿಳಿಸಿದೆ.

ಸೋಂಕು ಇಳಿಮುಖ ಸಕಾರಾತ್ಮಕ ಬೆಳವಣಿಗೆ: ಸಚಿವ ಸುಧಾಕರ್

ಬೆಂಗಳೂರು: 'ಕೊರೊನಾ ಸೋಂಕು ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ಇಳಿಮುಖ ಆಗುತ್ತಿರುವುದು ಸಕಾರಾತ್ಮಕ ಬೆಳವಣಿಗೆ. ಆದರೆ, ಬೆಂಗಳೂರು ಹೊರತುಪಡಿಸಿದರೆ ಇತರ ನಗರ ಪ್ರದೇಶ ಹಾಗೂ ಗ್ರಾಮೀಣ ಭಾಗಗಳಲ್ಲಿ ಸೋಂಕು ಹರಡುವಿಕೆ ಹೆಚ್ಚಾಗುತ್ತಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಮುಂದಿನ ದಿನಗಳಲ್ಲಿ ಸೋಂಕು ಕಡಿಮೆಯಾಗುವ ಸಾಧ್ಯತೆ ಇದೆ. ತಜ್ಞರು ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ' ಎಂದರು.

'ಬೆಂಗಳೂರಿನಲ್ಲಿ ಕೋವಿಡ್ ದೃಢ ಪ್ರಮಾಣ ಇದೇ 19ರಂದು ಅತಿ ಹೆಚ್ಚು ಇತ್ತು. ಈಗ ಕಡಿಮೆಯಾಗುತ್ತಿದೆ. ಈಗ ಬೇರೆ ಬೇರೆ ನಗರಗಳಲ್ಲಿ ಸೋಂಕು ಕಾಣಿಸಿಕೊಳ್ಳುತ್ತಿದೆ. ಇದು ಸ್ವಾಭಾವಿಕ. ಮಹಾರಾಷ್ಟ್ರ ಮತ್ತು ದೆಹಲಿಯಲ್ಲಿ ಇದೀಗ ಕಡಿಮೆಯಾಗುತ್ತಿದೆ. ನಮ್ಮಲ್ಲೂ ಕೂಡ ಎರಡು, ಮೂರು ವಾರದಲ್ಲಿ ಕಡಿಮೆಯಾಗುವ ಸಂಭವವಿದೆ' ಎಂದರು.

'ಕೋವಿಡ್ ದೃಢಪಟ್ಟವರನ್ನು ಮನೆಯಿಂದ ಹೊರಗೆ ಬರಬೇಡಿ ಎಂದು ಪದೇ ಪದೇ ಮನವಿ ಮಾಡಿದರೂ ಕೆಲವರು ಅನಗತ್ಯವಾಗಿ ತಿರುಗಾಡುತ್ತಿದ್ದಾರೆ. ಇದರಿಂದ ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಅಲ್ಲದೆ, ಕರ್ನಾಟಕ ಐದಾರು ರಾಜ್ಯಗಳ ಜತೆ ಗಡಿಯನ್ನು ಹಂಚಿಕೊಂಡಿದೆ. ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸಂಚಾರ ಮಾಡುವುದರಿಂದಲೂ ಸೋಂಕು ಹಬ್ಬುತ್ತದೆ' ಎಂದು ಸಚಿವರು ಅಭಿಪ್ರಾಯಪಟ್ಟರು.

'ಕೇವಲ ಕಾನೂನಿನಿಂದ ಮಾತ್ರ ಕೋವಿಡ್ ಕಟ್ಟಿಹಾಕಲು ಸಾಧ್ಯವಿಲ್ಲ. ಜನರ ಸಹಕಾರವೂ ಅಷ್ಟೇ ಮುಖ್ಯ. ನಾವು ಜನರಿಗೆ ಜವಾಬ್ದಾರಿ ನೀಡಿದ್ದೇವೆ. ಸಾರ್ವಜನಿಕರು ಸರ್ಕಾರಕ್ಕೆ ಸಹಕಾರ ಕೊಡಬೇಕು' ಎಂದರು.

2ನೇ ಡೋಸ್ ಶೇ 85 ಸಾಧನೆ

ಬೆಂಗಳೂರು: ರಾಜ್ಯದಲ್ಲಿ 18 ವರ್ಷಗಳು ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಶೇ 100 ರಷ್ಟು ಗುರಿ ಸಾಧನೆಯಾಗಿದೆ. ಮೊದಲ ಡೋಸ್ ಪಡೆದವರಲ್ಲಿ ಶೇ 85ರಷ್ಟು ಮಂದಿ ಎರಡನೆ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ವಿವರ ಪುಟ 10

50 ಸಾವಿರ ದಾಟಿದ ಹೊಸ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಭಾನುವಾರ ಸೋಂಕು ದೃಢಪಟ್ಟವರ ಸಂಖ್ಯೆ 50 ಸಾವಿರದ ಗಡಿ (50,210) ದಾಟಿದೆ. ಕೋವಿಡ್ ಕಾಣಿಸಿಕೊಂಡಾಗಿನಿಂದ ಈವರೆಗೆ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ವಿವರ ಪುಟ 10
ಇನ್ನಷ್ಟು ಸುದ್ದಿಗಳು 10

ನೇತಾಜಿಯ ಹಾಲೊಗ್ರಾಂ ಪ್ರತಿಮೆ ಅನಾವರಣ

ನವದೆಹಲಿ (ಪಿಟಿಐ): ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಹೊಲೊಗ್ರಾಂ ಸ್ವರೂಪದ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಸಂಜೆ ಇಲ್ಲಿನ ಇಂಡಿಯಾ ಗೇಟ್ ಬಳಿ ಅನಾವರಣಗೊಳಿಸಿದರು.

ನೇತಾಜಿ ಅವರ 125ನೇ ಜನ್ಮದಿನದಂದು ನಡೆದ ಈ ಕಾರ್ಯಕ್ರಮಕ್ಕೆ ಹಲವು ಗಣ್ಯರು ಸಾಕ್ಷಿಯಾದರು. ಅಮೃತಶಿಲೆಯಲ್ಲಿ ರೂಪಿಸುವ ಪ್ರತಿಮೆ ಸಿದ್ಧವಾಗುವವರೆಗೂ ಹಾಲೊಗ್ರಾಂ ಪ್ರತಿಮೆಯು ಈ ಸ್ಥಳದಲ್ಲಿರಲಿದೆ.

ಪ್ರಾಕೃತಿಕ ವಿಕೋಪ ನಿರ್ವಹಣೆಯಲ್ಲಿ ಗಣನೀಯ ಸಾಧನೆಗಾಗಿ ನೀಡುವ ಬೋಸ್ ಸ್ಮಾರಕ 'ಅಪದಾ ಪ್ರಬಂಧನ್ ಪುರಸ್ಕಾರ್'ನ 2019–2022ರ ನಾಲ್ಕು ವರ್ಷದ ಪ್ರಶಸ್ತಿಗಳನ್ನು ಪ್ರಧಾನಿ ಇದೇ ಸಂದರ್ಭದಲ್ಲಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ, 'ಸ್ವಾತಂತ್ರ್ಯ ಹೋರಾಟದಲ್ಲಿ ನೇತಾಜಿ ಅವರು ನೀಡಿದ ಅನನ್ಯ ಕೊಡುಗೆ ಮತ್ತು ಅದಕ್ಕಾಗಿ ದೇಶ ಅವರಿಗೆ ಆಭಾರಿಯಾಗಿ ಇರುವುದರ ದ್ಯೋತಕವೇ ಈ ಪ್ರತಿಮೆ' ಎಂದು ಪ್ರತಿಪಾದಿಸಿದರು.

'ನಾವು ನೇತಾಜಿ ಅವರ 'ಮಾಡಬಲ್ಲೆ, ಮಾಡುತ್ತೇನೆ' ಎಂಬ ಚಿಂತನೆಯಿಂದ ಪ್ರೇರೇಪಣೆಗೊಂಡು ಮುನ್ನಡೆಯಬೇಕಿದೆ' ಎಂದು ಹೇಳಿದರು. 'ಈ ಪ್ರತಿಮೆಯು ಈಗಿನ ಮತ್ತು ಭವಿಷ್ಯದ ಯುವಪೀಳಿಗೆಗೆ ಅವರ ಪ್ರಜಾಪ್ರಭುತ್ವ ಸಂಸ್ಥೆಗಳು ಮತ್ತು ಅವರ ಕರ್ತವ್ಯವನ್ನು ನೆನಪಿಸಿ, ಉತ್ತೇಜನ ನೀಡಲಿದೆ' ಎಂದು ಆಶಿಸಿದರು.

30000 ಲ್ಯುಮೆನ್ಸ್, 4ಕೆ ಸಾಮರ್ಥ್ಯದ ಪ್ರೊಜೆಕ್ಟರ್ ಬಳಸಿ ಹಾಲೊಗ್ರಾಂ ಪ್ರತಿಮೆ ಬಿಂಬಿಸಲಾಗಿದೆ. ಪ್ರತಿಮೆ ಚಿತ್ರ ಮೂಡುವಂತೆ ಶೇ 90ರಷ್ಟು ಪಾರದರ್ಶಕವಾದ ಪರದೆ ಅಳವಡಿಸಿದ್ದು, ಸಾಮಾನ್ಯ ನೋಟಕ್ಕೆ ಪರದೆ ಗೋಚರವಾಗದು.

ಮೂರು ಆಯಾಮದ (3ಡಿ) ನೇತಾಜಿ ಅವರ ಪ್ರತಿಮೆಯನ್ನು, ತಂತ್ರಜ್ಞಾನ ಬಳಸಿ ಈ ಪರದೆಯ ಮೇಲೆ ಮೂಡಿಸಲಾಗುತ್ತದೆ. ಹಾಲೊಗ್ರಾಂನ ಈ ಪ್ರತಿಮೆಯ ಎತ್ತರ 28 ಅಡಿ ಆಗಿದ್ದು, ಅಗಲ 6 ಅಡಿ ಆಗಿರಲಿದೆ.





ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನವದೆಹಲಿಯ ಇಂಡಿಯಾ ಗೇಟ್ ಬಳಿ ನೇತಾಜಿ ಅವರ ಹೊಲೊಗ್ರಾಂ ಪ್ರತಿಮೆ ಅನಾವರಣಗೊಳಿಸಿದರು. ಕೇಂದ್ರ ಸಚಿವರಾದ ಅಮಿತ್ ಶಾ, ಹರ್‌ದೀಪ್ ಸಿಂಗ್ ಪುರಿ ಇದ್ದಾರೆ —ಪಿಟಿಐ ಚಿತ್ರ

ಜಾರಕಿಹೊಳಿ ಸಹೋದರರನ್ನು ದೂರವಿಟ್ಟು ಸಚಿವ ಕತ್ತಿ ಸಭೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸಚಿವ ಉಮೇಶ ಕತ್ತಿ ಅವರು ತಮ್ಮ ನೇತೃತ್ವದಲ್ಲಿ ಪಕ್ಷದ ಕೆಲವು ಮುಖಂಡರೊಂದಿಗೆ ರಹಸ್ಯವಾಗಿ ಸಭೆ ನಡೆಸಿರುವುದು ಕುತೂಹಲ ಮೂಡಿಸಿದೆ ಹಾಗೂ ಚರ್ಚೆಗಳಿಗೂ ಗ್ರಾಸವಾಗಿದೆ. ಜಾರಕಿಹೊಳಿ ಸಹೋದರರನ್ನು ದೂರವಿಟ್ಟು ಸಭೆ ನಡೆಸಲಾಗಿದೆ.

ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಮಾತುಗಳು ಕೇಳಿಬರುತ್ತಿರುವ ಸಂದರ್ಭದಲ್ಲೇ ಈ ಸಭೆ ನಡೆದಿದೆ. ಕತ್ತಿ ಅವರ ನಿವಾಸದಲ್ಲಿ ಭಾನುವಾರ ನಡೆದ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ, ಚಿಕ್ಕೋಡಿ ಸಂಸದ ಅಣ್ಣಾಸಾಹೇಬ ಜೊಲ್ಲೆ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಶಾಸಕರಾದ ಅಭಯ ಪಾಟೀಲ, ಅನಿಲ ಬೆನಕೆ, ಮಹಾಂತೇಶ ದೊಡ್ಡಗೌಡರ, ಪಿ.ರಾಜೀವ, ಮುಖಂಡ ಮಹಾಂತೇಶ ಕವಟಗಿಮಠ ಭಾಗವಹಿಸಿದ್ದರು. ಸಂಪುಟ ವಿಸ್ತರಣೆ, ನಿಗಮ–ಮಂಡಳಿಗಳ ನೇಮಕ, ಮಹಾನಗರಪಾಲಿಕೆ ಮೇಯರ್–ಉಪ ಮೇಯರ್ ಆಯ್ಕೆ ಮೊದಲಾದ ವಿಷಯಗಳ ಕುರಿತು ಚರ್ಚಿಸಲಾಗಿದೆ. ಅಭಯ ಪಾಟೀಲ ಮತ್ತು ಪಿ.ರಾಜೀವ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದೂ ಚರ್ಚಿಸಲಾಗಿದೆ ಎನ್ನಲಾಗಿದೆ.

4ನೇ ಪುಟ ನೋಡಿ

'ವರಿಷ್ಠರು ಎಲ್ಲವನ್ನೂ ಗಮನಿಸುತ್ತಿದ್ದಾರೆ'

ಬೆಳಗಾವಿ: 'ಜಿಲ್ಲೆಯ ಕೆಲವು ಬಿಜೆಪಿ ಮುಖಂಡರು ಸಭೆ ಸೇರಿರುವ ಕುರಿತು ಗಮನಿಸಿದ್ದೇನೆ. ಉದ್ದೇಶಪೂರ್ವಕವಾಗಿ ಯಾರನ್ನೂ ಹೊರಗಿಟ್ಟು ಸಭೆ ನಡೆಸುವ ಅಗತ್ಯವಿರಲಿಲ್ಲ. ಅಲ್ಲದೇ ಅದು ಬಿಜೆಪಿಯ ಅಧಿಕೃತ ಸಭೆಯೂ ಅಲ್ಲ. ಹೀಗಾಗಿ ಹೆಚ್ಚಿನ ಮಹತ್ವ ನೀಡುವ ಅಗತ್ಯ ಇಲ್ಲ' ಎಂದು ಅರಭಾವಿ ಶಾಸಕರೂ ಆಗಿರುವ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದ್ದಾರೆ.

ಸಚಿವ ಉಮೇಶ ಕತ್ತಿ ನೇತೃತ್ವದಲ್ಲಿ ಇಲ್ಲಿ ರಹಸ್ಯವಾಗಿ ನಡೆದ ಸಭೆ ಕುರಿತಂತೆ ಪ್ರತಿಕ್ರಿಯೆ ನೀಡಿದ್ದಾರೆ.

'ಜಿಲ್ಲೆಯಲ್ಲಿ ಪಕ್ಷಕ್ಕಾಗಿ ಯಾರು, ಎಷ್ಟು ದುಡಿಯುತ್ತಿದ್ದಾರೆ ಎನ್ನುವುದು ವರಿಷ್ಠರಿಗೆ ಗೊತ್ತಿದೆ. ದಿನಕ್ಕೊಬ್ಬರಂತೆ ಸಭೆ ನಡೆಸುತ್ತಾ ಹೋದರೆ ಅದಕ್ಕೆಲ್ಲ ಉತ್ತರ ನೀಡಲು ಆಗುವುದಿಲ್ಲ. ಎಲ್ಲ ಚಟುವಟಿಕೆಗಳನ್ನೂ ಪಕ್ಷದ ವರಿಷ್ಠರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾಮತ ಪ್ರಜಾವಾಣಿ ಕನ್ನಡ ಧ್ವನಿ ಪಾಡ್‌ಕಾಸ್ಟ್

ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ನಿಷ್ಪಕ್ಷಪಾತ ಸುದ್ದಿ, ವಿಶ್ಲೇಷಣೆಗಳಿಗೆ ಆಲಿಸಿರಿ
ಪ್ರಜಾವಾಣಿ ಪಾಡ್‌ಕಾಸ್ಟ್
ಪ್ರತಿ ರಾತ್ರಿ 9.00 ಗಂಟೆಗೆ
ಇಂದಿನಿಂದ ಆರಂಭ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಚೀನಾ ನೆಲೆಯಲ್ಲಿ ಬಾಲಕ ಪತ್ತೆ, ಸೇನೆಗೆ ಒಪ್ಪಿಸಲು ಪಿಎಲ್‌ಎ ಕ್ರಮ

ನವದೆಹಲಿ (ಪಿಟಿಐ): ಚೀನಾಗೆ ಸೇರಿದ ಭೂಭಾಗದಲ್ಲಿ ಅರುಣಾಚಲ ಪ್ರದೇಶದ ಬಾಲಕನೊಬ್ಬ ಪತ್ತೆಯಾಗಿದ್ದು, ಭಾರತೀಯ ಸೇನೆಗೆ ಒಪ್ಪಿಸುವ ಪ್ರಕ್ರಿಯೆ ನಡೆದಿದೆ ಎಂದು ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ(ಪಿಎಲ್‌ಎ) ಹೇಳಿದೆ.

ಪಿಎಲ್‌ಎ ಈ ಕುರಿತ ಸಂದೇಶವನ್ನು ಸೇನೆಗೆ ರವಾನಿಸಿದೆ. ಪಿಎಲ್‌ಎಯ ಸಿಬ್ಬಂದಿ ಬಾಲಕನನ್ನು ಅಪಹರಿಸಿದ್ದಾರೆ ಎಂಬ ಸಂಸದರೊಬ್ಬರ ಹೇಳಿಕೆಯ ಹಿಂದೆಯೇ ಈ ಬೆಳವಣಿಗೆ ನಡೆದಿದೆ.

ಆದರೆ ಬಾಲಕನ ಗುರುತನ್ನು ಪಿಎಲ್‌ಎ ನೀಡಿಲ್ಲ. ಜನವರಿ 18ರಂದು ಸಿಯಾಂಗ್ ಜಿಲ್ಲೆಯಿಂದ ಪಿಎಲ್‌ಎ ಸಿಬ್ಬಂದಿ ಕರೆದೊಯ್ದಿದ್ದ ಮಿರಂ ತರೋನ್ ಇರಬಹುದು ಎಂದು ಅಂದಾಜಿಸಲಾಗಿದೆ ಎಂದು ಭದ್ರತಾ ಪಡೆಯ ಮೂಲಗಳು ತಿಳಿಸಿವೆ.

ಘಟನೆ ಹಿಂದೆಯೇ ಭಾರತೀಯ ಸೇನೆಯು ಬಾಲಕನ ನೆಲೆ ಗುರುತಿಸಲು ಚೀನಾದ ನೆರವು ಕೋರಿತ್ತು. ಬಾಲಕನನ್ನು ಶೀಘ್ರವೇ ತನ್ನ ಸುಪರ್ದಿಗೆ ಪಡೆಯಲಾಗುವುದು ಎಂದು ಸೇನೆ ತಿಳಿಸಿದೆ. ಅರುಣಾಚಲ ಪ್ರದೇಶದ ಸಂಸದ ತಪಿರ್ ಗಾವೊ ಅವರು, 'ಬಾಲಕನು ಪಿಎಲ್‌ಎ ಸುಪರ್ದಿಯಲ್ಲಿದ್ದಾನೆ. ಶೀಘ್ರವೇ ಸೇನೆಗೆ ಒಪ್ಪಿಸಲಿದೆ ಎಂಬ ಮಾಹಿತಿಯನ್ನು ಸೇನೆ ನನಗೆ ನೀಡಿದೆ' ಎಂದು ತಿಳಿಸಿದರು.

8 ತಿಂಗಳುಗಳಿಂದ ಕಾಯಂ ಪರೀಕ್ಷಾ ನಿಯಂತ್ರಕರಿಲ್ಲ – ಸಿಎಂಗೆ ಪತ್ರ

ಕೆಪಿಎಸ್‌ಸಿ: 4,078 ಹುದ್ದೆ ಆಯ್ಕೆ ನನೆಗುದಿಗೆ

● ರಾಜೇಶ್ ರೈ ಚಟ್ಲ

ಬೆಂಗಳೂರು: ಸುಮಾರು ಎಂಟು ತಿಂಗಳಿಂದ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಕಾಯಂ ಪರೀಕ್ಷಾ ನಿಯಂತ್ರಕರಿಲ್ಲ. ಹೀಗಾಗಿ, ಸರ್ಕಾರದ ನಾನಾ ಇಲಾಖೆಗಳ ವಿವಿಧ ಶ್ರೇಣಿಗಳಿಗೆ ಸೇರಿದ 4,078 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ.

ತಕ್ಷಣ ಪರೀಕ್ಷಾ ನಿಯಂತ್ರಕರನ್ನು ನಿಯೋಜಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಕೆಪಿಎಸ್‌ಸಿ ಮನವಿ ಮಾಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈ ಸಂಬಂಧ ಪತ್ರ ಬರೆದಿರುವ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ, 'ಸದ್ಯ ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರೀಕ್ಷಾ ನಿಯಂತ್ರಕರನ್ನು (ಎಂ. ಕನಗವಲ್ಲಿ) ಸಮವರ್ತಿ ಪ್ರಭಾರದಲ್ಲಿ ಇರಿಸಲಾಗಿದೆ. ಅವರು ಆಯೋಗದ ಕಾರ್ಯನಿರ್ವಹಣೆಯ ಜೊತೆಗೆ ರೇಷ್ಮೆ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನೂ ಹೊಂದಿದ್ದಾರೆ. ಎರಡು ಹುದ್ದೆಗಳ ಜವಾಬ್ದಾರಿಯನ್ನು ನಿರ್ವಹಿಸುವುದು ಅವರಿಗೂ ಕಷ್ಟಕರ. ಈ ಕಾರಣದಿಂದ ಆಯೋಗದ ಕಾರ್ಯನಿರ್ವಹಣೆ ವಿಳಂಬ ಆಗುತ್ತಿದೆ' ಎಂದಿದ್ದಾರೆ.

ಮೌಲ್ಯಮಾಪನ ವಿಳಂಬ: 'ನಿಯಮಿತ ಪರೀಕ್ಷಾ ಕಂಟ್ರೋಲರ್ ಇಲ್ಲದ ಕಾರಣ 2020ರ ಡಿ. 21, 23, 24, 28 ರಂದು ನಡೆದ ರಾಜ್ಯ ಲೆಕ್ಕಪತ್ರ ಇಲಾಖೆಯ ಸಹಾಯಕ ನಿಯಂತ್ರಕರ ಮುಖ್ಯ ಪರೀಕ್ಷೆಯ ಮೌಲ್ಯಮಾಪನ ಪೂರ್ಣಗೊಂಡಿಲ್ಲ. 2021ರ ಫೆಬ್ರುವರಿ 13ರಿಂದ 16ರ ವರೆಗೆ ನಡೆದ 2017ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಮುಖ್ಯ ಪರೀಕ್ಷೆಯ ಮೌಲ್ಯಮಾಪನ ಆರಂಭವೇ ಆಗಿಲ್ಲ. ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳ ಆಯ್ಕೆಗೆ 2021ರ ಸೆ. 18, 19 ರಂದು ನಡೆದ ಸ್ಪರ್ಧಾತ್ಮಕ ಪರೀಕ್ಷೆಯ ನಂತರದ ಪ್ರಕ್ರಿಯೆಗಳೂ ನಡೆದಿಲ್ಲ. ವಿವಿಧ ಇಲಾಖೆಗಳ ತಾಂತ್ರಿಕೇತರ ಹುದ್ದೆಗಳ ಆಯ್ಕೆಗೆ 2021ರ ಡಿ. 4, 5, 19ರಂದು ನಡೆದ ಪರೀಕ್ಷೆ, ಲೋಕೋಪಯೋಗಿ ಇಲಾಖೆಯ ಕಿರಿಯ ಮತ್ತು ಸಹಾಯಕ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಡಿ. 13, 14 ಮತ್ತು 15ರಂದು ನಡೆದ ಪರೀಕ್ಷೆಗಳ ಮೌಲ್ಯಮಾಪನವೂ ಆರಂಭವಾಗಿಲ್ಲ. 2021ರ ಫೆ. 28ರಂದು ನಡೆದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಯ ಫಲಿತಾಂಶ ಪ್ರಕಟ ಆಗಿಲ್ಲ. ನೇಮಕಾತಿ ಪ್ರಕ್ರಿಯೆ ವಿಳಂಬ ಆಗುತ್ತಿರುವುದು ವ್ಯಾಪಕ ಅಸಮಾಧಾನಕ್ಕೆ ಕಾರಣವಾಗಿದೆ. ಇದರಿಂದ ಆಯೋಗಕ್ಕೆ ಮುಜುಗರ ಉಂಟಾಗುತ್ತಿದೆ' ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

18 ತಿಂಗಳಿಂದ ಹೊಸ ಅಧಿಸೂಚನೆ ಶೂನ್ಯ!: ಕಳೆದ 18 ತಿಂಗಳ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆಯ ಕಿರಿಯ ಮತ್ತು ಸಹಾಯಕ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಪರಿಷ್ಕೃತ ಅಧಿಸೂಚನೆ ಹೊರತುಪಡಿಸಿದರೆ, ಯಾವುದೇ ನೇಮಕಾತಿಗೆ ಸಂಬಂಧಿಸಿದಂತೆ ಹೊಸ ಅಧಿಸೂಚನೆಯನ್ನು ಕೆಪಿಎಸ್‌ಸಿ ಹೊರಡಿಸಿಲ್ಲ. ಇದು ಕೆಪಿಎಸ್‌ಸಿ ಮೂಲಕ ನಡೆಯುವ ನೇಮಕಾತಿಯನ್ನೇ ನಂಬಿರುವ ಸಾವಿರಾರು ಉದ್ಯೋಗಾಕಾಂಕ್ಷಿಗಳಲ್ಲಿ ನಿರಾಸೆ ಮೂಡಿಸಿದೆ. ಅನೇಕರು ವಯೋಮಿತಿ ಮೀರುವ ಆತಂಕದಲ್ಲಿದ್ದಾರೆ. ಇಲಾಖೆಗಳು ವಿವಿಧ ಶ್ರೇಣಿಯ ಹುದ್ದೆಗಳ ಪಟ್ಟಿ ನೀಡಿ, ಅರ್ಹರನ್ನು ಆಯ್ಕೆ ಮಾಡಿಕೊಡುವಂತೆ ಕೆಪಿಎಸ್‌ಸಿಗೆ ಮನವಿ ಮಾಡಿದೆ. ಆದರೆ, ಕೆಪಿಎಸ್‌ಸಿ ಯಾವುದೇ ಪ್ರಕ್ರಿಯೆ ನಡೆಸಿಲ್ಲ. ನೇಮಕಾತಿಯ ಅಧಿಸೂಚನೆ ಹೊರಡಿಸದಿರಲು ಕೋವಿಡ್ ಕೂಡ ಕಾರಣ ಎಂದು ಕೆಪಿಎಸ್‌ಸಿ ಮೂಲಗಳು ಹೇಳಿವೆ.

ಪ್ರಜಾವಾಣಿ ವಿಶೇಷ

3 ವರ್ಷದಲ್ಲಿ ನಾಲ್ವರು ಪರೀಕ್ಷಾ ನಿಯಂತ್ರಕರು!

ಕೆಪಿಎಸ್‌ಸಿಗೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಾಲ್ವರು (ಕೃಷ್ಣ ಬಾಜಪೇಯಿ, ವಿ.ವಿ. ಜ್ಯೋತ್ಸ್ನಾ, ದಿವ್ಯಾಪ್ರಭು, ಎಂ.ಕನಗವಲ್ಲಿ) ಪರೀಕ್ಷಾ ನಿಯಂತ್ರಕರು ಬಂದಿದ್ದಾರೆ. ಕೃಷ್ಣ ಬಾಜಪೇಯಿ ಅವರನ್ನು 2019ರ ಫೆ. 22ರಂದು ವರ್ಗಾವಣೆ ಮಾಡಲಾಗಿತ್ತು. ಆ ಬಳಿಕ ಬಂದ ವಿ.ವಿ. ಜ್ಯೋತ್ಸ್ನಾ ಮತ್ತು ದಿವ್ಯಾಪ್ರಭು ಕೆಲವೇ ತಿಂಗಳು ಮಾತ್ರ ಕಾರ್ಯನಿರ್ವಹಿಸಿದ್ದರು. ಇದೀಗ ಎಂ. ಕನಗವಲ್ಲಿ ಕೂಡಾ ವರ್ಗಾವಣೆಯ ನಿರೀಕ್ಷೆಯಲ್ಲಿದ್ದಾರೆ. ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸುಧಾರಣಾ ಪದ್ಧತಿ ಅಳವಡಿಸಿ, ನಿಷ್ಪಕ್ಷಪಾತವಾದ ಮತ್ತು ಅರ್ಹತೆ ಆಧಾರಿತ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಉದ್ದೇಶದಿಂದ ಜಾರಿಯಲ್ಲಿದ್ದ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಪರಿಷ್ಕರಿಸಲು 2013ರಲ್ಲಿ ಪಿ.ಸಿ. ಹೋಟಾ ಸಮಿತಿಯನ್ನು ಸರ್ಕಾರ ರಚಿಸಿತ್ತು. ಈ ಸಮಿತಿ ಮಾಡಿದ್ದ ಶಿಫಾರಸ್ಸಿನಂತೆ ಐಎಎಸ್ ಹಿರಿಯ ಶ್ರೇಣಿಯ ಪರೀಕ್ಷಾ ನಿಯಂತ್ರಕ ಹುದ್ದೆಯನ್ನು 2013 ರ ಸೆ. 24ರಿಂದ ಜಾರಿಗೆ ಬರುವಂತೆ ಸೃಜಿಸಲಾಗಿದೆ. ಈ ಹುದ್ದೆಗೆ ನಿಯೋಜಿತರಾದವರನ್ನು ಕನಿಷ್ಠ ಮೂರು ವರ್ಷಗಳವರೆಗೆ ವರ್ಗಾವಣೆ ಮಾಡಬಾರದು ಎಂದೂ ಸಮಿತಿ ಶಿಫಾರಸಿನಲ್ಲಿ ಹೇಳಿತ್ತು. ಆದರೆ, ಪರೀಕ್ಷಾ ನಿಯಂತ್ರಕರನ್ನು ಮೂರು ವರ್ಷ ಪೂರ್ಣಗೊಳ್ಳುವ ಮೊದಲೇ ಸರ್ಕಾರ ವರ್ಗಾವಣೆ ಮಾಡುತ್ತಿದೆ!

ಸೋಮವಾರದ ಉಷ್ಣಾಂಶ 30° ಗರಿಷ್ಠ 17° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ನಂತರ, ಶುಭ್ರ ಆಕಾಶ ಇರಲಿದೆ.

ಹವಾಮಾನ: ಮಂಗಳವಾರ 28° 17° | ಬುಧವಾರ 28° 17° | ಗುರುವಾರ 28° 16°

ಸೂರ್ಯೋದಯ: 6:46 ಸೂರ್ಯಾಸ್ತ : 6:16 ಚಂದ್ರೋದಯ: ರಾ. 10:54 ಚಂದ್ರಾಸ್ತ: ಬೆ.10:32 ಭಾನುವಾರದ ಹವಾಮಾನ : ಗರಿಷ್ಠ 31° ಕನಿಷ್ಠ 17°

ಪ್ರಜಾವಾಣಿ

ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಜ.24ರಂದು ಬೆಳಿಗ್ಗೆ 10ರಿಂದ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಬಾಲಾಜಿ ಬಡಾವಣೆ, ವಿಜಯಶ್ರೀ ಬಡಾವಣೆ, ಮೂಕಾಂಬಿಕ ಬಡಾವಣೆ, ಬಿಎಚ್‌ಇಎಲ್, ಕೃಷ್ಣ ಗಾರ್ಡನ್, ಬೃಂದಾವನ ನಗರ, ಅನ್ನಪೂರ್ಣೇಶ್ವರಿ ಬಡಾವಣೆ, ಟಿ.ಪಿ. ಸರ್ಕಲ್, ಹೊಸಹಳ್ಳಿ ರಸ್ತೆ, ಗಾಂಧಿನಗರ, ದುಬಾಸಿಪಾಳ್ಯ, ಉತ್ತರ ಹಳ್ಳಿ ರಸ್ತೆ, ಕೋಡಿಹಳ್ಳಿ ಸುತ್ತಮುತ್ತ ಪ್ರದೇಶಗಳು.

ಪ್ಲಾಸ್ಟಿಕ್ ಅಂಗಡಿಗೆ ಬೆಂಕಿ: ಇಬ್ಬರು ಸಜೀವ ದಹನ

ನಿಡಗುಂದಿ(ವಿಜಯಪುರ ಜಿಲ್ಲೆ): ತಾಲ್ಲೂಕಿನ ಗೋನಾಳ ಬಳಿಯ ರಾಷ್ಟ್ರೀಯ ಹೆದ್ದಾರಿ-50ರ ಬಸವನಬಾಗೇವಾಡಿ ಕ್ರಾಸ್ ಬಳಿ ಭಾನುವಾರ ಎರಡು ಪ್ಲಾಸ್ಟಿಕ್ ವಸ್ತುಗಳ ಅಂಗಡಿಗಳಿಗೆ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ತಗುಲಿ, ಅಲ್ಲಿ ಮಲಗಿದ್ದ ಇಬ್ಬರು ಸಜೀವ ದಹನಗೊಂಡಿದ್ದಾರೆ.

ರಾಜಸ್ಥಾನ ಮೂಲದ ನಿಂಬಾರಾಮ ಜಗಮಲರಾಮಜಿ ಬಿಸ್ನೋಯಿ (35) ಹಾಗೂ ಅಶೋಕ ಸದ್ರಾಮರಾಮಜಿ ಬಿಸ್ನೋಯಿ (30) ಮೃತರು.

ರಾಷ್ಟ್ರೀಯ ಹೆದ್ದಾರಿ ಬಳಿ ಪ್ಲಾಸ್ಟಿಕ್ ಅಂಗಡಿ ಇಟ್ಟುಕೊಂಡು ಅವರು ಜೀವನ ಸಾಗಿಸುತ್ತಿದ್ದರು. ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಕ್ಕೂರಿನಲ್ಲಿ ನವೀಕೃತ ಸರ್ಕಾರಿ ವೈಮಾನಿಕ ಶಾಲೆ ಉದ್ಘಾಟನೆ ● 75 ಪೈಲಟ್‌ಗಳ ತರಬೇತಿಗೆ ಚಾಲನೆ

75 ಹೊಸ ಎನ್‌ಸಿಸಿ ಘಟಕ: ಸಿಎಂ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ರಾಜ್ಯದ 75 ಶಾಲಾ, ಕಾಲೇಜುಗಳಲ್ಲಿ ಹೊಸದಾಗಿ ಎನ್‌ಸಿಸಿ ಘಟಕ ಪ್ರಾರಂಭಿಸಿ, 7,500 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಜಕ್ಕೂರಿನಲ್ಲಿ ಭಾನುವಾರ ನಡೆದ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ 125ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ನವೀಕೃತ ಸರ್ಕಾರಿ ವೈಮಾನಿಕ ಶಾಲೆಯನ್ನು ಉದ್ಘಾಟಿಸಿ ಮತ್ತು 75 ಎನ್‌ಸಿಸಿ ಘಟಕಗಳನ್ನು ಘೋಷಿಸಿ ಮಾತನಾಡಿದರು. 75 ಪೈಲಟ್‌ಗಳ ತರಬೇತಿಗೆ ಚಾಲನೆ ನೀಡಿದ ಮುಖ್ಯಮಂತ್ರಿ, ಪಿ2006ಟಿ ವಿಮಾನವನ್ನೂ ಸೇವೆಗೆ ಅರ್ಪಿಸಿದರು.

ಎನ್‌ಸಿಸಿ ಸೇರುವ ಆಸಕ್ತಿಯನ್ನು ಬೆಳೆಸಲು ಹೊಸ ಘಟಕಗಳನ್ನು ಆರಂಭಿಸುವ ನಿರ್ಧಾರ ಮಾಡಲಾಗಿದೆ. ಇದಕ್ಕಾಗಿ ಪ್ರತಿ ವಿದ್ಯಾರ್ಥಿಗೆ ತಲಾ ₹ 12,000 ವೆಚ್ಚ ಮಾಡಲು ತೀರ್ಮಾನಿಸಲಾಗಿದೆ. ಈಗ ರಾಜ್ಯದಲ್ಲಿ 44,000 ಎನ್‌ಸಿಸಿ ಕೆಡೆಟ್‌ಗಳಿದ್ದು, ಹೊಸ ಘಟಕಗಳ ಆರಂಭದ ಬಳಿಕ ಈ ಸಂಖ್ಯೆ 50,000 ದಾಟಲಿದೆ ಎಂದರು.



ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಸಂಸ್ಥೆಯಲ್ಲಿ ಭಾನುವಾರ ನಡೆದ ನೇತಾಜಿ ಸುಭಾಷ್‌ಚಂದ್ರ ಬೋಸ್ ಜನ್ಮ ದಿನಾಚರಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎನ್‌ಸಿಸಿ ವಿದ್ಯಾರ್ಥಿನಿಯೊಬ್ಬರಿಗೆ ಬೆನ್ನು ತಟ್ಟಿ ಅಭಿನಂದಿಸಿದರು. ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಎನ್‌ಸಿಸಿ ಕಮಾಂಡರ್ ಕನ್ವರ್ ಮತ್ತು ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಇದ್ದರು – ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ಎನ್‌ಸಿಸಿ ಚಟುವಟಿಕೆಯನ್ನು ಪುನರ್‌ರಚಿಸುವ ಪ್ರಸ್ತಾವವಿದೆ. ಎಲ್ಲ ಘಟಕಗಳನ್ನೂ ಕಾಲೇಜುಗಳಿಗೆ ಸ್ಥಳಾಂತರಿಸಲು ಯೋಚಿಸಲಾಗಿದೆ. ಇದಕ್ಕೆ ರಕ್ಷಣಾ ಇಲಾಖೆಯ ಅನುಮತಿ ಬೇಕಿದೆ. ಒಪ್ಪಿಗೆ ದೊರೆತ ಬಳಿಕ ಈ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

ಮಹಿಳೆಯರಿಗೆ ಸ್ವಯಂರಕ್ಷಣೆ ತರಬೇತಿ ನೀಡಲು ಪೊಲೀಸ್ ಇಲಾಖೆಯ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಶಾಲಾ, ಕಾಲೇಜುಗಳಲ್ಲೂ ಈ ತರಬೇತಿ ಕಾರ್ಯಕ್ರಮ ಆಯೋಜಿಸಲಾಗುವುದು. ಸುಭಾಷ್‌ಚಂದ್ರ ಬೋಸ್ ಅವರ ಕನಸುಗಳನ್ನು ಸಾಕಾರಗೊಳಿಸುವ ದಿಸೆಯಲ್ಲಿ ಈ ಎಲ್ಲ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿದೆ ಎಂದರು.

ವೈಮಾನಿಕ ತರಬೇತಿ ಸಂಸ್ಥೆಯಲ್ಲಿ ಪೂರ್ಣ ಪ್ರಮಾಣದ ರನ್‌ವೇ ನಿರ್ಮಾಣದ ಬೇಡಿಕೆ ಇದೆ. ಮುಂದಿನ ದಿನಗಳಲ್ಲಿ ಪರಿಶೀಲಿಸಿ, ಅಗತ್ಯ ಸ್ಥಳಾವಕಾಶ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಕನಸು ನನಸಾಗಿದೆ: ಕ್ರೀಡೆ ಮತ್ತು ಯುವ ಸಬಲೀಕರಣ ಖಾತೆ ಸಚಿವ ಕೆ.ಸಿ. ನಾರಾಯಣಗೌಡ ಮಾತನಾಡಿ, 'ಸರ್ಕಾರಿ ವೈಮಾನಿಕ ತರಬೇತಿ ಸಂಸ್ಥೆಯನ್ನು ತ್ವರಿತವಾಗಿ ಪುನರಾರಂಭ ಮಾಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೆ. ಆರು ತಿಂಗಳಲ್ಲೇ ಈ ಕನಸು ಸಾಕಾರಗೊಂಡಿದೆ. ಪ್ರತಿ ವರ್ಷ 100 ಪೈಲಟ್‌ಗಳಿಗೆ ತರಬೇತಿ ನೀಡುವ ಗುರಿ ಇದೆ' ಎಂದು ಹೇಳಿದರು.

ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, ರಾಜ್ಯದ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿ.ಸಿ. ನಾಗೇಶ್, ಶಾಸಕ ಕೃಷ್ಣ ಬೈರೇಗೌಡ, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು ಉಪಸ್ಥಿತರಿದ್ದರು.

ಹೆಲಿ ಪ್ರವಾಸೋದ್ಯಮಕ್ಕೆ ಚಾಲನೆ

ಪ್ರವಾಸೋದ್ಯಮ ಇಲಾಖೆಯು ಆರಂಭಿಸಿರುವ ಹೆಲಿ ಪ್ರವಾಸೋದ್ಯಮ ಯೋಜನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಚಾಲನೆ ನೀಡಿದರು.

ಈ ಯೋಜನೆಯ ಅನುಷ್ಠಾನಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ತುಂಬಿ ಏವಿಯೇಷನಸ್ ಪ್ರೈವೇಟ್ ಲಿಮಿಟೆಡ್ ಮತ್ತು ಚಿಪ್ಸನ್ ಏವಿಯೇಷನ್ಸ್ ಪ್ರೈವೇಟ್ ಲಿಮಿಟೆಡ್ ಜತೆ ಒಪ್ಪಂದ ಮಾಡಿಕೊಂಡಿದೆ. ಮೊದಲ ಎರಡು ವರ್ಷಗಳಲ್ಲಿ ವರ್ಷಕ್ಕೊಮ್ಮೆ ತಲಾ 50 ಮತ್ತು ನಂತರದ ಮೂರು ವರ್ಷದಲ್ಲಿ ವರ್ಷಕ್ಕೊಮ್ಮೆ ತಲಾ 100 ಪ್ರವಾಸ ಕಾರ್ಯಕ್ರಮಗಳನ್ನು ಈ ಸಂಸ್ಥೆಗಳು ಆಯೋಜಿಸಬೇಕಿದೆ.

ಪೈಲಟ್ ತರಬೇತಿಗೆ ಸಜ್ಜು

ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಸಂಸ್ಥೆಯಲ್ಲಿ ₹ 2 ಕೋಟಿ ವೆಚ್ಚದಲ್ಲಿ 874 ಮೀಟರ್ ಉದ್ದದ ರನ್‌ವೇ ಉನ್ನತೀಕರಿಸಲಾಗಿದೆ. ಸಂಸ್ಥೆಯಲ್ಲಿದ್ದ ಐದು 'ಸಿಂಗಲ್ ಎಂಜಿನ್' ವಿಮಾನಗಳನ್ನು ದುರಸ್ತಿ ಮಾಡಲಾಗಿದೆ. ₹ 5 ಕೋಟಿ ವೆಚ್ಚದಲ್ಲಿ ಒಂದು 'ಟ್ವಿನ್ ಎಂಜಿನ್' ವಿಮಾನವನ್ನೂ ಖರೀದಿಸಲಾಗಿದೆ.

ಸಂಸ್ಥೆಯಲ್ಲಿ ಈಗಾಗಲೇ 40 ವಿದ್ಯಾರ್ಥಿಗಳಿದ್ದಾರೆ. ಹೊಸದಾಗಿ 35 ಮಂದಿ ತರಬೇತಿಗೆ ಅರ್ಜಿ ಸಲ್ಲಿಸಿದ್ದಾರೆ. ಮುಂದಿನ ವಾರದಿಂದಲೇ ತರಬೇತಿ ಆರಂಭಕ್ಕೆ ಸಿದ್ಧತೆ ನಡೆದಿದೆ.

ರೈಲು ಮಾರ್ಗ ವಿದ್ಯುತೀಕರಣ: ಇಂದಿನಿಂದ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ಬೀದರ್: 'ವಿಕಾರಾಬಾದ್‌ನಿಂದ ಪರಳಿಯ ವರೆಗಿನ 269 ಕಿ.ಮೀ ರೈಲು ಮಾರ್ಗ ₹262.12 ಕೋಟಿ ವೆಚ್ಚದಲ್ಲಿ ವಿದ್ಯುತೀಕರಣಗೊಂಡಿದೆ' ಎಂದು ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಅವರು ತಿಳಿಸಿದ್ದಾರೆ.


ಭಗವಂತ ಖೂಬಾ

'269 ಕಿ.ಮೀ ಪೈಕಿ 105 ಕಿ.ಮೀ ವಿಕಾರಾಬಾದ್‌ನಿಂದ ಭಾಲ್ಕಿ ತಾಲ್ಲೂಕಿನ ಖಾನಾಪುರದವರೆಗೆ ವಿದ್ಯುತೀಕರಣ ಪ್ರಕ್ರಿಯೆ ಪೂರ್ಣಗೊಂಡು ರೈಲು ಪ್ರಯೋಗಿಕವಾಗಿ ಸಂಚರಿಸಿದೆ. ಈ ಮಾರ್ಗದಲ್ಲಿ ಸೋಮವಾರದಿಂದ (ಜ.24) ವಾರದಲ್ಲಿ ನಾಲ್ಕು ದಿನ ಬೀದರ್-ಯಶವಂತಪುರ (16571) ಹಾಗೂ ಯಶವಂತಪುರ-ಬೀದರ್ (16572) ನಡುವೆ ರೈಲು ಸಂಚರಿಸಲಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಬೀದರ್-ಹೈದರಾಬಾದ್ (17010), ಹೈದರಾಬಾದ್- ಬರ್ ಇಂಟರ್‌ಸಿಟಿ (17009) ಹಾಗೂ ಬೀದರ್- ಮಚಲಿಪಟ್ನಂ (12750), ಮಚಲಿಪಟ್ನಂ-ಬೀದರ್ (12749) ರೈಲುಗಳು ವಿದ್ಯುತೀಕರಣ ಮಾರ್ಗದಲ್ಲಿ ಸಂಚರಿಸಲಿವೆ' ಎಂದು ಅವರು ತಿಳಿಸಿದ್ದಾರೆ.

'1934ರ ಜನವರಿ 14ರಂದು ಬೀದರ್‌ನಿಂದ ವಿಕಾರಬಾದ್‌ವರೆಗೆ ಮೊದಲ ರೈಲು ಸಂಚರಿಸಿತ್ತು. 88 ವರ್ಷಗಳ ನಂತರ ವಿದ್ಯುತೀಕರಣ ಮೂಲಕ ರೈಲು ಸಂಚರಿಸಲಿದೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

38 ಖಾಸಗಿ ಆಸ್ತಿ, 11 ಸರ್ಕಾರಿ ಆಸ್ತಿ ಹಸ್ತಾಂತರಕ್ಕೆ ಕಾಯುತ್ತಿರುವ ಬಿಎಂಆರ್‌ಸಿಎಲ್

ವಿಮಾನ ನಿಲ್ದಾಣಕ್ಕೆ ಮೆಟ್ರೊ: ಭೂಸ್ವಾಧೀನ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಬಹು ನಿರೀಕ್ಷಿತ 'ನಮ್ಮ ಮೆಟ್ರೊ' ಮಾರ್ಗದ ಕಾಮಗಾರಿಗೆ ಇನ್ನೂ 49 ಆಸ್ತಿಗಳ ಭೂಸ್ವಾಧೀನ ಪ್ರಕ್ರಿಯೆ ಬಾಕಿ ಇದೆ. 38 ಖಾಸಗಿ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಿದ್ದು, 11 ಸರ್ಕಾರಿ ಆಸ್ತಿಗಳ ಹಸ್ತಾಂತರ ಆಗಬೇಕಿದೆ.

ಕೆ.ಆರ್.ಪುರದಿಂದ ಹೆಬ್ಬಾಳ ಮಾರ್ಗದಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಲು 38 ಕಿಲೋ ಮೀಟರ್ ಉದ್ದದ ಮೆಟ್ರೊ ರೈಲು ಮಾರ್ಗ ನಿರ್ಮಾಣದ ಯೋಜನೆ ರೂಪಿಸಲಾಗಿದೆ. ಈ ಮಾರ್ಗದಲ್ಲಿ ಸರ್ಕಾರದ 60 ಆಸ್ತಿಗಳು ಹಾಗೂ ಖಾಸಗಿಯವರ 214 ಆಸ್ತಿಗಳು ಸೇರಿ ಒಟ್ಟು 274 ಆಸ್ತಿಗಳು ಸೇರಿ ಒಟ್ಟು 2.22 ಲಕ್ಷ ಚದರ ಮೀಟರ್ ಭೂಮಿ ಸ್ವಾಧೀನ ಆಗಬೇಕಿತ್ತು.

ಈ ಪೈಕಿ 225 ಆಸ್ತಿಗಳಲ್ಲಿನ 2.09 ಲಕ್ಷ ಚದರ ಮೀಟರ್ ಸ್ವಾಧೀನಕ್ಕೆ ಪಡೆದು 2021ರ ಡಿಸೆಂಬರ್‌ನಲ್ಲೇ ಎಂಜಿನಿಯರಿಂಗ್ ವಿಭಾಗಕ್ಕೆ ಹಸ್ತಾಂತರ ಮಾಡಲಾಗಿದೆ. ಉಳಿದ ಆಸ್ತಿಗಳ ಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ತಿಳಿಸಿದೆ.

ಸಿವಿಲ್ ಕಾಮಗಾರಿಯ ಪ್ರಗತಿ

ಮಾರ್ಗ	ಕಾಮಗಾರಿ ಪ್ರಗತಿ(ಶೇಕಡವಾರು)
ರೀಚ್‌-1ಎ(ಬೈಯಪ್ಪನಹಳ್ಳಿಯಿಂದ ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶ)	96
ರೀಚ್‌-1ಬಿ(ವಿಶ್ವೇಶ್ವರಯ್ಯ ಕೈಗಾರಿಕಾ ಪ್ರದೇಶದಿಂದ ವೈಟ್‌ಫೀಲ್ಡ್)	99
ರೀಚ್‌-2ಎ(ಮೈಸೂರು ರಸ್ತೆಯಿಂದ ಪಟ್ಟಣಗೆರೆ)	100
ರೀಚ್‌-2ಬಿ(ಪಟ್ಟಣಗೆರೆಯಿಂದ ಚಲ್ಲಘಟ್ಟ ಡಿಪೊ)	99
ರೀಚ್‌-3ಸಿ(ಹೆಸರಘಟ್ಟ ಕ್ರಾಸ್‌ನಿಂದ ಬಿಐಇಸಿ)	75
ರೀಚ್‌-5ಪಿ3 (ಬೊಮ್ಮನಹಳ್ಳಿಯಿಂದ ಆರ್‌.ವಿ. ರಸ್ತೆ)	76
ರೀಚ್‌-6 (ಕಾಳೇನ ಅಗ್ರಹಾರದಿಂದ ಸ್ವಾಗತ್ ಕ್ರಾಸ್ ರಸ್ತೆ)	30

ನಗರದಲ್ಲಿನ ಇನ್ನುಳಿದ ಮೆಟ್ರೊ ರೈಲು ಮಾರ್ಗ ವಿಸ್ತರಣೆ ಯೋಜನೆಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದೆ. 2,326 ಆಸ್ತಿಗಳ ಸ್ವಾಧೀನ ಮಾಡಿಕೊಳ್ಳಲಾಗಿದ್ದು, ಇನ್ನು 43 ಆಸ್ತಿಗಳ ಸ್ವಾಧೀನ ಪ್ರಕ್ರಿಯೆಯಷ್ಟೇ ಬಾಕಿ ಇದೆ.

ಶೆಟ್ಟಿಗೆರೆಯಲ್ಲಿ ಡಿಪೊಗೆ ಅಗತ್ಯ ಇರುವ 23 ಎಕರೆಯಲ್ಲಿ 18 ಎಕರೆ ಹಸ್ತಾಂತರವಾಗಿದ್ದು, 5 ಎಕರೆ ಜಾಗದ ವಿಷಯದಲ್ಲಿ ವ್ಯಾಜ್ಯ ಇರುವುದರಿಂದ ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿಯಿಂದ ಆದೇಶ ಬಾಕಿ ಇದೆ ಎಂದೂ ಬಿಎಂಆರ್‌ಸಿಎಲ್ ಅಧಿಕಾರಿಗಳು ವಿವರಿಸಿದ್ದಾರೆ.

ಕಾಳೇನ ಅಗ್ರಹಾರದಿಂದ ನಾಗವಾರ ತನಕದ ರೀಚ್‌-6 ಮಾರ್ಗದ 22 ಕಿ.ಮೀ. ಮಾರ್ಗಕ್ಕೆ ಅಗತ್ಯ ಇರುವ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. ಪಾಟರಿಟೌನ್ ನಿಲ್ದಾಣಕ್ಕೆ, ನಾಗವಾರ ಮೆಟ್ರೊ ನಿಲ್ದಾಣ, ಆರ್‌ಎಂಎಸ್ (ವೆಲ್ಲಾರ) ನಿಲ್ದಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ಅಂತಿಮಗೊಂಡಿದೆ. ಆರ್‌.ವಿ. ರಸ್ತೆಯಿಂದ ಬೊಮ್ಮಸಂದ್ರ ತನಕ 18.5 ಕಿ.ಮೀ. ವ್ಯಾಪ್ತಿಯಲ್ಲಿ ಹೆಚ್ಚುವರಿಯಾಗಿ ಅಗತ್ಯವಿರುವ 1,147 ಚದರ ಮೀಟರ್ ವಿಸ್ತೀರ್ಣ ಸ್ವಾಧೀನಕ್ಕೆ ಭೂಮೌಲ್ಯ ನಿರ್ಧಾರಣಾ ಸಮಿತಿಯ ವರದಿ ಬರಬೇಕಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ನಾಗಸಂದ್ರದಿಂದ ಬಿಐಇಸಿ (ರೀಚ್‌-3ಸಿ) ಮಾರ್ಗದಲ್ಲಿ ಜಿಂದಾಲ್ ಮತ್ತು ಪ್ರೆಸ್ಟೀಜ್ ಲೇಔಟ್ ಮೂಲಕ ಅಂಚೆಪಾಳ್ಯ ಮತ್ತು ಇತರ ಹಳ್ಳಿಗಳಿಂದ ಚಿಕ್ಕಬಿದರಕಲ್ಲು ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಹೆಚ್ಚುವರಿ ಪ್ರದೇಶದ ಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ವಜಾಗೊಳಿಸಿದೆ. ಆದ್ದರಿಂದ ಕಾಮಗಾರಿಗೆ ತೊಡಕಾಗಿದ್ದು, ಆದೇಶದ ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಅಂಕಿ-ಅಂಶಗಳು

₹6,470.81ಕೋಟಿ
ಹಂತ 2ರಲ್ಲಿ ಭೂಸ್ವಾಧೀನ ಪರಿಹಾರ ಪಾವತಿ

₹398.48ಕೋಟಿ
ಹಂತ 2ಎ ನಲ್ಲಿ ಭೂಪರಿಹಾರ ಪಾವತಿ

₹1,504.52ಕೋಟಿ
ಹಂತ 2ಬಿ ನಲ್ಲಿ ಪಾವತಿಯಾಗಿರುವ ಭೂಪರಿಹಾರ

'ಬೋಸ್ ಜೀವನ ಚರಿತ್ರೆಯ ಲಕ್ಷ ಪ್ರತಿ ವಿತರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಏಕತೆ, ಸಮಗ್ರತೆಯ ಹರಿಕಾರರಾಗಿದ್ದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜೀವನ ಚರಿತ್ರೆ 1ಲಕ್ಷ ಪ್ರತಿಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಗುವುದು' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ವಿ.ಸೋಮಣ್ಣ ಪ್ರತಿಷ್ಠಾನದ ವತಿಯಿಂದ ನಗರದಲ್ಲಿ ಭಾನುವಾರ ಏರ್ಪಡಿಸಿದ್ದ, ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ 125ನೇ ಜಯಂತಿ ಕಾರ್ಯಕ್ರಮದಲ್ಲಿ ಬೋಸ್ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

'ಸ್ವಾಮಿ ವಿವೇಕಾನಂದರ ವಿಚಾರಗಳಿಂದ ಪ್ರಭಾವಿತರಾಗಿದ್ದ ಬೋಸ್ ಅವರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ವಿಶಿಷ್ಟ ಪಾತ್ರವಹಿಸಿದ್ದರು. ಬ್ರಿಟಿಷರ ವಿರುದ್ಧದ ಹೋರಾಟಕ್ಕಾಗಿ ಜೀವನವನ್ನೇ ಸಮರ್ಪಣೆ ಮಾಡಿಕೊಂಡ ಅವರ ಆದರ್ಶ ಇಂದಿನ ಯುವಜನರಿಗೆ ಸ್ಫೂರ್ತಿಯಾಗಬೇಕು' ಎಂದರು.

'ಎರಡನೆಯ ಜಾಗತಿಕ ಮಹಾಯುದ್ಧದ ನಂತರ ಭಾರತದ ಸ್ವಾತಂತ್ರ್ಯ ಮತ್ತು ಸಮಗ್ರತೆಯ ವಿಚಾರ ಇಡೀ ಜಗತ್ತಿನ ಗಮನ ಸೆಳೆದಿತ್ತು. ದೇಶವು ಇಂದು ಬಲಿಷ್ಠವಾಗಿದ್ದರೆ, ಅದಕ್ಕೆ ಬೋಸ್ ಅವರಂತಹ ಮಹನೀಯರ ತ್ಯಾಗ ಬಲಿದಾನಗಳೇ ಕಾರಣ' ಎಂದರು. ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, 'ವೈಯಕ್ತಿಕ ಜೀವನವನ್ನು ಬದಿಗಿಟ್ಟು ದೇಶ ಸೇವೆಯನ್ನು ಆಯ್ಕೆ ಮಾಡಿಕೊಂಡಿದ್ದ ಬೋಸ್ ಇಂಡಿಯನ್ ನ್ಯಾಷನಲ್ ಆರ್ಮಿಯನ್ನು ಕಟ್ಟಿದ್ದರು' ಎಂದರು.



ನಿವೃತ್ತ ಸೈನಿಕರಾದ ಧನಂಜಯ್ ಹಾಗೂ ಕೃಷ್ಣಗೌಡ ಅವರನ್ನು ಸಚಿವ ವಿ.ಸೋಮಣ್ಣ ಅವರು ಕಾರ್ಯಕ್ರಮದಲ್ಲಿ ಸನ್ಮಾನಿಸಿದರು. (ಎಡದಿಂದ) ಪಾಲನೇತ್ರ, ನಾರಾಯಣಸ್ವಾಮಿ, ಸಿ.ಸೋಮಶೇಖರ್, ನವೀನ್ ಸೋಮಣ್ಣ, ವಿಶ್ವನಾಥ ಗೌಡ ಮತ್ತು ಶಿಲ್ಪಾ ಶ್ರೀಧರ್ ಇದ್ದಾರೆ ಪ್ರಜಾವಾಣಿ ಚಿತ್ರ

ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಪಾಲನೇತ್ರ, ಪ್ರತಿಷ್ಠಾನದ ಖಜಾಂಚಿ ನವೀನ್ ಸೋಮಣ್ಣ, ಮುಖಂಡರಾದ ನಾರಾಯಣಸ್ವಾಮಿ, ಎಂ.ಸಿ.ಬಡಾವಣೆ ಸಂಘದ ಸಿದ್ದಲಿಂಗಯ್ಯ, ಬಿಜೆಪಿಯ ಗೋವಿಂದರಾಜನಗರ ಮಂಡಲ ಅಧ್ಯಕ್ಷ ವಿಶ್ವನಾಥ ಗೌಡ, ಸ್ಥಳೀಯ ಪ್ರಮುಖರಾದ ಶಿಲ್ಪಾ ಶ್ರೀಧರ್, ಕೆ.ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ವಾಗೇಶ್, ಡಾ.ಎಸ್.ರಾಜು, ರೂಪಾ ಲಿಂಗೇಶ್ವರ್, ಪಲ್ಲವಿ, ದಾಸೇಗೌಡ, ರಾಜಪ್ಪ, ಕೊಳಚೆ ನಿರ್ಮೂಲನೆ ಮಂಡಳಿ ನಿರ್ದೇಶಕ ಕ್ರಾಂತಿ ರಾಜು ಪಾಲ್ಗೊಂಡರು.

ವ್ಯಂಗ್ಯಚಿತ್ರ ಪ್ರದರ್ಶನ 31ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ವ್ಯಂಗ್ಯಚಿತ್ರಕಾರ ಶ್ರೇಯಸ್ ನವರೆ ಅವರ 'ಫ್ರಂ ಬಿಲ್ ಟು ಬೈಡನ್' ವ್ಯಂಗ್ಯಚಿತ್ರಗಳ ಪ್ರದರ್ಶನವನ್ನು ಜನವರಿ 31ರಿಂದ ಫೆಬ್ರುವರಿ 12ರವರೆಗೆ ನಗರದ ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯಲ್ಲಿ ಆಯೋಜಿಸಿದೆ.

ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಪ್ರದರ್ಶನ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸ್ಥಳ:ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಮಿಡ್‌ಫೋರ್ಡ್ ಗಾರ್ಡನ್, ಎಂ.ಜಿ. ರಸ್ತೆ.



'ತಾಜಾ ತಾಜಾ ಕಡ್ಲೆಕಾಯಿ' ಎಂದು ಹಾಡುತ್ತಾ ಬಿಸಿ ಶೇಂಗಾ ಬೀಜ ಮಾರುತ್ತಿದ್ದ ಈ ಯುವಕ ಕಂಡು ಬಂದಿದ್ದು ನಗರದ ಬನ್ನೇರುಘಟ್ಟ ರಸ್ತೆಯಲ್ಲಿ. ತಳ್ಳುಗಾಡಿಗೆ ಅಲಂಕರಿಸಿದ್ದ ಗ್ರಾಹಕರಿಗೆ ಶೇಂಗಾ ನೀಡುವ ಪೇಪರ್ ಪೊಟ್ಟಣಗಳು ಗಮನ ಸೆಳೆದವು ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಪದವಿಯಲ್ಲಿ ಕನ್ನಡ ಅಧ್ಯಯನ: ಸುತ್ತೋಲೆಗೆ ಆಕ್ಷೇಪ

ಬೆಂಗಳೂರು: ಹೈಕೋರ್ಟ್‌ನ ಮಧ್ಯಂತರ ಆದೇಶದ ಅನ್ವಯ ಪದವಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಕನ್ನಡ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ಒತ್ತಡ ಹೇರಬಾರದು ಎಂದು ಉನ್ನತ ಶಿಕ್ಷಣ ಇಲಾಖೆ ಆಯುಕ್ತರು ಹೊರಡಿಸಿರುವ ಸುತ್ತೋಲೆಯು ಆಕ್ಷೇಪಾರ್ಹವಾಗಿದೆ ಎಂದು ಕರ್ನಾಟಕ ನವನಿರ್ಮಾಣ ಸೇನೆ ತಿಳಿಸಿದೆ.

'ರಾಜ್ಯ ಎಲ್ಲ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಗೆ ಆಯುಕ್ತರು ಈ ಬಗ್ಗೆ ಹೊರಡಿಸಿರುವ ಆದೇಶವನ್ನು ಖಂಡಿಸುತ್ತೇವೆ' ಎಂದು ರಾಜ್ಯ ಘಟಕದ ಅಧ್ಯಕ್ಷ ಭೀಮಾಶಂಕರ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

'ಹೈಕೋರ್ಟ್‌ನ ಮಧ್ಯಂತರ ಆದೇಶ ಭಾಷಾವಾರು ಪ್ರಾಂತ್ಯಗಳ ರಚನೆಯ ಆಶಯಕ್ಕೆ ವಿರುದ್ಧವಾಗಿದೆ. ಭಾಷೆಯ ಕಲಿಕೆಯ ನಿರ್ಧಾರವನ್ನು ನ್ಯಾಯಾಲಯಗಳೇ ಮಾಡುವುದಾದರೆ ಸರ್ಕಾರಗಳು ಏಕೆ ಬೇಕು? ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆ ತರುವ ಇಂತಹ ತೀರ್ಪುಗಳು ಒಕ್ಕೂಟ ವ್ಯವಸ್ಥೆಗೆ ಮಾರಕವಾಗಿದೆ' ಎಂದು ತಿಳಿಸಿದ್ದಾರೆ.

'ನ್ಯಾಯಾಲಯಗಳು ಭಾಷಾ ನೀತಿಯಂತಹ ಸೂಕ್ಷ್ಮ ವಿಚಾರಗಳಲ್ಲಿ ಪ್ರಾದೇಶಿಕ ಭಾವನೆಗಳನ್ನು ಗೌರವಿಸಬೇಕು. ಸರ್ಕಾರವು ಸಹ ಕನ್ನಡ ಭಾಷೆಯ ಹಿತಾಸಕ್ತಿ ಕಾಪಾಡಲು ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಸತ್ತ ಕೊಂಬೆಯಿಂದ ಹೊಸ ಜಾತಿಯ ಹುಳ ಸಂಗ್ರಹ


ಪಶ್ಚಿಮಘಟ್ಟದಲ್ಲಿ ಹೊಸ ಪ್ರಭೇದ ಗೆದ್ದಲು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧಕರು ಪಶ್ಚಿಮ ಘಟ್ಟದಲ್ಲಿ ಹೊಸ ಪ್ರಭೇದದ ಗೆದ್ದಲನ್ನು ಗುರುತಿಸಿದ್ದಾರೆ.

ಡೆಹರಾಡೂನ್‌ನ ಅರಣ್ಯ ಸಂಶೋಧನಾ ಸಂಸ್ಥೆಯ ಸಹಯೋಗದೊಂದಿಗೆ ಗೆದ್ದಲನ್ನು ಪತ್ತೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಉಡುಪಿ ಜಿಲ್ಲೆಯ ಹೆಬ್ರಿ ಬಳಿಯ ಮರದ ಸತ್ತ ಕೊಂಬೆಯಿಂದ ಈ ಹೊಸ ಜಾತಿಯ ಹುಳಗಳನ್ನು ಸಂಗ್ರಹಿಸಲಾಗಿದೆ. ಗೆದ್ದಲುಗಳು ಸಾಮಾನ್ಯವಾಗಿ ಬೆಳೆಗಳಿಗೆ ಮತ್ತು ಮನೆಗಳಲ್ಲಿ ಮರದಿಂದ ಮಾಡಿದ ಪೀಠೋಪಕರಣಗಳಿಗೆ ಹಾನಿ ಮಾಡುವ ಸ್ವಭಾವ ಹೊಂದಿವೆ. ಇವು ಮರಗಳಲ್ಲಿ ಹೇರಳವಾಗಿರುವ 'ಸೆಲ್ಯುಲೋಸ್' ಸೇವಿಸಿ ಜೀವಿಸುತ್ತವೆ.



ಗೆದ್ದಲು ಕೀಟಗಳು

ಶಿವಮೊಗ್ಗದ ಕೃಷಿ ಕಾಲೇಜಿನ ಕೀಟಶಾಸ್ತ್ರ ವಿಭಾಗದ ಸಂಶೋಧನಾ ತಂಡದ ಕೀಟ ವರ್ಗೀಕರಣ ತಜ್ಞ ಡಾ.ಸಿ.ಎಂ. ಕಲ್ಲೇಶ್ವರ ಸ್ವಾಮಿ ಮತ್ತು ಅವರ ಸಂಶೋಧನಾ ವಿದ್ಯಾರ್ಥಿ ಡಾ.ರಂಜಿತ್ ಅವರು ಮಾದರಿಯನ್ನು ಸಂಗ್ರಹಿಸಿದ್ದರು. ಈ ಹಿಂದೆ ವರದಿ ಮಾಡಲಾದ 'ನಿಯೋಟರ್ಮ್ಸ್' ಜಾತಿಯ ಗೆದ್ದಲುಗಳೊಂದಿಗೆ ವ್ಯತ್ಯಾಸವನ್ನು ಹೋಲಿಸಿ ಈ ಹೊಸ ಜಾತಿ ಗೆದ್ದಲನ್ನು ವೈಜ್ಞಾನಿಕ ಪ್ರಪಂಚಕ್ಕೆ ಪರಿಚಯಿಸಿದ್ದಾರೆ ಎಂದು ಪ್ರಕಟಣೆ ಹೇಳಿದೆ.

ಈ ಹೊಸ ಕೀಟಕ್ಕೆ 'ನಿಯೋಟರ್ಮ್ಸ್ ವಿರಕ್ತಮಠಿ' ಎಂದು ಹೆಸರಿಡಲಾಗಿದೆ. ರಾಜ್ಯದ ಖ್ಯಾತ ಕೀಟ ತಜ್ಞ ಡಾ. ಸಿ.ಎ. ವಿರಕ್ತಮಠ ಅವರ ಹೆಸರನ್ನು ಇದಕ್ಕೆ ಇರಿಸಲಾಗಿದೆ.ಈ ಅಧ್ಯಯನವನ್ನು ಅಂತಾರಾಷ್ಟ್ರೀಯ ಜರ್ನಲ್ 'ಓರಿಯಂಟಲ್ ಇನ್ಸೆಕ್ಟ್ಸ್'ನಲ್ಲಿ ಪ್ರಕಟಿಸಲಾಗಿದೆ. ಸಂಶೋಧನೆಗೆ ಧನ ಸಹಾಯವನ್ನು ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ನೀಡಿದೆ.

‘ಒಕ್ಕಲಿಗರನ್ನು ಎಚ್‌ಡಿಕೆ ಗುತ್ತಿಗೆಗೆ ಪಡೆದಿದ್ದಾರೆಯೇ?’

ಮೈಸೂರು: ‘ಒಕ್ಕಲಿಗ ಸಮುದಾಯವನ್ನು ಎಚ್‌.ಡಿ.ಕುಮಾರಸ್ವಾಮಿ ಗುತ್ತಿಗೆಗೆ ಪಡೆದಿದ್ದಾರೆದ್ದಾರೆಯೇ? ಒಕ್ಕಲಿಗರಲ್ಲಿ ಬೇರೆ ಮುಖಂಡರು ಬೆಳೆಯಲು ಅವಕಾಶವಿಲ್ಲವೇ?’ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಹರಿಹಾಯ್ದರು.

‘ಸಿದ್ದರಾಮಯ್ಯ ವಿರುದ್ಧ ಮಾಡುತ್ತಿರುವ ಟ್ವೀಟ್‌ಗಳನ್ನು ನೋಡಿದರೆ, ಅವರಿಗೆ ಮಾನಸಿಕ ಸಮತೋಲನ ತಪ್ಪಿದೆ ಎಂದೆನಿಸುತ್ತದೆ. ಅವರು ಕೀಳುಮಟ್ಟದ ಭಾಷೆ ಬಳಸುತ್ತಿರುವುದು ಸರಿಯಲ್ಲ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿರುಗೇಟು ನೀಡಿದರು.

‘ಕುಮಾರಸ್ವಾಮಿ ಅವರೇ, ನಿಮ್ಮನ್ನು ನೀವು ಒಕ್ಕಲಿಗರ ಚಾಂಪಿಯನ್ ಅಂದುಕೊಂಡಿದ್ದರೆ ಆ ಭಾವನೆಯಿಂದ ಹೊರಬನ್ನಿ. ನಾವು ಆಪರೇಷನ್ ಹಸ್ತ ಮಾಡುತ್ತಿಲ್ಲ. ಒಕ್ಕಲಿಗ ಸಮುದಾಯದ ಮುಖಂಡರೇ ನಿಮ್ಮ ಪಕ್ಷ ತೊರೆದು ಬರುತ್ತಿದ್ದಾರೆ’ ಎಂದರು.

‘ಬಿಎಸ್‌ವೈ ವಿರುದ್ಧ ತಂಡ ಕಟ್ಟಿದರೆ ತಂದೆ-ತಾಯಿಗೆ ದ್ರೋಹ ಬಗೆದಂತೆ’

ಶಿವಮೊಗ್ಗ: ‘ಬಿಜೆಪಿಯಲ್ಲಿ ಯಡಿಯೂರಪ್ಪ ಅವರದೊಂದು, ಈಶ್ವರಪ್ಪದೊಂದು ಬಣವಿದೆ ಎಂಬ ಚರ್ಚೆ ಎಲ್ಲೆಡೆ ನಡೆಯುತ್ತಿದೆ. ಯಡಿಯೂರಪ್ಪ ವಿರುದ್ಧ ತಂಡ ಕಟ್ಟಿದರೆ ಹೆತ್ತ ತಂದೆ-ತಾಯಿಗೆ ದ್ರೋಹ ಬಗೆದಂತೆ. ಯಾವುದೇ ಕಾರಣಕ್ಕೂ ಯಡಿಯೂರಪ್ಪ ಅವರ ವಿರುದ್ಧ ಕೆಲಸ ಮಾಡಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.


ಕೆ.ಎಸ್‌.ಈಶ್ವರಪ್ಪ

ಇಲ್ಲಿನ ಸೂಡಾ ಕಚೇರಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ‘ನಾನು ರಾಜಕೀಯದಲ್ಲಿ ಇಷ್ಟೊಂದು ಬೆಳೆಯಲು ಒಂದು ಕಡೆ ಆರ್‌ಎಸ್‌ಎಸ್, ಇನ್ನೊಂದು ಕಡೆ ಬಿ.ಎಸ್. ಯಡಿಯೂರಪ್ಪ ಕಾರಣ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಎಂದಿಗೂ ಅವರ ವಿರುದ್ಧ ಕೆಲಸ ಮಾಡಿಲ್ಲ’ ಎಂದರು.

ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿ, ‘ಎನ್‌.ಜೆ. ನಾಗರಾಜ್ ಸೂಡಾ ಅಧ್ಯಕ್ಷರಾಗಿದ್ದಕ್ಕೆ ಯಡಿಯೂರಪ್ಪ ಅವರ ಬೆಂಬಲಿಗ ಜ್ಯೋತಿ ಪ್ರಕಾಶ್‌ಗೆ ಹಿನ್ನಡೆ, ಈಶ್ವರಪ್ಪ ಅವರ ಬೆಂಬಲಿಗ ನಾಗರಾಜ್‌ಗೆ ಜಯ ಎಂದು ಮಾಧ್ಯಮದಲ್ಲಿ ಬಿಂಬಿಸಲಾಗಿದೆ. ಇದು ಯಾರ ಹಿನ್ನಡೆ, ಮುನ್ನಡೆಯೂ ಅಲ್ಲ. ಇಲ್ಲಿ ಎಲ್ಲರೂ ಕಾರ್ಯಕರ್ತರೆ. ಸಂಘಟನೆಗಾಗಿ ಕೆಲಸ ಮಾಡಿದ ನಾಗರಾಜ್ ಅವರಿಗೆ ಒಪ್ಪಂದದಂತೆ ಅಧ್ಯಕ್ಷ ಸ್ಥಾನ ದೊರೆತಿದೆ’ ಎಂದರು.

‘ಅರ್ಕಾವತಿ ಆರ್ತನಾದಕ್ಕೆ ಯಾರು ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐದು ವರ್ಷ ಮುಖ್ಯಮಂತ್ರಿಯಾಗಿದ್ದರೂ ಯಾವುದೇ ಕಮಿಷನ್ ಪಡೆದಿಲ್ಲ, ನಾನು ಶುದ್ಧಹಸ್ತ ಎಂದು ಸಿದ್ದರಾಮಯ್ಯ ಹೇಳಿಕೊಂಡಿದ್ದಾರೆ. ಹಾಗಿದ್ದರೆ ಈಗಲೂ ಕೇಳಿಸುತ್ತಿರುವ ಅರ್ಕಾವತಿ ಆರ್ತನಾದಕ್ಕೆ ಯಾರು ಕಾರಣ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.


ಕುಮಾರಸ್ವಾಮಿ

ಭಾನುವಾರವೂ ಸರಣಿ ಟ್ವೀಟ್ ಮೂಲಕ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿರುವ ಅವರು, ‘ಅರ್ಕಾವತಿಯ ಸತ್ಯದ ಕತೆ ಬಿಚ್ಚಿಟ್ಟರೆ ಸಿದ್ಧಹಸ್ತರು ಮುಖವನ್ನು ಎಲ್ಲಿಟ್ಟುಕೊಳ್ಳುತ್ತಾರೆ? ದೇವರಾಜ ಅರಸು ನಂತರ ನಾನೇ ಐದು ವರ್ಷ ಮುಖ್ಯಮಂತ್ರಿ ಆಗಿದ್ದವನು ಎಂದು ಹೇಳಿಕೊಳ್ಳುವ ಅವರ ಪಾಡು ಏನಾಗಬಹುದು? ಐದು ವರ್ಷದ ಮುಖ್ಯಮಂತ್ರಿಯ ಪ್ರಭಾವಳಿಯ ಕತೆ ಏನು’ ಎಂದು ಕೇಳಿದ್ದಾರೆ.

‘ಸ್ವಯಂಘೋಷಿತ ಸಂವಿಧಾನ ಪಂಡಿತ ಸಿದ್ದರಾಮಯ್ಯ ನಮ್ಮ ಪಕ್ಷ ಮತ್ತು ನಮ್ಮ ಕುರಿತು ಲಘುವಾಗಿ ಮಾತನಾಡಿದ್ದಕ್ಕೆ ಉತ್ತರ ಕೊಟ್ಟಿದ್ದೇನೆ. ಆಡಿದ ಮಾತನ್ನು ದಕ್ಕಿಸಿಕೊಳ್ಳುವ ಯೋಗ್ಯತೆ ಅವರಿಗಿಲ್ಲ. ಪ್ರಜಾಪ್ರಭುತ್ವದಲ್ಲಿ ಒಂದು ಜಿಲ್ಲೆಯಿಂದ ಪಕ್ಷವೊಂದನ್ನು ಓಡಿಸಿ ಎನ್ನುವುದು ಯಾವ ಸಂಸ್ಕೃತಿ’ ಎಂದು ಕುಮಾರಸ್ವಾಮಿ ಪ್ರಶ್ನೆ ಮಾಡಿದ್ದಾರೆ.

‘ಕುಮಾರಸ್ವಾಮಿಗೆ ನನ್ನನ್ನು ಕಂಡರೆ ಭಯ ಎಂದು ಹೇಳುವ ಸಿದ್ದರಾಮಯ್ಯ, ಪದೇ ಪದೇ ನಮ್ಮ ಬಗ್ಗೆಯೇ ಮಾತನಾಡುತ್ತಾರೆ. ಇದನ್ನು ನೋಡಿದರೆ ಯಾರ ಬಗ್ಗೆ ಯಾರಿಗೆ ಭಯ ಇದೆ ಎನ್ನುವುದು ಗೊತ್ತಾಗುತ್ತದೆ. ನಾನು, ನನ್ನ ತಂದೆ, ಅಣ್ಣ ಚುನಾವಣೆಯಲ್ಲಿ ಸೋತಿರುವುದು ನಿಜ. ನಾವು ಅಧೀರರಾಗಿಲ್ಲ, ಸೋತಿದ್ದಕ್ಕೆ ಕಣ್ಣೀರು ಹಾಕಿಲ್ಲ. ಸಿದ್ಧಹಸ್ತರ ಕಣ್ಣೀರ ಕೋಡಿ ಕಂಡಿರುವ ದೇವೇಗೌಡರು ಇನ್ನೂ ನಮ್ಮ ಜತೆ ಇದ್ದಾರೆ’ ಎಂದು ಹೇಳಿದ್ದಾರೆ.

ನಂದಿಯಲ್ಲಿ ವಾರಾಂತ್ಯದ ಕರ್ಫ್ಯೂ; ಪ್ರವಾಸಿಗರು ವಾಪಸ್

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ರಾಜ್ಯದಾದ್ಯಂತ ವಾರಾಂತ್ಯದ ಕರ್ಫ್ಯೂ ರದ್ದಾಗಿದೆ. ಆದರೆ ಜಿಲ್ಲೆಯ ನಂದಿಗಿರಿಧಾಮದಲ್ಲಿ ನಿಷೇಧಾಜ್ಞೆ ಮುಂದುವರಿದಿದೆ. ಕೋವಿಡ್ ಸೋಂಕು ಹೆಚ್ಚುವ ಸಂಭವಿದೆ ಎಂದು ಎರಡು ತಿಂಗಳ ಹಿಂದೆಯೇ ಶುಕ್ರವಾರ ಸಂಜೆ 6ರಿಂದ ಸೋಮವಾರ ಬೆಳಿಗ್ಗೆ 6ರವರೆಗೆ ನಂದಿಗಿರಿಧಾಮಕ್ಕೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ನಂತರ ರಾಜ್ಯದ ಎಲ್ಲೆಡೆಯೂ ವಾರಾಂತ್ಯದ ನಿಷೇಧಾಜ್ಞೆ ಜಾರಿಯಾಯಿತು. ಈಗ ಈ ನಿಷೇಧಾಜ್ಞೆ ತೆರವಾಗಿದೆ. ಆದರೆ ಕೋವಿಡ್ ಭಯದ ಕಾರಣ ಗಿರಿಧಾಮಕ್ಕೆ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ನೀಡಿಲ್ಲ. ಭಾನುವಾರ ಗಿರಿಧಾಮಕ್ಕೆ ಬಂದ ಪ್ರವಾಸಿಗರನ್ನು ಪೊಲೀಸರು ವಾಪಸ್ ಕಳುಹಿಸಿದರು.

ಪ್ರವೇಶದಲ್ಲಿಯೇ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು.

‘ಸಾಮಾನ್ಯವಾಗಿ ಇಲ್ಲಿಗೆ ಪ್ರವಾಸಕ್ಕೆ ಬರುತ್ತೇವೆ. ವಾರಾಂತ್ಯದ ಕರ್ಫ್ಯೂ ಇಲ್ಲ ಎಂದು ತಿಳಿದು ಇಲ್ಲಿಗೆ ಬಂದಿದ್ದೆವು. ಆದರೆ ಇಲ್ಲಿ ನಿರ್ಬಂಧವಿದೆ. ಬೇಸರವಾಯಿತು. ಆದಷ್ಟು ಬೇಗ ಕರ್ಫ್ಯೂ ತೆರವಾಗಿ ನಂದಿ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು’ ಎಂದು ಬೆಂಗಳೂರು ನಿವಾಸಿ ಸುಶಾಂತ್ ತಿಳಿಸಿದರು.

ಸಿಗದ ನ್ಯಾಯ

ಕೋಟ(ಬ್ರಹ್ಮಾವರ): ‘ಕೋಟತಟ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊರಗ ಕಾಲೊನಿಯಲ್ಲಿ ಕಳೆದ ಡಿಸೆಂಬರ್ 27ರಂದು ನಡೆದ ಪೊಲೀಸ್ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಗೃಹ ಸಚಿವರು ಹಾಗೂ ಸಮಾಜ ಕಲ್ಯಾಣ ಸಚಿವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ, ಸಂತ್ರಸ್ತರಿಗೆ ನ್ಯಾಯ ನೀಡಿಲ್ಲ’ ಎಂದು ಕೊರಗ ಸಮುದಾಯದ ಮುಖಂಡರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕೋಟದಲ್ಲಿ ಭಾನುವಾರ ಸಭೆ ನಡೆಸಿದ ಕೊರಗ ಸಮುದಾಯದ ಮುಖಂಡರು, ‘ಅನ್ಯಾಯದ ವಿರುದ್ಧ 10 ದಿನದೊಳಗೆ ಕ್ರಮ ತೆಗದುಕೊಳ್ಳುವುದಾಗಿ ಸಚಿವರು ತಿಳಿಸಿದ್ದರು. ತಿಂಗಳಾಗುತ್ತಾ ಬಂದರೂ ನ್ಯಾಯ ದೊರಕಿಸಿಲ್ಲ. ಇದೀಗ ಹೋರಾಟ ಅನಿವಾರ್ಯವಾಗಿದೆ’ ಎಂದು ತಿಳಿಸಿದರು.

ಬಿಬಿಎಂಪಿ: ಜನವರಿಯಲ್ಲಿ ಇದುವರೆಗೆ 3.21 ಲಕ್ಷ ಕೋವಿಡ್ ಪ್ರಕರಣ • ಒಮೈಕ್ರಾನ್ ಸೋಂಕಿತರ ಪ್ರಮಾಣವೇ ಜಾಸ್ತಿ

ಜೀನೋಮ್ ಸೀಕ್ವೆನ್ಸಿಂಗ್: ಮಾದರಿ ಕಳುಹಿಸುವಿಕೆ ಇಳಿಕೆ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಜನವರಿ ತಿಂಗಳಲ್ಲಿ ಇದುವರೆಗೆ 3,21,232 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಇವುಗಳಲ್ಲಿ ಒಮೈಕ್ರಾನ್ ಸೋಂಕಿನಿಂದ ಕಾಣಿಸಿಕೊಂಡಿರುವ ಪ್ರಕರಣಗಳೇ ಜಾಸ್ತಿ ಎನ್ನುತ್ತಾರೆ ಬಿಬಿಎಂಪಿ ಅಧಿಕಾರಿಗಳು.

ಇತ್ತೀಚೆಗೆ ಕಾಣಿಸಿಕೊಂಡ ಹೆಚ್ಚಿನ ಪ್ರಕರಣಗಳು ಒಮೈಕ್ರಾನ್ ಸೋಂಕಿನಿಂದಲೇ ಹರಡುತ್ತಿವೆ ಎಂಬ ಕಾರಣಕ್ಕೆ ಬಿಬಿಎಂಪಿಯು ಸೋಂಕಿತರ ಗಂಟಲ ದ್ರವದ ಮಾದರಿಯನ್ನು ವೈರಾಣುವಿನ ವಂಶವಾಹಿಗಳ ಸಂರಚನೆಯ ವಿಶ್ಲೇಷಣೆಗಾಗಿ (ಜೀನೋಮ್ ಸೀಕ್ವೆನ್ಸಿಂಗ್‌ಗೆ) ಕಳುಹಿಸುವ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಿದೆ.

ಸೀಮಿತ ಸಂಖ್ಯೆಯ ಗಂಟಲ ದ್ರವ ಮಾದರಿಗಳನ್ನು ಮಾತ್ರ ಜೀನೋಮ್ ಸೀಕ್ವೆನ್ಸಿಂಗ್‌ಗೆ ಒಳಪಡಿಸುತ್ತಿರುವುದರಿಂದ ನಗರದಲ್ಲಿ ಪತ್ತೆಯಾಗುತ್ತಿರುವ ಒಮೈಕ್ರಾನ್ ಸೋಂಕಿತರ ನಿಖರ ಸಂಖ್ಯೆ ಎಷ್ಟು ಎಂಬುದರ ಖಚಿತ ಮಾಹಿತಿ ಬಿಬಿಎಂಪಿ ಬಳಿಯೂ ಲಭ್ಯವಿಲ್ಲ.

ಕೊರೊನಾ ವೈರಾಣುವಿನ ಜೀನೋಮ್ ಸೀಕ್ವೆನ್ಸಿಂಗ್ ಫಲಿತಾಂಶ ಪಡೆಯುವುದಕ್ಕೆ ಒಂದು ವಾರಕ್ಕೂ ಅಧಿಕ ಸಮಯ ತಗಲುತ್ತಿತ್ತು. ಈ ಪರೀಕ್ಷೆ ನಡೆಸುವ ಪ್ರಯೋಗಾಲಯಗಳ ಸಂಖ್ಯೆ ಹೆಚ್ಚಿಸಿ, ಫಲಿತಾಂಶ ಕೈಸೇರಲು ತಗಲುವ ಅವಧಿಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಬಿಬಿಎಂಪಿ ಪ್ರಯತ್ನ ನಡೆಸಿತ್ತು. ಎರಡೇ ದಿನಗಳಲ್ಲಿ ಫಲಿತಾಂಶ ಪಡೆಯುವ ನಿಟ್ಟಿನಲ್ಲೂ ಪ್ರಯತ್ನ ಸಾಗಿತ್ತು. ಆದರೆ, ನಗರದಾದ್ಯಂತ ಒಮೈಕ್ರಾನ್ ಸೋಂಕಿನ ಪ್ರಮಾಣ ದಿಢೀರ್ ಹೆಚ್ಚಳವಾದ ಬಳಿಕ ಪಾಲಿಕೆಯು ಈ ಪ್ರಯತ್ನವನ್ನು ಕೈಬಿಟ್ಟಿದೆ.

'ತಿಂಗಳ ಹಿಂದೆ; ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚಳವಾಗಲು ಶುರುವಾದಾಗ ಸೋಂಕು ದೃಢಪಟ್ಟ ಬಹುತೇಕ ಎಲ್ಲರ ಗಂಟಲ ದ್ರವದ ಮಾದರಿಯನ್ನು ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುತ್ತಿದ್ದೆವು. ಈಗ ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುವ ಮಾದರಿಗಳ ಪ್ರಮಾಣವನ್ನು ರಾಜ್ಯ ಸರ್ಕಾರದ ಸೂಚನೆ ಮೇರೆಗೆ ಕಡಿಮೆ ಮಾಡಿದ್ದೇವೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 90ಕ್ಕೂ ಅಧಿಕ ಪ್ರಕರಣಗಳು ಒಮೈಕ್ರಾನ್ ಸೋಂಕಿನಿಂದಲೇ ಕಾಣಿಸಿಕೊಳ್ಳುತ್ತಿರುವುದರಿಂದ ಅದನ್ನು ಮತ್ತೆ ದೃಢಪಡಿಸಿಕೊಳ್ಳುವ ಅಗತ್ಯ ಇಲ್ಲ. ಹಾಗಾಗಿ ಸೀಮಿತ ಸಂಖ್ಯೆಯ ಗಂಟಲ ದ್ರವಗಳ ಮಾದರಿಗಳನ್ನಷ್ಟೇ ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸಲಾಗುತ್ತಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಆಸ್ಪತ್ರೆಗಳ ತೀವ್ರ ನಿಗಾ ಘಟಕಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್ ರೋಗಿಗಳು ಹಾಗೂ ಅನ್ಯ ಕಾಯಿಲೆಗಳನ್ನು ಹೊಂದಿರುವ ಸೋಂಕಿತರ ಗಂಟಲ ದ್ರವದ ಮಾದರಿಯನ್ನು ಮಾತ್ರ ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸಲಾಗುತ್ತಿದೆ' ಎಂದು ಬಿಬಿಎಂಪಿಯ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ.ಬಾಲಸುಂದರ್ ತಿಳಿಸಿದರು.

ಕೋವಿಡ್ ದೃಢಪಟ್ಟವರ ಮಾದರಿಗಳನ್ನು ನಗರದ ನಿಮ್ಹಾನ್ಸ್‌ನ ಪ್ರಯೋಗಾಲಯ ಹಾಗೂ ರಾಷ್ಟ್ರೀಯ ಜೀವವಿಜ್ಞಾನಗಳ ಕೇಂದ್ರದ (ಎನ್‌ಸಿಬಿಎಸ್) ಪ್ರಯೋಗಾಲಯಗಳಲ್ಲಿ ಜೀನೋಮ್ ಸೀಕ್ವೆನ್ಸಿಂಗ್‌ಗೆ ಒಳಪಡಿಸಲಾಗುತ್ತಿದೆ. ಈ ಒಂದು ಸುತ್ತಿನಲ್ಲಿ 250ರಿಂದ 300 ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ.

'ಒಮೈಕ್ರಾನ್ ಸೋಂಕು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗುತ್ತಿದ್ದರೂ ಕೋವಿಡ್ ದೃಢಪಟ್ಟವರ ಗಂಟಲ ದ್ರವಗಳ ಮಾದರಿಗಳನ್ನು ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುವುದನ್ನು ಸಂಪೂರ್ಣ ನಿಲ್ಲಿಸಲಾಗದು. ಈ ವಿಶ್ಲೇಷಣೆ ನಡೆಸುವುದರಿಂದ ವೈರಾಣುವಿನ ರೂಪಾಂತರಿಗಳ ಪತ್ತೆ ಸಾಧ್ಯವಾಗುತ್ತದೆ. ಅವುಗಳ ಸಂರಚನೆಯಲ್ಲಿ ಆಗುವ ಬದಲಾವಣೆಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ' ಎಂದು ತ್ರಿಲೋಕಚಂದ್ರ ಅವರು ಮಾಹಿತಿ ನೀಡಿದರು.



ವಾರಾಂತ್ಯ ಕರ್ಫ್ಯೂ ತೆರವುಗೊಂಡಿದ್ದರಿಂದ ನಗರದ ಕೆ.ಆರ್‌.ಮಾರುಕಟ್ಟೆಯಲ್ಲಿ ಕೆಲ ವ್ಯಾಪಾರಿಗಳು ಹಣ್ಣು ಮತ್ತು ತರಕಾರಿ ಮಾರಾಟ ಮಾಡುತ್ತಿದ್ದ ದೃಶ್ಯ ಭಾನುವಾರ ಕಂಡುಬಂತು – ಪ್ರಜಾವಾಣಿ ಚಿತ್ರ

ಬೆಳ್ಳಂದೂರು: ನಿತ್ಯ 650ಕ್ಕೂ ಹೆಚ್ಚು ಹೊಸ ಪ್ರಕರಣ

ಬೆಳ್ಳಂದೂರು ವಾರ್ಡ್‌ನಲ್ಲಿ ಕೊರೊನಾ ಸೋಂಕು ಪತ್ತೆ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಇಲ್ಲಿ ಪ್ರಕಾರ ನಿತ್ಯ ಸರಾಸರಿ 650ಕ್ಕೂ ಅಧಿಕ ಹೊಸ ಪ್ರಕರಣಗಳು ಕಾಣಿಸಿಕೊಳ್ಳುತ್ತಿವೆ.

ಪಾಲಿಕೆಯ 10ಕ್ಕೂ ಅಧಿಕ ವಾರ್ಡ್‌ಗಳಲ್ಲಿ ನಿತ್ಯ ಸರಾಸರಿ 250ಕ್ಕೂ ಅಧಿಕ ಹೊಸ ಪ್ರಕರಣಗಳು, ಎಂಟು ವಾರ್ಡ್‌ಗಳಲ್ಲಿ ನಿತ್ಯ 300ಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗುತ್ತಿವೆ.

1,252 ಮಂದಿ ಆಸ್ಪತ್ರೆಗೆ ದಾಖಲು

ಜನವರಿ ತಿಂಗಳಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಇದುವರೆಗೆ 3.21 ಲಕ್ಷ ಮಂದಿ ಕೊರೊನಾ ಸೋಂಕಿತರಾಗಿದ್ದರೂ ಆಸ್ಪತ್ರೆಗೆ ದಾಖಲಾದವರ ಪ್ರಮಾಣ ತೀರಾ ಕಡಿಮೆ ಇದೆ. 23 ದಿನಗಳಲ್ಲಿ 1,252 ಮಂದಿ ಮಾತ್ರ ಸರ್ಕಾರಿ ಕೋಟಾ ಅಡಿ ಚಿಕಿತ್ಸೆ ಪಡೆಯಲು ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ ಎಂದು ಬಿಬಿಎಂಪಿ ಅಂಕಿ ಅಂಶಗಳಲ್ಲಿ ಹೇಳಲಾಗಿದೆ.

'ಓಮೈಕ್ರಾನ್ ಸೋಂಕು ಕಾಣಿಸಿಕೊಂಡ ಹೆಚ್ಚಿನವರು ಬೇಗನೇ ಗುಣಮುಖರಾಗುತ್ತಿದ್ದಾರೆ. ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ತೀರಾ ಕಡಿಮೆ ಇದೆ. ಹಾಗಾಗಿ ಜನತೆ ಆತಂಕ ಪಡುವ ಅಗತ್ಯ ಇಲ್ಲ. ಆದರೂ, ನಮ್ಮ ಸನ್ನದ್ಧತೆಯನ್ನು ಮುಂದುವರಿಸಿದ್ದೇವೆ' ಎಂದು ಡಾ.ತ್ರಿಲೋಕಚಂದ್ರ ತಿಳಿಸಿದರು.

ಇಬ್ಬರು ಪ್ರಯಾಣಿಕರಲ್ಲಿ ಕೋವಿಡ್ ದೃಢ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭಾನುವಾರ ಬಂದ ಇಬ್ಬರು ವಿದೇಶಿ ಪ್ರಯಾಣಿಕರಲ್ಲಿ ಕೋವಿಡ್ ಸೋಂಕು ಇರುವುದು ದೃಢಪಟ್ಟಿದೆ.

ಇಟಲಿ ಮೂಲದ 43 ವರ್ಷದ ಮಹಿಳೆ ಹಾಗೂ ಲಂಡನ್ ಮೂಲದ 52 ವರ್ಷದ ಪುರುಷ ಪ್ರಯಾಣಿಕರಲ್ಲಿ ಸೋಂಕು ಇರುವುದು ಪತ್ತೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

15,85,657 ▲ ಒಟ್ಟು ಸೋಂಕಿತರು (15,59,358 ನಿನ್ನೆಯ ವಿವರ)

2,31,833 ▲	13,37,325 ▲	16,498 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ


ಹೊಸ ಪ್ರಕರಣ	26,299 ▲
ಗುಣಮುಖ	12,787 ▲
ಸಾವು	08 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ಹೊಸ ಪ್ರಕರಣ ದೈನಂದಿನ ಸರಾಸರಿ

(7 ದಿನಗಳ ಸರಾಸರಿ– ವಾರ್ಡ್‌ವಾರು ವಿವರ)

ವಾರ್ಡ್	ದೈನಂದಿನ ಸರಾಸರಿ
ಬೆಳ್ಳಂದೂರು	651
ಹೊಸ ತಿಪ್ಪಸಂದ್ರ	431
ಹೊರಮಾವು	367
ಬೇಗೂರು	355
ಎಚ್‌ಎಸ್‌ಆರ್ ಬಡಾವಣೆ	350
ದೊಡ್ಡ ನೆಕ್ಕುಂದಿ	335
ವರ್ತೂರು	318
ಕೋರಮಂಗಲ	300
ಹಗದೂರು	287
ಆರ್‌.ಆರ್‌.ನಗರ	261



ಸುದ್ದಿ 2 ನಿಮಿಷ

ವಾಹನ ಕದ್ದು, ಸಂಬಂಧಿಕರಿಗೆ ಉಡುಗೊರೆ

ಬೆಂಗಳೂರು: ನಗರದಲ್ಲಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿದ್ದ ಆರೋಪದಡಿ ಭರತ್ (32) ಎಂಬಾತನನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಭರತ್, ನಕಲಿ ಕೀ ಬಳಸಿ ಕೃತ್ಯ ಎಸಗುತ್ತಿದ್ದ. ಈತನಿಂದ ಸದ್ಯ 7 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ವಾಹನಗಳನ್ನು ಆರೋಪಿ ಗುರುತಿಸುತ್ತಿದ್ದ. ವಾಹನದ ನೋಂದಣಿ ಸಂಖ್ಯೆ ಮೇಲೆ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಇವೆಯಾ? ಎಂಬುದನ್ನು ಆನ್‌ಲೈನ್ ಮೂಲಕ ಪರೀಕ್ಷಿಸುತ್ತಿದ್ದ. ದಂಡವಿಲ್ಲದ ವಾಹನಗಳನ್ನು ಮಾತ್ರ ಕಳ್ಳತನ ಮಾಡುತ್ತಿದ್ದ. ಕದ್ದ ವಾಹನಗಳನ್ನು ಆರೋಪಿ, ಮಾರಾಟ ಮಾಡುತ್ತಿರಲಿಲ್ಲ. ಮಾರಿದರೆ, ಪೊಲೀಸರಿಗೆ ಸಿಗಬಹುದೆಂದು ಅಂದುಕೊಂಡಿದ್ದ. ಅದರ ಬದಲಿಗೆ, ತಮ್ಮ ಸಂಬಂಧಿಕರಿಗೆ ವಾಹನವನ್ನು ಉಡುಗೊರೆ ನೀಡುತ್ತಿದ್ದ' ಎಂದೂ ತಿಳಿಸಿದರು.



'ಕೆರೆಗಳ ಸಮಗ್ರ ಅಭಿವೃದ್ಧಿಗೆ ಬದ್ಧ'

ಕೆ.ಆರ್.ಪುರ: ಕೆ.ಆರ್.ಪುರ ವಾರ್ಡ್ ವ್ಯಾಪ್ತಿಯ ವೆಂಗಯ್ಯನ ಕೆರೆ, ದೇವಸಂದ್ರ ವಾರ್ಡ್ ವ್ಯಾಪ್ತಿಯ ಗಂಗಶೆಟ್ಟಿ ಕೆರೆ ಹಾಗೂ ವಿಜ್ಞಾನನಗರ ವಾರ್ಡ್ ವ್ಯಾಪ್ತಿಯ ವಿಭೂತಿಪುರ ಕೆರೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, 'ಕ್ಷೇತ್ರದ ಕೆರೆಗಳ ಕಾಯಕಲ್ಪ ಹಾಗೂ ಪುನರುಜ್ಜೀವನಗೊಳಿಸುವ ಉದ್ದೇಶದಿಂದ ₹3.5 ಕೋಟಿ ವೆಚ್ಚದಲ್ಲಿ ವೆಂಗಯ್ಯನಕೆರೆ, ₹4 ಕೋಟಿ ವೆಚ್ಚದಲ್ಲಿ ಗಂಗಶೆಟ್ಟಿ ಕೆರೆ ಅಭಿವೃದ್ಧಿ ಹಾಗೂ ₹4 ಕೋಟಿ ವೆಚ್ಚದಲ್ಲಿ ವಿಭೂತಿಪುರ ಕೆರೆಗೆ ತ್ಯಾಜ್ಯ ನೀರು ಸಂಸ್ಕರಣ ಘಟಕ ನಿರ್ಮಾಣ ಮಾಡಲಾಗುವುದು' ಎಂದು ಹೇಳಿದರು.

'ಕ್ಷೇತ್ರದಲ್ಲಿ ಕೆರೆಗಳ ಪುನಶ್ಚೇತನ ಕಾರ್ಯ ಭರದಿಂದ ಸಾಗುತ್ತಿದೆ. ಕ್ಷೇತ್ರ ವ್ಯಾಪ್ತಿಯ ಹಲವು ಕೆರೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಕೆರೆಗಳಲ್ಲಿ ಹೂಳು ತೆಗೆಯುವುದು. ಕೆರೆಯ ಸುತ್ತಲೂ ಬೇಲಿ ಅಳವಡಿಕೆ ಕಾರ್ಯ, ವಾಯು ವಿಹಾರಗಳಿಗಾಗಿ ಪಾದಚಾರಿ ಮಾರ್ಗ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ' ಎಂದು ತಿಳಿಸಿದರು.

ಬಿಜೆಪಿ ಮುಖಂಡ ಪಿ.ಜೆ.ಅಂತೋಣಿಸ್ವಾಮಿ ಮಾತನಾಡಿ, 'ಕೆರೆಗಳ ರಕ್ಷಣೆ ಮಾಡುವ ವಿಚಾರದಲ್ಲಿ ಸಾರ್ವಜನಿಕರ ಪಾತ್ರ ಮಹತ್ವದ್ದಾಗಿದೆ. ಮುಂದಿನ ಪೀಳಿಗೆಗೆ ಆಹ್ಲಾದಕರ ವಾತಾವರಣ ನೀಡುವ ಕೆರೆಗಳನ್ನು ಹಾಗೂ ಪರಿಸರವನ್ನು ಸಂರಕ್ಷಿಸಲು ನಾವೆಲ್ಲರೂ ಪಣ ತೊಡಬೇಕಿದೆ' ಎಂದು ತಿಳಿಸಿದರು.

ಡ್ರಗ್ಸ್ ಪ್ರಕರಣ: ಪೊಲೀಸರಿಬ್ಬರು ಸಿಸಿಬಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಮುಖ್ಯಮಂತ್ರಿ ಮನೆ ಭದ್ರತಾ ಸಿಬ್ಬಂದಿಗಳಿಬ್ಬರನ್ನು ನಗರದ ಸಿಸಿಬಿ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರ್‌.ಟಿ.ನಗರದ ಮನೆ ಭದ್ರತೆ ಕರ್ತವ್ಯದಲ್ಲಿದ್ದ ಹೆಡ್ ಕಾನ್‌ಸ್ಟೆಬಲ್ ಸಂತೋಷ್ ಹಾಗೂ ಕಾನ್‌ಸ್ಟೆಬಲ್ ಶಿವಕುಮಾರ್ ಅವರನ್ನು ಡ್ರಗ್ಸ್ ಪ್ರಕರಣದಲ್ಲಿ ಇತ್ತೀಚೆಗೆ ಬಂಧಿಸಲಾಗಿತ್ತು. ಇದೀಗ ಅವರಿಬ್ಬರನ್ನು ಸಿಸಿಬಿ ವಿಚಾರಣೆ ನಡೆಸುತ್ತಿದೆ' ಪೊಲೀಸ್ ಮೂಲಗಳು ಹೇಳಿವೆ.

'ಆರ್‌.ಟಿ.ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಲೋಪ ಕಂಡುಬಂದಿತ್ತು. ಇನ್‌ಸ್ಪೆಕ್ಟರ್ ಹಾಗೂ ಪಿಎಸ್‌ಐ ಅವರನ್ನು ಅಮಾನತು ಸಹ ಮಾಡಲಾಗಿತ್ತು. ಇದೇ ಪ್ರಕರಣದ ತನಿಖೆಯನ್ನು ಸಿಸಿಬಿ ಕೈಗೆತ್ತಿಕೊಂಡಿದೆ' ಎಂದೂ ತಿಳಿಸಿವೆ.

'ಆಟೊದಲ್ಲಿ ಡ್ರಗ್ಸ್ ತುಂಬಿಕೊಂಡು ಚಾಲಕ, ಆರ್‌.ಟಿ.ನಗರದಲ್ಲಿದ್ದ ಸಂತೋಷ್ ಹಾಗೂ ಶಿವಕುಮಾರ್ ಬಳಿ ಬಂದಿದ್ದ. ಅದೇ ಸಂದರ್ಭದಲ್ಲೇ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಪೊಲೀಸರಿಬ್ಬರು ಸೇರಿ ನಾಲ್ವರನ್ನು ಬಂಧಿಸಿದ್ದರು. ಆಟೊವನ್ನೂ ಜಪ್ತಿ ಮಾಡಿದ್ದರು' ಎಂದೂ ಹೇಳಿವೆ.

'ಇದೇ ಆರೋಪಿಗಳ ವಿರುದ್ಧ ಕೋರಮಂಗಲ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಅದರ ತನಿಖೆಯೂ ಸಿಸಿಬಿಗೆ ವರ್ಗವಾಗುವ ಸಾಧ್ಯತೆ ಇದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ನಿರ್ಮಾಪಕನ ಕೊಲೆಗೆ ಸಂಚು: ಇಬ್ಬರ ಸೆರೆ

ಬೆಂಗಳೂರು: ಸಿನಿಮಾ ನಿರ್ಮಾಪಕ ಉಮಾಪತಿ ಕೊಲೆಗೆ ಸಂಚು ರೂಪಿಸಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನಟ ದರ್ಶನ್ ಅಭಿನಯದ 'ರಾಬರ್ಟ್' ಸೇರಿ ಹಲವು ಸಿನಿಮಾ ನಿರ್ಮಿಸಿರುವ ಉಮಾಪತಿ ಅವರ ಕೊಲೆಗೆ ಸಂಚು ನಡೆದಿತ್ತು. ಈ ಬಗ್ಗೆ 2020ರಲ್ಲಿ ಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಪ್ರಕರಣ ಸಂಬಂಧ ಹಲವರನ್ನು ಈಗಾಗಲೇ ಬಂಧಿಸಲಾಗಿದೆ. ಆರೋಪಿಗಳಾದ ದರ್ಶನ್ ಹಾಗೂ ಸಂಜು ಎಂಬುವರು ತಲೆಮರೆಸಿಕೊಂಡಿದ್ದರು. ಅವರಿಬ್ಬರನ್ನು ಸುಂಕದಕಟ್ಟೆ ಬಳಿ ಇತ್ತೀಚೆಗೆ ಬಂಧಿಸಲಾಗಿದೆ' ಎಂದೂ ತಿಳಿಸಿವೆ.



ಗಾಜಿನಮನೆ ಭಣಭಣ

ಕೋವಿಡ್ ಹೆಚ್ಚಳ ಹಾಗೂ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನ ರದ್ದಾಗಿರುವುದರಿಂದ ಲಾಲ್‌ಬಾಗ್ ಉದ್ಯಾನದ ಗಾಜಿನಮನೆ ಜನರಿಲ್ಲದೆ ಭಾನುವಾರ ಬಿಕೋ ಎನ್ನುತ್ತಿತ್ತು –ಪ್ರಜಾವಾಣಿ ಚಿತ್ರ

ಗರ್ಭಿಣಿ ಮಾಡಿ ಪರಾರಿಯಾಗಿದ್ದವ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯನ್ನು ಪ್ರೀತಿಸಿ, ಅವರ ಜೊತೆ ಸಹಜೀವನ ನಡೆಸಿ ಗರ್ಭಿಣಿಯನ್ನಾಗಿ ಮಾಡಿ ಪರಾರಿಯಾಗಿದ್ದ ಆರೋಪಿ ಅರುಣ್ (28) ಎಂಬಾತನನ್ನು ಬಾಗಲಗುಂಟೆ ಪೊಲೀಸರು ಬಂಧಿಸಿದ್ದಾರೆ.

'ಯುವತಿ ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆರೋಪಿ ಅರುಣ್‌ನನ್ನು ಇತ್ತೀಚೆಗೆ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿ ಅರುಣ್, ಕಾರ್ಯಕ್ರಮ ಸಂಘಟನೆ ಕೆಲಸ ಮಾಡುತ್ತಿದ್ದ ಯುವತಿಯನ್ನು ಪರಿಚಯಿಸಿಕೊಂಡಿದ್ದ. ಅವರಿಬ್ಬರ ಸ್ನೇಹ ಪ್ರೀತಿಯಾಗಿ ಮಾರ್ಪಟ್ಟಿತ್ತು. ಇಬ್ಬರೂ ಪರಸ್ಪರ ಒಪ್ಪಿ ಒಂದೇ ಮನೆಯಲ್ಲಿ ಸಹಜೀವನ ನಡೆಸುತ್ತಿದ್ದರು. ಇದೇ ಸಂದರ್ಭದಲ್ಲಿ ಹಣಕಾಸಿನ ಅಡಚಣೆ ಇರುವುದಾಗಿ ಆರೋಪಿ, ಹಣ ಸಹ ಪಡೆದಿದ್ದ.'

'ಯುವತಿ ಇತ್ತೀಚೆಗೆ ಗರ್ಭಿಣಿ ಆಗಿದ್ದರು. ಮಗು ತೆಗೆಸುವಂತೆ ಒತ್ತಾಯಿಸಿದ್ದ ಆರೋಪಿ, ಪರಾರಿಯಾಗಿದ್ದ. ಅವರ ಮನೆಯರಿಂದಲೂ ಯುವತಿಗೆ ಪ್ರತಿಕ್ರಿಯೆ ಸಿಕ್ಕಿರಲಿಲ್ಲ' ಎಂದೂ ಪೊಲೀಸರು ತಿಳಿಸಿದರು.

ಟಿಪ್ಪರ್ ಲಾರಿ– ಬೈಕ್ ಅಪಘಾತ: ಪತ್ರಕರ್ತ ಸಾವು



ಗಂಗಾಧರ ಮೂರ್ತಿ

ಬೆಂಗಳೂರು: ನಗರದ ಪುರಭವನ ಬಳಿ ಭಾನುವಾರ ಸಂಜೆ ಸಂಭವಿಸಿದ ಅಪಘಾತದಲ್ಲಿ ಪತ್ರಕರ್ತ ಎಸ್. ಎಸ್. ಗಂಗಾಧರಮೂರ್ತಿ (49) ಮೃತಪಟ್ಟಿದ್ದಾರೆ.

ಶೃಂಗೇರಿಯ ಗಂಗಾಧರ ಮೂರ್ತಿ, 'ವಿಜಯವಾಣಿ' ದಿನ ಪತ್ರಿಕೆಯಲ್ಲಿ ಮುಖ್ಯ ಉಪ ಸಂಪಾದಕರಾಗಿದ್ದರು. 'ಚಾಮರಾಜಪೇಟೆಯಲ್ಲಿರುವ ಪತ್ರಿಕಾ ಕಚೇರಿಗೆ ಕೆಲಸಕ್ಕೆಂದು ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಹಲಸೂರು ಗೇಟ್ ಸಂಚಾರ ಪೊಲೀಸರು ತಿಳಿಸಿದರು.

'ಗಂಗಾಧರಮೂರ್ತಿ ಅವರು ಬೈಕ್‌ನಲ್ಲಿ ಪುರಭವನ ಎದುರಿನ ರಸ್ತೆಯಲ್ಲಿ ತೆರಳುತ್ತಿದ್ದರು. ಅದೇ ಸಂದರ್ಭದಲ್ಲೇ ವೇಗವಾಗಿ ಬಂದ ಟಿಪ್ಪರ್ ಲಾರಿ, ರಸ್ತೆ ವಿಭಜಕಕ್ಕೆ ಗುದ್ದಿ ಬೈಕ್‌ಗೆ ಡಿಕ್ಕಿ ಹೊಡೆದು ಉರುಳಿ ಬಿದ್ದಿತ್ತು. ಲಾರಿಯಡಿ ಸಿಲುಕಿದ್ದ ಅವರ ತಲೆ ಹಾಗೂ ದೇಹದ ಭಾಗಗಳಿಗೆ ತೀವ್ರ ಪೆಟ್ಟು ಬಿದ್ದಿತ್ತು.'

'ತೀವ್ರ ಗಾಯಗೊಂಡಿದ್ದ ಗಂಗಾಧರ ಮೂರ್ತಿ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆ ದೊಯ್ಯಲಾ ಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ತೀರಿಕೊಂಡಿದ್ದಾರೆ' ಎಂದೂ ತಿಳಿಸಿದರು.

'ಲಾರಿ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಅಪಘಾತದ ನಂತರ ಲಾರಿ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಪೊಲೀಸರು ಮಾಹಿತಿ ನೀಡಿದರು.

ಗಂಗಾಧರಮೂರ್ತಿ ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ.

'ಕೋಡ್' ಮೂಲಕ ಕಳ್ಳತನ ಓಜಿಕುಪ್ಪಂ ಗ್ಯಾಂಗ್ ಬಲೆಗೆ

ಬೆಂಗಳೂರು: ನಗರದ ವಿವಿಧ ಬ್ಯಾಂಕ್‌ಗಳ ಬಳಿ ಸುತ್ತಾಡಿ ಗ್ರಾಹಕರ ಗಮನ ಬೇರೆಡೆ ಸೆಳೆದು ಕಳ್ಳತನ ಮಾಡುತ್ತಿದ್ದ ಓಜಿಕುಪ್ಪಂ ಗ್ಯಾಂಗ್ ಸದಸ್ಯರು ಕೊತ್ತನೂರು ಪೊಲೀಸರ ಬಲೆಗೆ ಬಿದ್ದಿದ್ದಾರೆ.

'ಬ್ಯಾಂಕ್ ಗ್ರಾಹಕರನ್ನು ಹಿಂಬಾಲಿಸಿ ಹಣ ಕದ್ದುಕೊಂಡು ಪರಾರಿಯಾಗುತ್ತಿದ್ದ ಆರೋಪದಡಿ ಗುರಿಕುಮಾರ್ ಹಾಗೂ ಷಣ್ಮುಗಂ ಎಂಬುವವರನ್ನು ಬಂಧಿಸಲಾಗಿದೆ. ಮತ್ತಷ್ಟು ಮಂದಿ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಓಜಿಗುಪ್ಪಂ ಗ್ಯಾಂಗ್ ಕಟ್ಟಿಕೊಂಡಿದ್ದ ಆರೋಪಿಗಳು, ಕೋಡ್ ಹಾಗೂ ಸನ್ನೆಗಳ ಮೂಲಕ ಕೃತ್ಯ ಎಸಗುತ್ತಿದ್ದರು. ಕೊತ್ತನೂರು, ಅಮೃತಹಳ್ಳಿ, ಯಲಹಂಕ, ಮಾರತ್ತಹಳ್ಳಿ ಹಾಗೂ ವಿವಿಧ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಕಳ್ಳತನ ಮಾಡಿರುವುದು ಗೊತ್ತಾಗಿದೆ' ಎಂದೂ ತಿಳಿಸಿವೆ.

ಕಾದು, ಹಿಂಬಾಲಿಸಿ ಕಳ್ಳತನ: 'ನಿತ್ಯವೂ ಬ್ಯಾಂಕ್ ಬಳಿ ಆರೋಪಿಗಳು ಬರುತ್ತಿದ್ದರು. ಕೆಲವರು ಬ್ಯಾಂಕ್‌ನೊಳಗೆ ಹೋಗುತ್ತಿದ್ದರು. ಯಾರಾದರೂ ಲಕ್ಷಾಂತರ ರೂಪಾಯಿ ಹಣ ಡ್ರಾ ಮಾಡಿಕೊಂಡು ಹೋಗುವುದು ಗೊತ್ತಾದರೆ, ಆ ಬಗ್ಗೆ ಮಾಹಿತಿ ಹಂಚಿಕೊಳ್ಳುತ್ತಿದ್ದರು. ಅಂಥ ಗ್ರಾಹಕರನ್ನು ಹಿಂಬಾಲಿಸಿ, ಗಮನ ಬೇರೆಡೆ ಹಣದ ಬ್ಯಾಗ್ ಕದ್ದುಕೊಂಡು ಪರಾರಿಯಾಗುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು ಸನ್ನೆ ಮೂಲಕ ಮಾತನಾಡುತ್ತಿದ್ದರು. ತಲೆ ಮೇಲೆ ಕೈ ಇಟ್ಟರೆ ಎಚ್ಚರ ವಹಿಸುವಂತೆ ಹಾಗೂ ಮೂಗಿನ ಮೇಲೆ ಕೈ ಇಟ್ಟರೆ ಕಳ್ಳತನ ಮಾಡುವ ಸನ್ನೆ ಇವರದ್ದಾಗಿತ್ತು. ಇತ್ತೀಚೆಗೆ ಕೊತ್ತನೂರು ಠಾಣೆ ವ್ಯಾಪ್ತಿಯಲ್ಲಿ ₹ 4 ಲಕ್ಷ ಕಳ್ಳತನವಾಗಿತ್ತು. ಅದರ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು. ಕಳ್ಳತನ ಮಾಡುವುದೇ ಇವರ ವೃತ್ತಿ' ಎಂದೂ ಮೂಲಗಳು ತಿಳಿಸಿವೆ.

ಅಕ್ರಮ ಸಾಗಣೆ: ₹67 ಲಕ್ಷ ಮೌಲ್ಯದ ಚಿನ್ನ ವಶ

ದೇವನಹಳ್ಳಿ: ನಗರದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 1 ಕೆ.ಜಿ. 300 ಗ್ರಾಂ ಚಿನ್ನವನ್ನು ಕಸ್ಟಮ್ಸ್ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ವಿದೇಶಗಳಿಂದ ಬೆಂಗಳೂರಿಗೆ ಚಿನ್ನ ಸಾಗಣೆ ಮಾಡುತ್ತಿದ್ದ ವ್ಯಕ್ತಿಗಳ ಕುರಿತು ಖಚಿತ ಮಾಹಿತಿಯ ಮೇರೆಗೆ ತಪಾಸಣೆ ನಡೆಸಿದ ಅಧಿಕಾರಿಗಳು ಸುಮಾರು ₹67.59 ಲಕ್ಷ ಮೌಲ್ಯದ ಚಿನ್ನವನ್ನು ವಶಕ್ಕೆ ಪಡೆದಿದ್ದಾರೆ. ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಚಿನ್ನವನ್ನು ವಶಕ್ಕೆ ಪಡೆದಿರುವ ಅಧಿಕಾರಿಗಳು, ಡಿಆರ್ ಅಧಿಕಾರಿಗಳ ಖಚಿತ ಮಾಹಿತಿಯ ಮೇರೆ ಕಾರ್ಯಾಚರಣೆ ನಡೆಸಿದರು.

ದುಬೈನಿಂದ ಬೆಂಗಳೂರಿಗೆ ಬರುತ್ತಿದ್ದ ಎರಡು ಪ್ರಕರಣದಲ್ಲಿ ಅಂತರ ರಾಷ್ಟ್ರೀಯ ಪ್ರಯಾಣಿಕರಿಂದ ಚಿನ್ನವನ್ನು ವಶಕ್ಕೆ ಪಡೆದಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಅಧಿಕಾರಿಗಳನ್ನು ಮೋಸ ಮಾಡಿ ಚಿನ್ನ ಸಾಗಣೆ ಮಾಡಲು ಮುಂದಾಗಿದ್ದ ವ್ಯಕ್ತಿಯೂ ದುಬೈನಿಂದ ಮುಂಬೈಗೆ ಬಂದು ನಂತರ ಮುಂಬೈನಿಂದ ಬೆಂಗಳೂರಿಗೆ ಸ್ಥಳೀಯ ವಿಮಾನದ ಮೂಲಕ ಪ್ರಯಾಣ ಬೆಳೆಸಿದ್ದ ಎನ್ನಲಾಗಿದ್ದು, ಕಸ್ಟಮ್ಸ್ ಅಧಿಕಾರಿಯ ಕಣ್ಗಾವಲಿನಲ್ಲಿ ಸಿಕ್ಕಿಬಿದಿದ್ದಾನೆ ಎಂದು ಮಾಹಿತಿ ದೊರೆತಿದೆ.

ಕಾರ್ಮಿಕನ ಕೊಲೆ: ಮೂವರು ಆರೋಪಿಗಳ ಬಂಧನ

ಬೆಂಗಳೂರು: ಕೊತ್ತನೂರು ಠಾಣೆ ವ್ಯಾಪ್ತಿಯಲ್ಲಿ ಕಾರ್ಮಿಕ ಮುರುಗನ್ (31) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

'ಅಸ್ಸಾಂನ ಅಂಥೋನಿ ಸಿಂಗ್, ಕಿಶನ್ ಎಕ್ಕ ಹಾಗೂ ರಂಜನ್ ಟಿರ್ಕಿ ಬಂಧಿತರು. ಇನ್ನು ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮುರುಗನ್ ಅವರು ಹನುಮಂತ ನಗರದಲ್ಲಿರುವ ನಿರ್ಮಾಣ ಹಂತದ ಕಟ್ಟಡದಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಅಲ್ಲಿಯೇ ಶೆಡ್‌ನಲ್ಲಿ ವಾಸವಿದ್ದರು. ಸಮೀಪದ ಶೆಡ್‌ನಲ್ಲಿ ಆರೋಪಿಗಳು ನೆಲೆಸಿದ್ದರು'.

'ಜನವರಿ 1ರಂದು ರಾತ್ರಿ ಕಾರ್ಮಿಕರ ನಡುವೆ ಗಲಾಟೆ ಆಗಿತ್ತು. ಇದೇ ಸಂದರ್ಭದಲ್ಲಿ ಮುರುಗನ್ ಅವರ ಮೇಲೆ ಆರೋಪಿಗಳು ಹಲ್ಲೆ ಮಾಡಿದ್ದರು. ಗಾಯಗೊಂಡಿದ್ದ ಮುರುಗನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟಿದ್ದರು' ಎಂದೂ ಪೊಲೀಸರು ತಿಳಿಸಿದರು.

'ಕೊಲೆ ನಂತರ ಆರೋಪಿಗಳು ರಾಜ್ಯದಿಂದ ಪರಾರಿಯಾಗಿ ಅಸ್ಸಾಂಗೆ ಹೋಗಿದ್ದರು. ಅಲ್ಲಿಗೆ ಹೋದ ವಿಶೇಷ ತಂಡ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದೂ ಹೇಳಿದರು.

ಚಳ್ಳಕೆರೆ ತಾಲ್ಲೂಕಿನ ರಂಗವ್ವನಹಳ್ಳಿಯಲ್ಲಿ ನಡೆದ ಘಟನೆ

ಪೂಜಾರಿಕೆ ವಿಚಾರಕ್ಕೆ ಹಲ್ಲೆ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ



ಜಯರಾಮಪ್ಪ

ಚಳ್ಳಕೆರೆ: ತಾಲ್ಲೂಕಿನ ಮೀರಾ ಸಾಬಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಂಗವ್ವನ ಹಳ್ಳಿಯಲ್ಲಿ ಗ್ರಾಮ ದೇವತೆ ದುರುಗಮ್ಮ ದೇವಿಯ ಪೂಜಾರಿಕೆ ವಿಚಾರವಾಗಿ ಒಂದೇ ಕೋಮಿನ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಗ್ರಾಮದ ಜಯರಾಮಪ್ಪ (55) ಮೃತರು. ಇವರ ಮೇಲೆ ಹಲ್ಲೆ ನಡೆಸಿದ್ದಕ್ಕಾಗಿ ಚನ್ನಪ್ಪ ಮತ್ತು ಓಬಳೇಶ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಯುಗಾದಿ ಹಬ್ಬದಲ್ಲಿ ನಡೆಯುವ ಜಾತ್ರೆಯಲ್ಲಿ ಪೂಜಾರಿಕೆತನ ವಹಿಸಿಕೊಳ್ಳುವ ವಿಷಯದಲ್ಲಿ ಎರಡು ಗುಂಪುಗಳು ಸೃಷ್ಟಿಯಾಗಿದ್ದು, ತೀವ್ರ ಪೈಪೋಟಿ ಏರ್ಪಟ್ಟಿತು. ದೇವಸ್ಥಾನದ ಹುಂಡಿ ಮತ್ತು ಜಾತ್ರೆ ಆಚರಣೆ ಸಂದರ್ಭ ಭಕ್ತರಿಂದ ಹೆಚ್ಚು ಆದಾಯ ಸಂಗ್ರಹವಾಗುತ್ತಿದ್ದುದೇ ಗುಂಪು ಘರ್ಷಣೆಗೆ ಕಾರಣ ಎನ್ನಲಾಗಿದೆ.

ಶನಿವಾರ ರಾತ್ರಿ ಈ ವಿಚಾರವಾಗಿ ಜಯರಾಮಪ್ಪ ಮತ್ತು ಚನ್ನಪ್ಪ ನೇತೃತ್ವದ ಗುಂಪುಗಳ ನಡುವೆ ಜಗಳವಾಯಿತು. ಎರಡು ಗುಂಪಿನವರೂ ಪರಸ್ಪರ ಎಳೆದಾಡಿ ಕಲ್ಲು, ದೊಣ್ಣೆಗಳಿಂದ ಹೊಡೆದಾಡಿದರು. ಚನ್ನಪ್ಪನ ಕಡೆಯವರು ಜಯರಾಮಪ್ಪ ಅವರ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದಾಗ ಕುಸಿದು ಬಿದ್ದ ಜಯರಾಮಪ್ಪ ಅವರನ್ನು ಚಳ್ಳಕೆರೆ ಆಸ್ಪತ್ರೆಗೆ ಕೊಂಡೊಯ್ದರು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು.

'ನನ್ನ ಪತಿಯನ್ನು ಕಲ್ಲಿನಿಂದ ಹೊಡೆದು ಸಾಯಿಸಿದ್ದಾರೆ' ಎಂದು ಆರೋಪಿಸಿರುವ ಮೃತರ ಪತ್ನಿ ಗುಂಡಮ್ಮ ಹಾಗೂ ಪುತ್ರ ಸಂದೀಪ ಅವರು ಚನ್ನಪ್ಪ, ಓಬಳೇಶ್, ಅರ್ಜುನ್, ಆಕಾಶ, ಮುಕುಂದ ಅವರ ವಿರುದ್ಧ ದೂರು ನೀಡಿದ್ದರು. ಆರೋಪಿಗಳಲ್ಲಿ ಇಬ್ಬರನ್ನು ಪೊಲೀಸರು ಬಂಧಿಸಿದ್ದು, ಇನ್ನಿಬ್ಬರು ತಲೆಮರೆಸಿಕೊಂಡಿದ್ದಾರೆ.

ಜಿಲ್ಲಾ ವರಿಷ್ಠಾಧಿಕಾರಿ ಕೆ.ಪರಶುರಾಮ, ಹೆಚ್ಚುವರಿ ಅಧಿಕಾರಿ ಎಸ್‌.ಜೆ. ಕುಮಾರಸ್ವಾಮಿ, ಸರ್ಕಲ್ ಇನ್‌ಸ್ಪೆಕ್ಟರ್ ರಮಾಕಾಂತ್ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು. 'ಗ್ರಾಮದಲ್ಲಿ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿದೆ' ಎಂದು ಪಿಎಸ್‌ಐ ಮಹೇಶ್‌ಗೌಡ ತಿಳಿಸಿದ್ದಾರೆ.

ದುಬೈಗೆ ವಿದೇಶಿ ಕರೆನ್ಸಿ ಕಳ್ಳಸಾಗಣೆ: ಪ್ರಯಾಣಿಕ ವಶಕ್ಕೆ

ದೇವನಹಳ್ಳಿ: ವಿದೇಶಿ ಕರೆನ್ಸಿಯನ್ನು ಕಳ್ಳಸಾಗಣೆ ಮಾಡಲು ಯತ್ನಿಸಿದ ಪ್ರಯಾಣಿಕನನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡಿಆರ್‌ಐ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಜ.21ರಂದು ಮುಂಬೈನಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದ ಪ್ರಯಾಣಿಕ ಇಲ್ಲಿಂದ ದುಬೈಗೆ ಪ್ರಯಾಣಿಸುತ್ತಿದ್ದ. ₹24 ಲಕ್ಷ ಮೌಲ್ಯದ ಕರೆನ್ಸಿಗಳನ್ನು ಅಕ್ರಮವಾಗಿ ದುಬೈಗೆ ಸಾಗಣೆ ಮಾಡುತ್ತಿದ್ದ ಖಚಿತ ಮಾಹಿತಿಯ ಆಧಾರದ ಮೇಲೆ ಡಿಆರ್‌ಐ ಅಧಿಕಾರಿಗಳು ತಪಾಸಣೆ ಮಾಡಿದಾಗ ಪ್ರಯಾಣಿಕ ಸಿಕ್ಕಿಬಿದ್ದಿದ್ದಾನೆ. ಆತನನ್ನು ವಶಕ್ಕೆ ಪಡೆದು ಲಗೇಜ್‌ನಲ್ಲಿ ಮರೆಮಾಚಿದ್ದ ವಿದೇಶಿ ಕರೆನ್ಸಿಗಳನ್ನು ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಬೃಹತ್ ಪ್ರಮಾಣದಲ್ಲಿ ಹೊತ್ತಿ ಉರಿದ ಕಸದ ರಾಶಿ

ಬೆಟ್ಟದಾಸನಪುರದಲ್ಲಿ ಹೊಗೆ: ಪರದಾಡಿದ ಜನರು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಎಲೆಕ್ಟ್ರಾನಿಕ್ ಸಿಟಿ ಸಮೀಪದ ಬೆಟ್ಟದಾಸನಪುರದ ಬಳಿ ಕಲ್ಲು ಕ್ವಾರಿಗಳಿಂದ ಗುಂಡಿ ಬಿದ್ದಿದ್ದ ಜಾಗಗಳಲ್ಲಿ ಪ್ರತಿದಿನ ರಾತ್ರಿ ವೇಳೆಯಲ್ಲಿ ಕಸವನ್ನು ತಂದು ಹಾಕಲಾಗುತ್ತಿದೆ. ಈ ಕಸಕ್ಕೆ ಬೆಂಕಿ ಬಿದ್ದು ಹೊತ್ತಿಕೊಂಡು ಉರಿದಿದ್ದರಿಂದ ಬೆಟ್ಟದಾಸನಪುರವು ಸಂಪೂರ್ಣ ಹೊಗೆಯಿಂದ ಆವೃತವಾಗಿ ಜನರು ಉಸಿರಾಡಲು ತೊಂದರೆ ಪಟ್ಟ ಪರಿಸ್ಥಿತಿ ನಿರ್ಮಾಣವಾಗಿತ್ತು.

'ಕಸವು ಹೊತ್ತಿಕೊಂಡು ಉರಿದಿದ್ದರಿಂದ ಬೃಹತ್ ಪ್ರಮಾಣದಲ್ಲಿ ಹೊಗೆಯು ಸುತ್ತಮುತ್ತಲಿನ ಪ್ರದೇಶವನ್ನು ಆವರಿಸಿಕೊಂಡಿತು. ಗ್ರಾಮವು ಹೊಗೆಯಿಂದ ತುಂಬಿಕೊಂಡಿತ್ತು. ಅಗ್ನಿಶಾಮಕದಳದವರು ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದರೂ ಹೊಗೆ ಬರುತ್ತಲೆ ಇದೆ. ಇದರಿಂದ ಜನರ ಆರೋಗ್ಯದ ಮೇಲೆ ಪರಿಣಾಮ ಉಂಟಾಗಿದೆ. ಕೆಮ್ಮು, ನೆಗಡಿ, ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಕೂಡಲೇ ಕಸ ಹಾಕುವುದನ್ನು ನಿಲ್ಲಿಸಬೇಕು' ಎಂಬುದು ಗ್ರಾಮಸ್ಥರ ಒತ್ತಾಯವಾಗಿದೆ.

'ಡೆಲ್ಲಿ ಪಬ್ಲಿಕ್ ಶಾಲೆ ಮತ್ತು ಬೆಟ್ಟದಾಸನಪುರ ಗ್ರಾಮವು ಈ ಪ್ರದೇಶಕ್ಕೆ ಹೊಂದಿಕೊಂಡಿದೆ. ಲಾರಿಗಟ್ಟಲೆ ಕಸವನ್ನು ತಂದು ಕ್ವಾರಿಗಳ ಗುಂಡಿಗಳಲ್ಲಿ ತುಂಬಿರುವುದರಿಂದ ಗಬ್ಬುನಾರುತ್ತಿತ್ತು. ಇಲ್ಲಿ ಕಸ ಹಾಕಬಾರದೆಂದು ಹಲವಾರು ಬಾರಿ ತಿಳಿಸಿದರೂ ರಾತ್ರಿ ವೇಳೆಯಲ್ಲಿ ಕಸದ ಲಾರಿಗಳು ಕಸ ಸುರಿದು ಹೋಗುತ್ತಿವೆ. ಕಸ ಟೆಂಡರ್ ಪಡೆದಿದ್ದ ಗುತ್ತಿಗೆದಾರರಿಂದ ಹಣ ಪಡೆದಿರುವ ಕೆಲವರು ಕ್ವಾರಿಗಳಲ್ಲಿ ಕಸ ಹಾಕಿಸುತ್ತಿದ್ದಾರೆ. ಇದರಿಂದ ಸುತ್ತಮುತ್ತಲ ಪರಿಸರ ಹಾಳಾಗಿದೆ. ಕೂಡಲೇ ಕಸ ಹಾಕುವುದನ್ನು ನಿಲ್ಲಿಸಬೇಕು' ಎಂದು ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯ ಬೆಟ್ಟದಾಸನಪುರ ನಾರಾಯಣಸ್ವಾಮಿ ಒತ್ತಾಯಿಸಿದರು.



ಬೆಟ್ಟದಾಸನಪುರದ ಕಲ್ಲುಕ್ವಾರೆಯ ಬಳಿ ಸುರಿಯಲಾಗಿರುವ ಕಸದ ರಾಶಿಗೆ ಬೆಂಕಿ ಹೊತ್ತಿಕೊಂಡು ದಟ್ಟ ಹೊಗೆಯಾಡಿತು

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

‘ನವರಂಗ್: ಕಸದ ಸಮಸ್ಯೆ ನಿವಾರಿಸಿ’



ರಾಜಾಜಿನಗರದ ನವರಂಗ್ ರಸ್ತೆಯ ರಾಜಕಾಲುವೆ ಬಳಿ ಕಸ ಹಾಕಿರುವುದು

ರಾಜಾಜಿನಗರದ ನವರಂಗ್ ರಸ್ತೆ ಬಳಿ ರಾಜಕಾಲುವೆ ಇದ್ದು, ಅದರ ಮೇಲ್ಭಾಗವನ್ನು ಮುಚ್ಚಲಾಗಿದೆ. ಇಲ್ಲಿರುವ ಸ್ಥಳೀಯ ವಸತಿ ಸಮುಚ್ಚಯದವರು ಅಲ್ಲೇ ತಮ್ಮ ವಾಹನಗಳನ್ನು ನಿಲುಗಡೆ ಮಾಡುವುದಲ್ಲದೆ, ಮನೆಯ ಕಸವನ್ನೆಲ್ಲ ತಂದು ಅಲ್ಲೇ ಬಿಸಾಡುತ್ತಾರೆ. ವಾರ ಕಳೆದರೂ ಕಸ ತೆರವು ಮಾಡದ ಕಾರಣ ಕೊಳೆತು ದುರ್ನಾತ ಬೀರುತ್ತದೆ.

ಕಸದ ಸಮಸ್ಯೆ ಪರಿಹರಿಸಲು ಈ ಜಾಗದಲ್ಲಿ ಕಸದ ತೊಟ್ಟಿ ನಿರ್ಮಿಸುವುದು ಸೂಕ್ತ. ಆಗ ಕಸವನ್ನು ನೇರವಾಗಿ ತೊಟ್ಟಿಗೆ ಹಾಕುತ್ತಾರೆ. ಸಂಗ್ರಹವಾದ ಕಸ ವಿಲೇವಾರಿಗೂ ಅನುಕೂಲವಾಗುತ್ತದೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಬಸವರಾಜ ಹುಡೇದಗಡ್ಡಿ, ರಾಜಾಜಿನಗರ

‘ವಿದ್ಯುತ್ ಕಂಬ ತೆರವು ಮಾಡಿ’

ಅಟ್ಟೂರು ಬಡಾವಣೆಯ 5ನೇ ಮುಖ್ಯರಸ್ತೆಯಲ್ಲಿರುವ ಮನೆಯೊಂದರ ಬಾಗಿಲ ಮುಂದೆಯೇ ವಿದ್ಯುತ್ ಕಂಬ ಅಳವಡಿಸಲಾಗಿದೆ. ಸುಮಾರು ವರ್ಷಗಳಿಂದ ಕಂಬ ಅಲ್ಲಿಯೇ ಇದ್ದು, ಬೆಸ್ಕಾಂನವರು ಕಂಬವನ್ನು ತೆರವು ಮಾಡಲು ಮುಂದಾಗಿಲ್ಲ.



ಅಟ್ಟೂರು ಬಡಾವಣೆಯಲ್ಲಿ ಮನೆಯ ಮುಂದೆ ಇರುವ ವಿದ್ಯುತ್ ಕಂಬ

ಮನೆಯ ಮುಂದೆಯೇ ವಿದ್ಯುತ್ ಕಂಬ ಇರುವುದರಿಂದ ಮನೆಯವರು ಸದಾ ಅಪಾಯದ ಭೀತಿಯಲ್ಲೇ ದಿನ ಕಳೆಯುತ್ತಿದ್ದಾರೆ. ಮನೆಯ ಮುಂದೆ ಮಕ್ಕಳು ಆಟವಾಡಲು ಹೆದರುತ್ತಾರೆ. ಮಳೆಗಾಲದಲ್ಲಿ ವಿದ್ಯುತ್ ಪ್ರವಹಿಸುವ ಸಾಧ್ಯತೆ ಇನ್ನೂ ಹೆಚ್ಚು. ಈ ಬಗ್ಗೆ ಬೆಸ್ಕಾಂಗೆ ಹಲವು ಬಾರಿ ದೂರು ನೀಡಿದರೂ ಸಮಸ್ಯೆ ಬಗೆಹರಿದಿಲ್ಲ. ಕಂಬ ತೆರವು ಮಾಡಲು ಅಧಿಕಾರಿಗಳು ಹಣಕ್ಕೆ ಬೇಡಿಕೆ ಇಡುತ್ತಾರೆ. ದಯವಿಟ್ಟು ಈ ಕಂಬವನ್ನು ಬೇರೆ ಕಡೆಗೆ ಸ್ಥಳಾಂತರಿಸಿ. ಹಣ ಕೇಳುವ ಬೆಸ್ಕಾಂ ಸಿಬ್ಬಂದಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.

ಶ್ರೀನಿವಾಸ್, ಸ್ಥಳೀಯ



ಮುದ್ದಿನಪಾಳ್ಯ ಮುಖ್ಯರಸ್ತೆಯಲ್ಲಿ ವಾಹನಗಳ ಅಡ್ಡಾದಿಡ್ಡಿ ಸಂಚಾರ

ಅಡ್ಡಾದಿಡ್ಡಿ ಸಂಚಾರ: ವೃತ್ತ ನಿರ್ಮಿಸಿ

ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯ ಮುದ್ದಿನಪಾಳ್ಯ ಮುಖ್ಯರಸ್ತೆಯಲ್ಲಿ ನಾಲ್ಕು ರಸ್ತೆಗಳು ಸಂಧಿಸುತ್ತವೆ. ಇಲ್ಲಿ ಯಾವುದೇ ತಡೆ ಇಲ್ಲದಿರುವುದರಿಂದ ವಾಹನಗಳು ವೇಗವಾಗಿ ಸಂಚರಿಸುತ್ತವೆ. ನಾಲ್ಕೂ ರಸ್ತೆಗಳಿಂದ ವಾಹನಗಳು ಏಕಕಾಲದಲ್ಲಿ ಮುನ್ನುಗ್ಗಿ ಬಂದಾಗ ಇಲ್ಲಿ ಅಪಘಾತಗಳು ಸಂಭವಿಸುತ್ತಿವೆ.

ಈ ಅಪಾಯ ತಡೆಯಲು ರಸ್ತೆಯ ಮಧ್ಯಭಾಗದಲ್ಲಿ ವೃತ್ತವೊಂದನ್ನು ನಿರ್ಮಿಸಬೇಕು. ನಾಲ್ಕು ರಸ್ತೆಗಳಲ್ಲಿ ಉಬ್ಬುಗಳನ್ನು ಅಳವಡಿಸಿದರೆ, ವಾಹನಗಳು ನಿಧಾನವಾಗಿ ಸಂಚರಿಸುತ್ತವೆ. ಸಾರ್ವಜನಿಕರು ನಿರಾತಂಕವಾಗಿ ರಸ್ತೆ ದಾಟುವುದಕ್ಕೂ ಇದು ಸಹಕಾರಿ. ಈ ಬಗ್ಗೆ ಶಾಸಕ ಎಸ್.ಟಿ.ಸೋಮಶೇಖರ್ ಅವರು ಗಮನಹರಿಸಬೇಕು.

ಮಾರುತಿ, ಸರ್.ಎಂ.ವಿ.ಬಡಾವಣೆ



ಎಎಸ್‌ಬಿ ಬಡಾವಣೆಯಲ್ಲಿ ಡಾಂಬರು ಕಾಣದ ರಸ್ತೆ

‘ಶ್ರೀಗಂಧನಗರದ ಎಎಸ್‌ಬಿ ಬಡಾವಣೆ ರಸ್ತೆಗಳಿಗೆ ಡಾಂಬರು ಕಲ್ಪಿಸಿ’

ಸುಂಕದಕಟ್ಟೆ ಸಮೀಪದ ಶ್ರೀಗಂಧನಗರದ ಎಎಸ್‌ಬಿ ಬಡಾವಣೆಯಲ್ಲಿರುವ ರಸ್ತೆಗಳು ಈವರೆಗೆ ಡಾಂಬರು ಕಂಡಿಲ್ಲ. ಇಲ್ಲಿನ ನಿವಾಸಿಗಳು ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಮುಖ್ಯವಾಗಿ, ಸಂಚಾರಕ್ಕೆ ಯೋಗ್ಯವಾದ ರಸ್ತೆಗಳೇ ಇಲ್ಲಿಲ್ಲ.

ವಾಹನ ಸವಾರರು ಆಯತಪ್ಪಿ ಬಿದ್ದಿರುವ ಘಟನೆಗಳು ಸಾಕಷ್ಟಿವೆ. ಮಳೆಗಾಲದಲ್ಲಿ ಈ ಕೆಸರು ರಸ್ತೆಗಳಲ್ಲಿ ಸಂಚರಿಸುವುದೇ ಸವಾಲು. ಈ ದುಸ್ಥಿತಿ ಇರುವ ರಸ್ತೆಗಳಲ್ಲಿ ನಡೆದಾಡಲು ಹಿರಿಯರು ಹಾಗೂ ಮಕ್ಕಳಿಗೂ ಸಮಸ್ಯೆಯಾಗಿದೆ. ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಪಾಲಿಕೆ ಈ ಬಡಾವಣೆಗೆ ಉತ್ತಮ ರಸ್ತೆಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಬೇಕು.

ಬಿ.ಎಂ.ಸಂತೋಷ್, ಸ್ಥಳೀಯ ನಿವಾಸಿ

‘ಗಿಡಗಳನ್ನು ತೆರವುಗೊಳಿಸಿ’

ಜ್ಞಾನಭಾರತಿ ವಾರ್ಡ್‌ನ ಪಾಲಿಕೆ ಕಚೇರಿ ಉದ್ಯಾನದ ಸಮೀಪವಿದೆ. ಆದರೆ, ಕಚೇರಿಗೆ ತೆರಳುವ ಮಾರ್ಗದಲ್ಲಿ ಗಿಡಗಳು ಹೆಚ್ಚಾಗಿ ಬೆಳೆದುಕೊಂಡು, ಜನ ಭಯಪಡುವ ಸ್ಥಿತಿಯಲ್ಲಿದೆ. ಕಚೇರಿಗೆ ಪ್ರತಿದಿನ ಹಲವರು ಬರುತ್ತಾರೆ. ಗಿಡಗಳನ್ನು ಹಾಗೆಯೇ ಬಿಟ್ಟಿರುವುದರಿಂದ ಹಾವುಗಳು ಸೇರಿಕೊಳ್ಳುವ ಅಪಾಯವಿದೆ.

ಈ ಅನವಶ್ಯಕ ಗಿಡಗಳನ್ನು ತೆರವು ಮಾಡಿದರೆ ಜನರು ನಿರಾತಂಕವಾಗಿ ಕಚೇರಿಗೆ ತೆರಳಬಹುದು. ಈ ಸ್ವಚ್ಛತಾ ಕ್ರಮಕ್ಕೆ ಪಾಲಿಕೆ ಅಧಿಕಾರಿಗಳು ಗಮನಹರಿಸಬೇಕು. ಉದ್ಯಾನದಲ್ಲೂ ಅನವಶ್ಯಕವಾಗಿ ಬೆಳೆದುಕೊಂಡಿರುವ ಗಿಡಗಳನ್ನು ತೆರವು ಮಾಡಿದರೆ ಅನುಕೂಲ.

ತುಕಾರಾಂ, ಬಾಲಗಂಗಾಧರ ನಗರ

ವಿದ್ಯಾರ್ಥಿಗಳ ದೂರು: ದುಬಾರಿ ಶುಲ್ಕಕ್ಕೆ ಆಕ್ರೋಶ

ಎನ್‌ಇಟಿ: ಕನ್ನಡ ವಿಷಯದ ‘ಕೀ’ ಉತ್ತರಗಳಲ್ಲಿ ತಪ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಅರ್ಹತಾ ಪರೀಕ್ಷೆಯ (ಎನ್‌ಇಟಿ) ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟಿಸಿರುವ ಉತ್ತರಗಳು ಹಲವು ತಪ್ಪುಗಳಿಂದ ಕೂಡಿವೆ ಎಂದು ಅಭ್ಯರ್ಥಿಗಳು ದೂರಿದ್ದಾರೆ.

ರಾಷ್ಟ್ರೀಯ ಪರೀಕ್ಷೆ ಏಜೆನ್ಸಿ (ಎನ್‌ಟಿಎ) ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಎನ್‌ಇಟಿ ನಡೆಸಿತ್ತು. ಎನ್‌ಟಿಎ ಪ್ರಕಟಿಸಿರುವ ’ಕೀ’ ಉತ್ತರಗಳಲ್ಲಿ ತಪ್ಪುಗಳಿವೆ ಎಂದು ಅಭ್ಯರ್ಥಿಗಳು ತಿಳಿಸಿದ್ದಾರೆ.

ಕನ್ನಡ ಐಚ್ಛಿಕ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ ವರ್ಷ ಡಿಸೆಂಬರ್ 26ರಂದು ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ನಡೆಸಿತ್ತು. ಆದರೆ, ಕೆಲವರ ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಹಿಂದಿ ಪ್ರಶ್ನೆಗಳು ಕಾಣಿಸಿಕೊಂಡಿದ್ದು ಆಕ್ರೋಶಕ್ಕೆ ಕಾರಣವಾಗಿತ್ತು. ನಂತರ ಎನ್‌ಟಿಎ ಜನವರಿ 4 ರಂದು ಮರು ಪರೀಕ್ಷೆ ನಡೆಸಿತ್ತು.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು, ‘ಕೀ’ ಉತ್ತರಗಳನ್ನು ಜನವರಿ 21ರಂದು ಬಿಡುಗಡೆ ಮಾಡಿದೆ. ಯುಜಿಸಿ ರಾಷ್ಟ್ರೀಯ ಅರ್ಹತಾ ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಗಳು ugcnet.nta.nic.inನಲ್ಲಿ ಪರಿಶೀಲಿಸಬಹುದು. ಈ ಬಗ್ಗೆ ಆಕ್ಷೇಪಗಳನ್ನು ಜನವರಿ 24ರವರೆಗೆ ಸಲ್ಲಿಬಹುದಾಗಿದೆ ಎಂದು ತಿಳಿಸಿದೆ.

ಆದರೆ, ಅಭ್ಯರ್ಥಿಗಳು ಪ್ರತಿ ಉತ್ತರಗಳನ್ನು ಪ್ರಶ್ನಿಸಿ ಆಕ್ಷೇಪ ಸಲ್ಲಿಸಿದರೆ, ₹1,000 ಶುಲ್ಕ ಪಾವತಿಸಬೇಕಾಗುತ್ತದೆ. ಅಭ್ಯರ್ಥಿಗಳ ಆಕ್ಷೇಪ ಸರಿಯಾಗಿದ್ದರೆ ಮಾತ್ರ ‘ಕೀ’ ಉತ್ತರ ಪರಿಷ್ಕರಿಸಲಾಗುತ್ತದೆ ಮತ್ತು ಪಾವತಿಸಿದ ಶುಲ್ಕವನ್ನೂ ಮರುಪಾವತಿಸಲಾಗುತ್ತದೆ.

ಎನ್‌ಟಿಎ ಪ್ರಕಟಿಸಿರುವ ಉತ್ತರಗಳು ತಪ್ಪಾಗಿವೆ ಎಂದು ಪ್ರಶ್ನಿಸಿ ಅರ್ಜಿ ಸಲ್ಲಿಸಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಶುಲ್ಕ ದುಬಾರಿಯಾಗಿದೆ. ಬಡ ವಿದ್ಯಾರ್ಥಿಗಳು ಯಾರೂ ಮುಂದಾಗುವುದಿಲ್ಲ. ಹೀಗಾಗಿ, ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿದ್ದಾರೆ.

ಕನ್ನಡ ಕೀ ಉತ್ತರಗಳಲ್ಲಿ ಸುಮಾರು 20 ಉತ್ತರಗಳು ತಪ್ಪಾಗಿವೆ. ಇವುಗಳನ್ನು ಪ್ರಶ್ನಿಸಲು ₹20 ಸಾವಿರ ಶುಲ್ಕ ಪಾವತಿಸಬೇಕಾಗುತ್ತದೆ. ಬಡ ವಿದ್ಯಾರ್ಥಿಗಳು ಇಷ್ಟೊಂದು ಪಾವತಿಸಲು ಸಾಧ್ಯವಾಗುವುದಿಲ್ಲ‘ ಎಂದು ರಾಯಚೂರಿನ ಅಭ್ಯರ್ಥಿ ಲಕ್ಷ್ಮಣ್ ಎನ್ನುವವರು ದೂರಿದ್ದಾರೆ.

ಜತೆಗೆ, ಅಭ್ಯರ್ಥಿಗಳು ಕನ್ನಡ ವಿಷಯದ 100 ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಆದರೆ, 82 ಪ್ರಶ್ನೆಗಳಿಗೆ ಉತ್ತರಿಸಿಲ್ಲ ಎಂದು ವೆಬ್‌ಸೈಟ್‌ನಲ್ಲಿ ತೋರಿಸುತ್ತಿದೆ. ಇನ್ನು ಕೆಲವರಿಗೆ 70 ಪ್ರಶ್ನೆಗಳಿಗೆ ಉತ್ತರಿಸಿಲ್ಲ ಎಂದು ತೋರಿಸುತ್ತಿದೆ. ಇದೇ ರೀತಿಯ ಸಮಸ್ಯೆ ಹಲವರಿಗೆ ಆಗಿದೆ. ಉತ್ತರಗಳನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಲು ಹೆಚ್ಚಿನ ಸಮಯಾವಕಾಶವನ್ನು ಸಹ ನೀಡಿಲ್ಲ. ಎನ್‌ಟಿಎ ಮಾಡುವ ತಪ್ಪಿಗೆ ಅಮಾಯಕ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಬೆಂಗಳೂರಿನ ಮಂಜುನಾಥ್ ಎನ್ನುವವರು ತಿಳಿಸಿದ್ದಾರೆ.

ಉದಾಹರಣೆಗೆ ಟಾಲ್‌ಸ್ಟಾಯ್‌ನ ಕಲಾಮೀಮಾಂಸೆ ಬರೆದವರು ಸಿ.ಪಿ. ಕೃಷ್ಣಕುಮಾರ್ ಅವರು. ಆದರೆ ಎನ್‌ಟಿಎ ಕೀ ಉತ್ತರದಲ್ಲಿ ಎನ್. ಬಸವರಾಧ್ಯ ಎನ್ನುವುದಾಗಿ ಪ್ರಕಟಿಸಲಾಗಿದೆ ಎಂದು ದೂರಿದ್ದಾರೆ.

ವಿದ್ಯಾವಂತರನ್ನೂ ಕಾಡುತ್ತಿದೆ ನಿರುದ್ಯೋಗ ಸಮಸ್ಯೆ: ಬರಗೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಕಾಣಿಸಿಕೊಂಡ ಬಳಿಕ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದೆ. ಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿದ್ಯಾವಂತರೂ ನಿರುದ್ಯೋಗಿಗಳಾಗುತ್ತಿದ್ದಾರೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಕಳವಳ ವ್ಯಕ್ತಪಡಿಸಿದರು.

ಬಂಡಾಯ ಸಾಹಿತ್ಯ ಸಂಘಟನೆ–ಕರ್ನಾಟಕ ರಾಜ್ಯ ಸಮಿತಿ, ಡಿವೈಎಫ್‌ಐ ರಾಜ್ಯ ಸಮಿತಿ ಹಾಗೂ ಗ್ರಾಮ ಭಾರತ ಬೆಂಗಳೂರು ಹಮ್ಮಿಕೊಂಡ ‘ನಿರುದ್ಯೋಗ ಸಮಸ್ಯೆ ಮತ್ತು ಸವಾಲು’ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು. ‘ದೇಶದಲ್ಲಿ 65 ಕೋಟಿ ಯುವಜನರು ಇದ್ದಾರೆ. ನಿರುದ್ಯೋಗ ಸಮಸ್ಯೆ ವ್ಯಾಪಕವಾಗಿ ಬೆಳೆದಿದೆ. ವಿದ್ಯಾವಂತರು ಹಾಗೂ ಅವಿದ್ಯಾವಂತರು ಎಂಬ ಭೇದವಿಲ್ಲದೇ ಎಲ್ಲರಿಗೂ ಉದ್ಯೋಗ ಬೇಕು. ಖಾಸಗಿ ಸಂಸ್ಥೆಯೊಂದರ ಸಮೀಕ್ಷೆ ಪ್ರಕಾರ ಕೋವಿಡ್ ಕಾಣಿಸಿಕೊಂಡ ಬಳಿಕ 1.47 ಕೋಟಿ ಮಂದಿ ಸಂಘಟಿತ ವಲಯದಲ್ಲಿಯೇ ಉದ್ಯೋಗ ಕಳೆದುಕೊಂಡಿದ್ದಾರೆ. ಈ ಸಮಸ್ಯೆಗೆ ಪರಿಹಾರ ಕಲ್ಪಿಸಲು ಸರ್ಕಾರ ಆದ್ಯತೆ ನೀಡಬೇಕು’ ಎಂದರು.

‘ನಿರುದ್ಯೋಗ ಸಮಸ್ಯೆ ಹಾಗೂ ಸರ್ಕಾರದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ನೀತಿಗೂ ಸಂಬಂಧವಿದೆ. ನಿರುದ್ಯೋಗ ಮತ್ತು ಹಸಿವು ಒಟ್ಟಿಗೆ ಸಾಗುತ್ತವೆ. ಸರ್ಕಾರಗಳು ಹಸಿವನ್ನು ನೀಗಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮುಖ್ಯ. ಆದರೆ, ನಮ್ಮ ಆರ್ಥಿಕ ನೀತಿಯ ದೌರ್ಬಲ್ಯದಿಂದ ಬಡವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಇನ್ನೊಂದೆಡೆ ಕೋಟ್ಯಾಧಿಪತಿಗಳ ಆದಾಯ ದ್ವಿಗುಣವಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ದೇಶವು ಕೊರೊನಾ ಜತೆಗೆ ಅಸಮಾನತೆಯ ವೈರಾಣುವಿನಿಂದಲೂ ನರಳುತ್ತಿದೆ. ಕೋಟ್ಯಾಧೀಶರ ಸಂಖ್ಯೆ ಹೆಚ್ಚಾದರೆ ದೇಶ ಮುಂದುವರಿದಿದೆ ಎನ್ನಬಹುದೆ? ಉಳ್ಳವರು, ಇಲ್ಲದವರ ನಡುವಿನ ಕಂದಕವನ್ನು ನಿವಾರಿಸಬೇಕು. ಪ್ರಜಾಪ್ರಭುತ್ವದಲ್ಲಿ ಯಾರೂ ಅನ್ನ ಇಲ್ಲದೆ ಸಾಯಬಾರದು. ಸಮಾನತೆ ಕೇಂದ್ರಿತ ಆರ್ಥಿಕ ನೀತಿ ಮುಖ್ಯ. ಈ ದೇಶಕ್ಕೆ ಜಾಗತೀಕರಣ ಕಾಂಗ್ರೆಸ್‌ನ ಕೂಸಾಗಿದೆ. ಅದನ್ನು ಈಗಿನ ಸರ್ಕಾರ ಪೋಷಿಸುತ್ತಿದೆ’ ಎಂದು ಟೀಕಿಸಿದರು.

‘ಖಾಸಗೀಕರಣ, ಉದ್ಯೋಗ, ಉದ್ಯಮದ ನೀತಿ’ ಕುರಿತು ಮಾತನಾಡಿದ ಕೆ. ಪ್ರಕಾಶ್, ‘ಖಾಸಗೀಕರಣ 1991ರ ನಂತರ ಮುನ್ನೆಲೆಗೆ ಬಂದಿತು. ಸಾರ್ವಜನಿಕ ಕ್ಷೇತ್ರವನ್ನು ಕಟ್ಟಬೇಕೆಂಬ ಆಶಯವನ್ನು ಖಾಸಗೀಕರಣ ನೀತಿ ಹೊಂದಿರಲಿಲ್ಲ. ಇದು ಬಂಡವಾಳಶಾಹಿಗಳ ಪರವಾಗಿತ್ತು’ ಎಂದು ತಿಳಿಸಿದರು.

ದೆಹಲಿಯಲ್ಲಿ ಹುಬ್ಬಳ್ಳಿ ನೃತ್ಯಪಟುಗಳ ಹೆಜ್ಜೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ದೆಹಲಿಯಲ್ಲಿ ಇದೇ 26ರಂದು ನಡೆಯಲಿರುವ ಗಣರಾಜ್ಯೋತ್ಸವದಲ್ಲಿ ಹುಬ್ಬಳ್ಳಿಯ ಮಯೂರ ನೃತ್ಯ ಅಕಾಡೆಮಿಯ ನೃತ್ಯಪಟುಗಳು ಹೆಜ್ಜೆ ಹಾಕಲಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ, ಈ ವರ್ಷ ವಿವಿಧ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ. ಅದರಲ್ಲಿ ಭರತನಾಟ್ಯಂ ಕೂಡ ಒಂದಾಗಿದೆ. ಪರೇಡ್‌ನಲ್ಲೂ ಭಾಗವಹಿಸಲಿರುವ ಅಕಾಡೆಮಿಯ ಈ ಹತ್ತು ನೃತ್ಯಪಟುಗಳ ತಂಡವು, ಬೆಳಿಗ್ಗೆ 11.30ರ ಸುಮಾರಿಗೆ ಅರ್ಧ ತಾಸು ಕಾರ್ಯಕ್ರಮ ನೀಡಲಿದೆ.

ದೆಹಲಿಯಲ್ಲಿ ಡಿ. 19ರಂದು ನಡೆದ ನಾಲ್ಕನೇ ಹಂತದ ಸ್ಪರ್ಧೆಯಲ್ಲಿ ದೇಶದಾದ್ಯಂತ 65 ನೃತ್ಯ ತಂಡಗಳು ಭಾಗವಹಿಸಿದ್ದವು. ನಮ್ಮ ವಿದ್ಯಾರ್ಥಿಗಳು ಪ್ರದರ್ಶಿಸಿದ ಝಾನ್ಸಿ ರಾಣಿ ಲಕ್ಷ್ಮಿಬಾಯಿ ಜೀವನ ಕುರಿತ ನೃತ್ಯ ರೂಪಕವು ತೀರ್ಪುಗಾರರ ಮೆಚ್ಚುಗೆ ಪಾತ್ರವಾಗಿ, ಗಣರಾಜ್ಯೋತ್ಸವಕ್ಕೆ ಆಯ್ಕೆಯಾಯಿತು’ ಎಂದು ಅಕಾಡೆಮಿಯ ಅಧ್ಯಕ್ಷೆ ವಿದುಷಿ ಹೇಮಾ ವಾಘಮೋಡೆ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ದುಃಸ್ಥಿತಿಯಲ್ಲಿ ಬಾಲಕೃಷ್ಣ ರಂಗಮಂದಿರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಇಲ್ಲಿನ ಬಿಇಎಂಎಲ್ ಬಡಾವಣೆಯ ಟಿ.ಎನ್. ಬಾಲಕೃಷ್ಣ ರಂಗಮಂದಿರ ನಿರ್ವಹಣೆ ಕೊರತೆಯಿಂದ ದುಃಸ್ಥಿತಿಯಲ್ಲಿದೆ.

ಬಿಇಎಂಎಲ್ ಸಂಸ್ಥೆಯು ತನ್ನ ನೌಕರರಿಗಾಗಿ ಬಿಇಎಂಎಲ್ ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆ ಮಾಡಿತ್ತು. ಅದೇ ಸಂದರ್ಭದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸ್ಥಳ ಮೀಸಲಿಟ್ಟು ಟಿ.ಎನ್.ಬಾಲಕೃಷ್ಣ ರಂಗಮಂದಿರ ನಿರ್ಮಿಸಿ ರಾಜರಾಜೇಶ್ವರಿ ನಗರಸಭೆಗೆ ಹಸ್ತಾಂತರ ಮಾಡಿತ್ತು.

ಬಿಇಎಂಎಲ್ ಕಾರ್ಮಿಕರ ಸಹಕಾರ ಸಂಘವು, ಸಾಂಸ್ಕೃತಿಕ, ಧಾರ್ಮಿಕ, ಗ್ರಾಮೀಣ, ಜಾನಪದ ಕಲೆ, ಕ್ರೀಡೆಗಳ ಪ್ರದರ್ಶನಕ್ಕೆಂದು ಬಾಲಕೃಷ್ಣ ಬಯಲು ರಂಗಮಂದಿರ ನಿರ್ಮಿಸಿ 2000ರ ಏಪ್ರಿಲ್ 9ರಂದು ಲೋಕಾರ್ಪಣೆ ಮಾಡಿತು. ಎಲ್ಲ ಸಾಂಸ್ಕೃತಿಕ, ಗ್ರಾಮೀಣ ಕಲೆಗಳ ಪ್ರದರ್ಶನ, ಸಂತೆ, ವಿವಿಧ ಉತ್ಸವ, ಪೌರಾಣಿಕ, ಜಾನಪದ ನಾಟಕ ಪ್ರದರ್ಶನ ಹಾಗೂ ಶಾಲಾ-ಕಾಲೇಜು ಉತ್ಸವ ನಡೆಸಲು ರಾಜರಾಜೇಶ್ವರಿನಗರಕ್ಕೆ ಪ್ರಮುಖ ಸ್ಥಳ ಬಾಲಕೃಷ್ಣ ಬಯಲು ರಂಗಮಂದಿರವಾಗಿದೆ.

ಆದರೆ, ಹೆಸರಿಗೆ ಮಾತ್ರ ಬಾಲಕೃಷ್ಣ ರಂಗಮಂದಿರ ಎಂಬ ದೊಡ್ಡ ನಾಮಫಲಕವಿದೆಯೇ ಹೊರತು, ನಿರ್ವಹಣೆಯ ಕೊರತೆಯಿಂದಾಗಿ ಅವ್ಯವಸ್ಥೆಯಿಂದ ಕೂಡಿದೆ.



ಟಿ.ಎನ್. ಬಾಲಕೃಷ್ಣ ರಂಗಮಂದಿರದಲ್ಲಿ ಒಡೆದಿರುವ ಕಿಟಕಿ ಗಾಜುಗಳು

ಬಂದೋಬಸ್ತ್ ವ್ಯವಸ್ಥೆ ಇಲ್ಲದ ಕಾರಣ ಮಾದಕ ವ್ಯಸನಿಗಳು ಸಿಗರೇಟ್, ಗಾಂಜಾ ಸೇದುವ ಸ್ಥಳವಾಗಿದೆ. ಈ ಬಗ್ಗೆ ಪ್ರಶ್ನಿಸಿದರೆ ಮಾರಕಾಸ್ತ್ರಗಳಿಂದ ಬೆದರಿಸುತ್ತಾರೆ ಎಂದು ಸ್ಥಳೀಯ ಹಿರಿಯ ನಾಗರಿಕರು ಬೇಸರ ವ್ಯಕ್ತಪಡಿಸುತ್ತಾರೆ.

ರಂಗಮಂದಿರದ ರಕ್ಷಣೆಗಾಗಿ ಅಳವಡಿಸಿರುವ ತಂತಿ ಬೇಲಿ ಕಿತ್ತುಹೋಗಿವೆ. ಆವರಣದಲ್ಲೇ ಕಸದ ರಾಶಿ ಇದೆ. ಕಿಟಕಿ ಗಾಜುಗಳು ಸಹ ಒಡೆದುಹೋಗಿವೆ. ರಂಗಮಂದಿರದ ಹಿಂಭಾಗವು ಮೂತ್ರ ವಿಸರ್ಜನೆಯ ಸ್ಥಳವಾಗಿದೆ. ರಂಗಮಂದಿರದ ಒಳಾಂಗಣದಲ್ಲಿ ಹಾಕಲಾಗಿರುವ ವಿದ್ಯುತ್ ವೈರ್‌ಗಳು, ಸ್ವಿಚ್‌ಗಳು ಹಾಳಾಗಿವೆ. ಕೊಳವೆ ಬಾವಿ ಕೆಟ್ಟು ಹೋಗಿದ್ದು, ದುರಸ್ತಿ ಮಾಡದಿರುವುದರಿಂದ ಕಾರ್ಯಕ್ರಮಗಳನ್ನು ನಡೆಸುವ ಸಂದರ್ಭಗಳಲ್ಲಿ ಹೊರಗಿನಿಂದ ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ನಾಗರಿಕರು ದೂರಿದ್ದಾರೆ.

ರಂಗಮಂದಿರದಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸುವ ಮೂಲಕ ಎಂದಿನಂತೆ ಸುಗಮವಾಗಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಅವಕಾಶ ಕಲ್ಪಿಸಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ.

ಬಿಬಿಎಂಪಿ (ಯೋಜನೆ) ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮೋಹನ ಸಿ. ವಂಡರಕೇರಿ ಮಾತನಾಡಿ, ’ರಂಗಮಂದಿರದಲ್ಲಿ ಕಿತ್ತುಹೋಗಿರುವ ಕಿಟಕಿ, ಶೌಚಾಲಯ ನಿರ್ಮಾಣ ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗೆ ₹ 5 ಲಕ್ಷದ ಟೆಂಡರ್ ಕರೆಯಲಾಗುತ್ತಿದೆ‘ ಎಂದರು.

ಬಿಬಿಎಂಪಿ ಪ್ರಭಾರ ಕಾರ್ಯಪಾಲಕ ಎಂಜಿನಿಯರ್ ಬಸವರಾಜು ಮಾತನಾಡಿ ‘ರಂಗಮಂದಿರ ಪುನರ್ ನವೀಕರಣ ಕಾರ್ಯವನ್ನು ₹15 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲು ಯೋಜನೆ ಸಿದ್ಧಪಡಿಸಿದ್ದು, ಕೇಂದ್ರ ಕಚೇರಿ ಅನುಮತಿಗಾಗಿ ಕಳುಹಿಸಲಾಗುವುದು’ ಎಂದರು.

‘ಕನ್ನಡ ನಾಡಿನ ಗಟ್ಟಿ ದನಿ ಚಂಪಾ’

ನುಡಿನ ನಮನ ಕಾರ್ಯಕ್ರಮ– ಸಮಗ್ರ ಸಾಹಿತ್ಯ ಸಂಪುಟ ಪ್ರಕಟಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ನಾಡಿನ ದಿಟ್ಟ ಮತ್ತು ಗಟ್ಟಿ ದನಿಯಾಗಿದ್ದ ಚಂಪಾ ಅವರ ಬದುಕು ಬಂಡಾಯದಿಂದ ಕೂಡಿತ್ತು‘ ಎಂದು ಅಖಿಲ ಭಾರತ ಶರಣ ಸಾಹಿತ್ ಪರಿಷತ್‌ನ ಗೌರವ ಸಲಹೆಗಾರ ಡಾ. ಗೊ.ರು. ಚನ್ನಬಸಪ್ಪ ಸ್ಮರಿಸಿದರು.

ಬೆಂಗಳೂರು ನಗರ ಜಿಲ್ಲೆ ಶರಣ ಸಾಹಿತ್ಯ ಪರಿಷತ್ ಮತ್ತು ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ಲಂಡನ್ ಆಶ್ರಯದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಪ್ರೊ. ಚಂದ್ರಶೇಖರ ಪಾಟೀಲ ಅವರ ನುಡಿ–ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಚಂಪಾ ಅವರ ಸಮಗ್ರ ಸಾಹಿತ್ಯ ಸಂಪುಟವನ್ನು ಪ್ರಕಟಿಸಬೇಕು‘ ಎಂದು ಹೇಳಿದರು.

'ಚಂಪಾ ಮಾತು ತೀಕ್ಷ್ಣ ಮತ್ತು ಹಾಸ್ಯದಿಂದ ಕೂಡಿರುತ್ತಿದ್ದವು. ಜತೆಗೆ, ಉಲ್ಲಾಸದಿಂದ ಕೂಡಿರುತ್ತಿದ್ದವು. ವ್ಯವಸ್ಥೆ ಸುಧಾರಣೆಯಾಗಬೇಕು ಎನ್ನುವ ಬಗ್ಗೆ ಕಾಳಜಿ ಇತ್ತು. ಕಟುವಾದರೂ ಸತ್ಯವಾದನ್ನು ಹೇಳಿ ಜನರ ಅಭಿಮಾನಕ್ಕೆ ಪಾತ್ರರಾಗಿದ್ದರು‘ ಎಂದು ನೆನಪಿಸಿಕೊಂಡರು.



ಪ್ರೊ. ಚಂದ್ರಶೇಖರ ಪಾಟೀಲ ಅವರ ಭಾವಚಿತ್ರಕ್ಕೆ ಅಖಿಲ ಭಾರತ ಶರಣ ಸಾಹಿತ್ ಪರಿಷತ್ ಗೌರವ ಸಲಹೆಗಾರ ಡಾ. ಗೊ.ರು. ಚನ್ನಬಸಪ್ಪ ಪುಷ್ಪ ನಮನ ಸಲ್ಲಿಸಿದರು

'ಚಂಪಾ ಅವರನ್ನು ಹಲವರು ಧರ್ಮ ವಿರೋಧಿ ಎಂದು ಬಿಂಬಿಸಿದ್ದರು. ಆದರೆ, ಅವರು ಪುರೋಹಿತಶಾಹಿ ವ್ಯವಸ್ಥೆ ಹೊಂದಿರುವ ಮತ್ತು ಅರ್ಥ ಇಲ್ಲದ ಆಚರಣೆಗಳಿರುವ ಧರ್ಮವನ್ನು ವಿರೋಧಿಸಿದ್ದರು. ಜೀವನ ಧರ್ಮವನ್ನು ಅವರು ಸದಾ ಪ್ರೀತಿಸುತ್ತಿದ್ದರು‘ ಎಂದು ನುಡಿದರು.

ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, 'ರಾಜಕೀಯ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪಲ್ಲಟಗಳಿಗೆ ಚಂಪಾ ಸದಾ ಪ್ರತಿಕ್ರಿಯಿಸುತ್ತಿದ್ದರು. ಪರಂಪರೆ ಕಟ್ಟಿದ ಚೇತನ ಚಂಪಾ ಅವರು, ಪಾಠ ಮಾಡಿದ್ದು ಇಂಗ್ಲಿಷ್‌ನಲ್ಲಿ. ಆದರೆ ಬರೆದಿದ್ದು ಕನ್ನಡ ಸಾಹಿತ್ಯ‘ ಎಂದು ನೆನಪಿಸಿಕೊಂಡರು.

'ಚಂಪಾ ಅವರಲ್ಲಿ ಜಗಳಗಂಟ ಗುಣವಿತ್ತು. ಹಲವಾರು ಸಾಹಿತಿಗಳ ಜತೆ ಜಗಳವಾಡಿದ್ದಾರೆ. ಈ ಜಗಳದ ಹಿಂದೆ ಪ್ರೀತಿ ಇತ್ತೇ ಹೊರತು ದ್ವೇಷ ಇರಲಿಲ್ಲ‘ ಎಂದು ಹೇಳಿದರು.

'ನಿಮ್ಮ ಪಾದದ ದೂಳಿ ಹಣೆಯ ಮೇಲಿರಲಿ. ಆದರೆ, ಕಣ್ಣಿನಲ್ಲಿ ಬೀಳದಿರಲಿ ಎಂದು ಬೇಂದ್ರೆ ಅವರ ಕುರಿತು ಚಂಪಾ ಬರೆದಿದ್ದರು. ಇದು ಹಿರಿಯರ ಬಗ್ಗೆ ಅವರ ಹೊಂದಿದ್ದ ಗೌರವವಾಗಿತ್ತು. ಜತೆಗೆ, ಹಿರಿಯರು ಹೇಳಿದ್ದೆಲ್ಲವೂ ಶ್ರೇಷ್ಠವಲ್ಲ ಎನ್ನುವುದನ್ನು ಸಹ ಬಿಂಬಿಸುತ್ತಿತ್ತು‘ ಎಂದು ನೆನಪಿಸಿದರು.

ಪತ್ರಕರ್ತ ಜಿ.ಎನ್. ಮೋಹನ್ ಮಾತನಾಡಿ, 'ಚಂಪಾ ಅವರಲ್ಲಿ ಪ್ರತಿಭಟನಾ ಗುಣವಿತ್ತು. ಮನುಷ್ಯನಲ್ಲಿ ಜಗಳಗಂಟ ಗುಣ ಇಲ್ಲದಿದ್ದರೆ ಅಪ್ರಸ್ತುತವಾಗಬಹುದು. ಇಂದು ಸಾಹಿತ್ಯ ಲೋಕಕ್ಕೆ ಜಗಳಗಂಟತನ ಶೂನ್ಯ ಆವರಿಸಿಕೊಂಡಿದೆ‘ ಎಂದರು.

ರಂಗಕರ್ಮಿ ಕೆ.ವಿ. ನಾಗರಾಜಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

ವಿಜಯಪುರ, ಬಾಗಲಕೋಟೆ ಜಿಲ್ಲೆಗಳಿಗೆ ವಿ.ವಿಯ ಕಾರ್ಯವ್ಯಾಪ್ತಿ ಸೀಮಿತ

ಅಕ್ಕಮಹಾದೇವಿ ವಿಶ್ವವಿದ್ಯಾಲಯಕ್ಕೆ ಆತಂಕ?

• ಬಸವರಾಜ್ ಸಂಪಳ್ಳಿ

ವಿಜಯಪುರ: ರಾಜ್ಯದ ಪ್ರಥಮ ಮಹಿಳಾ ವಿಶ್ವವಿದ್ಯಾಲಯ ಎಂಬ ಖ್ಯಾತಿಗೆ ಭಾಜನವಾಗಿರುವ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯಕ್ಕೆ ತನ್ನ ಮೂಲ ಅಸ್ತಿತ್ವ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಸ್ಥಾಪನೆಯಾಗಿ ಎರಡು ದಶಕವಾದರೂ ನಿಶ್ಚಿತ ಗುರಿ ಸಾಧಿಸುವಲ್ಲಿ ವಿಫಲವಾಗಿರುವ ಈ ವಿಶ್ವವಿದ್ಯಾಲಯ ಹೆಸರಿಗಷ್ಟೇ ಮಹಿಳಾ ವಿಶ್ವವಿದ್ಯಾಲಯವಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನು ರದ್ದುಗೊಳಿಸಿ, ಬಾಗಲಕೋಟೆ, ವಿಜಯಪುರ ಅವಳಿ ಜಿಲ್ಲೆಗೆ ಸೀಮಿತವಾಗಿ ಸಾಮಾನ್ಯ ವಿಶ್ವವಿದ್ಯಾಲಯವಾಗಿ ಅಥವಾ ಕ್ಲಸ್ಟರ್ ವಿವಿ ಅಥವಾ ಕ್ಯಾಂಪಸ್ ಬೇಸ್ಡ್ ವಿಶ್ವವಿದ್ಯಾಲಯವಾಗಿ ರೂಪಾಂತರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಚಿಂತನೆ ನಡೆಸಿದೆ.

ಅಕ್ಕಮಹಾದೇವಿ ವಿಶ್ವವಿದ್ಯಾಲಯವನ್ನು ಈಗಿರುವ ರೂಪದಲ್ಲೇ ಉಳಿಸಿಕೊಳ್ಳಬೇಕೇ ಅಥವಾ ವಿಶ್ವವಿದ್ಯಾಲಯವನ್ನು ರದ್ದುಗೊಳಿಸಿ ಸಾಮಾನ್ಯ ವಿವಿಯಾಗಿ ಪರಿವರ್ತಿಸಬೇಕೇ? ಎಂಬಿತ್ಯಾದಿ ಸಾಧಕ, ಬಾಧಕ ತಿಳಿಯಲು ಉನ್ನತ ಶಿಕ್ಷಣ ಇಲಾಖೆಯು ಈಗಾಗಲೇ ರಾಜ್ಯದ ಶಿಕ್ಷಣ ತಜ್ಞರು, ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಉನ್ನತ ಶಿಕ್ಷಣ ಪರಿಷತ್ ಅನ್ನು ರಚಿಸಿದೆ. ಈ ಪರಿಷತ್ ನೀಡುವ ವರದಿ ಆಧರಿಸಿ ಮುಂದಿನ ಕ್ರಮಕೈಗೊಳ್ಳಲಿದೆ ಎಂದು ಇಲಾಖೆಯ ಉನ್ನತ ಮೂಲಗಳು ಖಚಿತಪಡಿಸಿವೆ.



ವಿಜಯಪುರದಲ್ಲಿರುವ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಪ್ರಜಾವಾಣಿ ಚಿತ್ರ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಹೆಸರಿನಲ್ಲಿ ಇರುವ ‘ಮಹಿಳಾ’ ಪದವನ್ನು ಕೈಬಿಟ್ಟು ಕೇವಲ ‘ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ’ ಎಂದು ಹೆಸರು ಬದಲಾಯಿಸಬೇಕು ಎಂಬ ಸರ್ಕಾರದ ನಿಲುವಿಗೆ ರಾಜ್ಯದ ಪ್ರಗತಿಪರ ಮಹಿಳೆಯರು ಹಾಗೂ ವಿರೋಧ ಪಕ್ಷದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ರಾಜ್ಯದ ಏಕಮಾತ್ರ ಮಹಿಳಾ ವಿಶ್ವವಿದ್ಯಾಲಯವೆಂಬ ಕೀರ್ತಿಗೆ ಪಾತ್ರವಾಗಿರುವ ಅಕ್ಕಮಹಾದೇವಿ ವಿವಿಯನ್ನು ರದ್ದು ಪಡಿಸುವ ಹುನ್ನಾರ ನಡೆಯುತ್ತಿದೆ ಎಂಬ ಮಾಹಿತಿ ಬಂದಿದೆ. ರಾಜ್ಯ ಸರ್ಕಾರದ ಈ ನಡೆ ಅಕ್ಷಮ್ಯ, ಇದನ್ನು ಖಂಡಿಸುತ್ತೇನೆ’ ಎಂದು ಶಾಸಕ ಎಂ.ಬಿ.ಪಾಟೀಲ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಒಕ್ಕೂಟ ವಿರೋಧ: ಮಹಿಳಾ ವಿವಿ ವಿಶ್ರಾಂತ ಕುಲಪತಿ ಸಬಿಹಾ ಭೂಮಿಗೌಡ, ಎಚ್.ಜಿ.ರಾಜಲಕ್ಷ್ಮಿ, ಅಕ್ಕೈ ಪದ್ಮಶಾಲಿ, ದು.ಸರಸ್ವತಿ, ವಸುಂಧರ ಭೂಪತಿ ಅವರನ್ನೊಳಗೊಂಡ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ವಿವಿ ರಕ್ಷಣೆಗೆ ಮುಂದಾಗಬೇಕು ಎಂದು ಮನವಿ ಸಲ್ಲಿಸಿದ್ದಾರೆ.

ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ.ನಂಜುಂಡಪ್ಪ ವರದಿ ಆಧರಿಸಿ ಸ್ಥಾಪಿಸಲಾಗಿರುವ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವನ್ನು ಮುಚ್ಚುವ ಹುನ್ನಾರ ನಡೆಸಿರುವ ಬಿಜೆಪಿ ಸರ್ಕಾರದ ನಡೆ ಖಂಡನೀಯ. ಇದರ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ.

ರಾಜಕೀಯ ಬೇಡ: ‘ಅಕ್ಕಮಹಾದೇವಿ ವಿವಿಯ ಸದ್ಯದ ಸ್ಥಿತಿ ಹತ್ತರಲ್ಲಿ ಹನ್ನೊಂದು ಎಂಬಂತಾಗಿದೆ. ಈ ವಿವಿ ಸ್ವಾವಲಂಬಿಯಾಗಿ ಬೆಳೆಯಬೇಕಾದರೆ ಆತ್ಮಾವಲೋಕನದ ಅಗತ್ಯವಿದೆ. ಈ ವಿಷಯ ರಾಜಕೀಯಗೊಳಿಸುವುದು ಬೇಡ. ಚರ್ಚೆಗಳು ನಡೆಯಲಿ. ಬಳಿಕ ಸರ್ಕಾರ ಒಮ್ಮತದಿಂದ ಅಂತಿಮ ತೀರ್ಮಾನ ಕೈಗೊಳ್ಳಲಿದೆ’ ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ವಿಧಾನ ಪರಿಷತ್ ಬಿಜೆಪಿ ಸದಸ್ಯರೊಬ್ಬರು ಸಲಹೆ ನೀಡಿದರು.



ಅಕ್ಕಮಹಾದೇವಿ ವಿವಿ ರಾಷ್ಟ್ರದಲ್ಲೆಡೆ ತನ್ನ ಛಾಪು ಮೂಡಿಸುತ್ತಿದೆ. ಅದಕ್ಕೆ ಹೆಚ್ಚಿನ ಸೌಲಭ್ಯ, ನೀಡಿ ಗೌರವ ಹೆಚ್ಚಿಸುವ ಬದಲು ವಿವಿಯನ್ನೇ ರದ್ದುಗೊಳಿಸುವುದು ಬಾಲಿಷ ನಿರ್ಧಾರ

ಎಂ.ಬಿ.ಪಾಟೀಲ, ವಿಜಯಪುರ ಶಾಸಕ



ವಿವಿ ಮುಚ್ಚುವ, ಹೆಸರು ಬದಲಿಸುವ ಕುರಿತು ಸರ್ಕಾರ ಅಥವಾ ಉನ್ನತ ಶಿಕ್ಷಣ ಇಲಾಖೆಯಿಂದ ಮಾಹಿತಿ ಬಂದಿಲ್ಲ. ಚರ್ಚೆಯೂ ನಡೆದಿಲ್ಲ

ಪ್ರೊ.ಬಿ.ಕೆ.ತುಳಸಿಮಾಲಾ, ಕುಲಪತಿ, ಅಕ್ಕಮಹಾದೇವಿ ಮಹಿಳಾ ವಿವಿ, ವಿಜಯಪುರ

ಕ್ಷಮೆ ಯಾಚಿಸಿದ ಷೊ ರೂಂ ಸಿಬ್ಬಂದಿ

ತುಮಕೂರು: ಕಾರು ಖರೀದಿಸಲು ಶನಿವಾರ ನಗರದ ಷೊ ರೂಂ ಒಂದಕ್ಕೆ ಬಂದಿದ್ದ ಯುವಕನ ವೇಷ ಭೂಷಣ ನೋಡಿ ‘ನಿನ್ನಿಂದ ₹10 ಕೊಡೋಕೆ ಆಗಲ್ಲ. ನೀನು ಕಾರು ಖರೀದಿಸುತ್ತೀಯಾ?’ ಎಂದು ಅವಮಾನಿಸಿ, ಹೊರಕಳಿಸಿದ್ದ ಷೊ ರೂಂ ಸಿಬ್ಬಂದಿ ಯುವಕನ ಕ್ಷಮೆಯಾಚಿಸಿದ್ದಾರೆ.

ಹೆಬ್ಬೂರು ಹೋಬಳಿಯ ರಾಮನಪಾಳ್ಯದ ನಿವಾಸಿ ಕೆಂಪೇಗೌಡ ಕಾರು ಖರೀದಿಸಲು ನಗರದಲ್ಲಿರುವ ಷೊ ರೂಂಗೆ ಭೇಟಿ ನೀಡಿದ್ದರು. ಅವರ ಬಟ್ಟೆ ಮತ್ತು ಜತೆಗಿರುವ ಸ್ನೇಹಿತರನ್ನು ನೋಡಿ ಅಲ್ಲಿನ ಸಿಬ್ಬಂದಿ ‘ನಿನಗೆ ₹10 ನೀಡುವ ಯೋಗ್ಯತೆಯಿಲ್ಲ’ ಎಂದು ಹೀಯಾಳಿಸಿದ್ದರು. ‘₹10 ಲಕ್ಷ ತಂದರೆ ಕಾರು ಕೊಡುತ್ತೇವೆ‘ ಎಂದು ಷೊ ರೂಂನಿಂದ ವಾಪಸ್ ಕಳುಹಿಸಿದ್ದರು. ಇದನ್ನೇ ಸವಾಲಾಗಿ ಸ್ವೀಕರಿಸಿದ ಯುವಕ, ಘಟನೆ ನಡೆದ ಅರ್ಧ ಗಂಟೆಯಲ್ಲಿ ₹10 ಲಕ್ಷ ಹಣ ಹೊಂದಿಸಿಕೊಂಡು ಹಿಂದಿರುಗಿದ್ದರು.

‘ದೊಡ್ಡ ಮೊತ್ತದ ನಗದು ಒಂದೇ ಬಾರಿ ಸ್ವೀಕರಿಸಲು ಸಾಧ್ಯವಿಲ್ಲ. ಈಗಾಗಲೇ ಆರ್‌ಟಿಒ ಕಚೇರಿ ಅವಧಿ ಮುಗಿದಿದ್ದರಿಂದ ಕಾರು ನೀಡಲು ಆಗುವುದಿಲ್ಲ’ ಎಂದು ಸಿಬ್ಬಂದಿ ತಿಳಿಸಿದ್ದರು. ಕೆಂಪೇಗೌಡ ತಮಗೆ ಅವಮಾನ ಮಾಡಿದ ಷೊ ರೂಂನಲ್ಲಿ ಕಾರು ಖರೀದಿಸದೇ ಸಿಬ್ಬಂದಿಯ ವರ್ತನೆಯನ್ನು ಖಂಡಿಸಿದರು.



ಪಟ್ಟನಾಯಕನಹಳ್ಳಿ ಓಂಕಾರೇಶ್ವರ ರಥೋತ್ಸವವನ್ನು ಕೊರೊನಾ ಹಿನ್ನೆಲೆಯಲ್ಲಿ ಕ್ರೇನ್ ಮೂಲಕ ಎಳೆಯಲಾಯಿತು

ಪಟ್ಟನಾಯಕನಹಳ್ಳಿ: ಕ್ರೇನ್ ಬಳಸಿ ರಥ ಎಳೆದರು

ಪ್ರಜಾವಾಣಿ ವಾರ್ತೆ

ಪಟ್ಟನಾಯಕನಹಳ್ಳಿ: ಇಲ್ಲಿನ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಮಹಾಸಂಸ್ಥಾನ ಮಠದ ವತಿಯಿಂದ ನಡೆದ ಜಾತ್ರಾ ಮಹೋತ್ಸವದಲ್ಲಿ ಕ್ರೇನ್ ಮೂಲಕ ಓಂಕಾರೇಶ್ವರ ಸ್ವಾಮಿ ರಥವನ್ನು ಎಳೆಯಲಾಯಿತು.

ಕೊರೊನಾ ಹಿನ್ನೆಲೆಯಲ್ಲಿ ಜಾತ್ರೆಗೆ ತಾಲ್ಲೂಕು ಆಡಳಿತ ಅನುಮತಿ ನೀಡಲು ನಿರಾಕರಿಸಿದ ಹಿನ್ನೆಲೆಯಲ್ಲಿ ಸರಳವಾಗಿ ಜಾತ್ರಾ ಮಹೋತ್ಸವ ಆಚರಿಸಲಾಯಿತು.

ಮಠದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಅವರು ಮಧ್ಯಾಹ್ನ 2.25ಕ್ಕೆ ರಥೋತ್ಸವಕ್ಕೆ ಈಡುಗಾಯಿ ಹಾಕುವ ಮೂಲಕ ಚಾಲನೆ ನೀಡಿದರು.

ರಥ ಭವಿಷ್ಯ: ರಥೋತ್ಸವ ಮುಗಿದ ಬಳಿಕ ರಥ ನಿಂತ ಬಂಗಿಯನ್ನು ನೋಡಿ ಜನರು ಈ ವರ್ಷದ ಮಳೆ ಬೆಳೆ ಕುರಿತು ರಾಜ್ಯ ಹಾಗೂ ದೇಶದ ಪ್ರಸಕ್ತ ವಿದ್ಯಮಾನಗಳ ಬಗ್ಗೆ ಭವಿಷ್ಯ ನುಡಿದರು.

ಶಹಾಬಾದ್‌ನ ಇಎಸ್‌ಐ ಆಸ್ಪತ್ರೆ ಪುನರುಜ್ಜೀವನಗೊಳಿಸಲು ರಾಜ್ಯ ಸರ್ಕಾರದಿಂದ ₹ 12 ಕೋಟಿ ಅನುದಾನ

ನವೀಕರಣಗೊಂಡರೂ ಸೇವೆ ಅಲಭ್ಯ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಶಹಾಬಾದ್ ಹೊರವಲಯದಲ್ಲಿರುವ ಕಾರ್ಮಿಕರ ರಾಜ್ಯ ವಿಮಾ ನಿಗಮದ ಆಸ್ಪತ್ರೆ (ಇಎಸ್‌ಐ) 20 ವರ್ಷಗಳಿಂದ ಪಾಳು ಬಿದ್ದಿತ್ತು. ಅದನ್ನು ನವೀಕರಣಗೊಳಿಸಲಾಗಿದ್ದು, ಎಲ್ಲವೂ ನಿರೀಕ್ಷೆಯಂತೆ ನಡೆದಿದ್ದರೆ 2021ರ ಜುಲೈ ಅಂತ್ಯದ ವೇಳೆಗೆ ಇದು ಸೇವೆಗೆ ಲಭ್ಯವಾಗಬೇಕಿತ್ತು.

ಕೋವಿಡ್ ರೋಗಿಗಳಿಗೆ ಉತ್ತಮ ಚಿಕಿತ್ಸೆ ದೊರಕಿಸಲು ರಾಜ್ಯ ಸರ್ಕಾರ ಈ ಆಸ್ಪತ್ರೆಯನ್ನು ಪುನರುಜ್ಜೀವನಗೊಳಿಸಲು ₹ 12 ಕೋಟಿ ಅನುದಾನ ನೀಡಿದೆ. ₹4.68 ಕೋಟಿ ವೆಚ್ಚ ಮಾಡಿ ಕಟ್ಟಡ ನವೀಕರಣಗೊಳಿಸಲಾಗಿದೆ.

'120 ಹಾಸಿಗೆಗಳ ಸಾಮರ್ಥ್ಯದ ಈ ಆಸ್ಪತ್ರೆಗೆ ವೈದ್ಯಕೀಯ ಉಪಕರಣಗಳ ಖರೀದಿ ನಡೆದಿದೆ. ನವೀಕರಣ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಆಮ್ಲಜನಕ ಪೂರೈಕೆ ಕೊಳವೆ ಮಾರ್ಗ ಅಳವಡಿಕೆ ಕಾರ್ಯ, ಉಪಕರಣಗಳ ಅಳವಡಿಕೆ ಮತ್ತು ವೈದ್ಯರ ನೇಮಕಾತಿ ಮಾತ್ರ ಬಾಕಿ ಇದೆ' ಎಂದು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕೃಷ್ಣ ಅಗ್ನಿಹೋತ್ರಿ ಹೇಳುತ್ತಾರೆ.

'ಈ ಆಸ್ಪತ್ರೆಗೆ ಸುಣ್ಣ ಬಣ್ಣ ಬಳಿದಿದ್ದು ಬಿಟ್ಟರೆ ಬೇರೇನೂ ಮಾಡಿಲ್ಲ. ಅಗತ್ಯ ವೈದ್ಯಕೀಯ ಸಲಕರಣೆ ಬಂದಿಲ್ಲ. ಆಸ್ಪತ್ರೆಯನ್ನು ಆರೋಗ್ಯ ಇಲಾಖೆ ನಡೆಸಬೇಕೋ, ಇಎಸ್‌ಐನವರು ನಡೆಸಬೇಕೋ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಇಎಸ್‌ಐನವರು ತಮಗೆ ಈಗಲೇ ಇರುವ ಆಸ್ಪತ್ರೆಗಳನ್ನು ನಡೆಸಲು ಆಗುತ್ತಿಲ್ಲ ಎಂದಿದ್ದಾರೆ. ಆರೋಗ್ಯ ಇಲಾಖೆಯವರನ್ನು ಕೇಳಿದರೆ ಹೊಸ ನೇಮಕಾತಿ ಆಗಬೇಕು. ಅದಕ್ಕಾಗಿ ಆರ್ಥಿಕ ಇಲಾಖೆಯ ಒಪ್ಪಿಗೆ ಬೇಕು ಎನ್ನುತ್ತಾರೆ. ಹಣ ಖರ್ಚಾದರೂ ಜನರಿಗೆ ಚಿಕಿತ್ಸೆ ಸಿಗದ ಸ್ಥಿತಿ ಇದೆ' ಎನ್ನುತ್ತಾರೆ ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ.


ಶಹಾಬಾದ್‌ನ ಇಎಸ್‌ಐ ಆಸ್ಪತ್ರೆ ನವೀಕರಣಗೊಂಡಿರುವುದು

ಹತ್ತಾರು ಕಿ.ಮೀ. ಅಲೆದಾಡಬೇಕಾದ ಸ್ಥಿತಿ

ಹುಬ್ಬಳ್ಳಿ: ಉತ್ತರ ಕನ್ನಡ ಹಾಗೂ ಬೆಳಗಾವಿ ಜಿಲ್ಲೆಯ ಕಾಡು ಪ್ರದೇಶಗಳಲ್ಲಿರುವ ಗ್ರಾಮಗಳ ಜನರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತೆರಳಲು ಹತ್ತಾರು ಕಿ.ಮೀ. ನಡೆದುಕೊಂಡೇ ಹೋಗಬೇಕಾಗಿದೆ. ಮಳೆ ಬಂದರೆ ನೀರು ಹೆಚ್ಚಿನ ಪ್ರಮಾಣದಲ್ಲಿ ಹರಿಯುವುದರಿಂದ ಸಂಪರ್ಕವನ್ನೇ ಕಳೆದುಕೊಂಡು ಬಿಡುತ್ತವೆ. ಆಗ ಆರೋಗ್ಯ ಸೇವೆ ಪಡೆಯಲು ಇಲ್ಲಿನ ಜನರು ಪರದಾಡಬೇಕಾಗುತ್ತದೆ.

ಕಿತ್ತೂರು ಕರ್ನಾಟಕ ಭಾಗದಲ್ಲಿ ಈಗಲೂ ಜನಸಂಖ್ಯೆಗೆ ತಕ್ಕಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲ. ಇರುವ ಎಲ್ಲ ಪಿಎಚ್‌ಸಿಗಳಲ್ಲಿಯೂ ವೈದ್ಯರಿಲ್ಲ. ಎರಡೆರಡು ಪಿಎಚ್‌ಸಿಗಳ ಹೊಣೆ ಅವರ ಮೇಲಿದೆ. ಬೆಳಿಗ್ಗೆ ಬಂದರೆ, ಮಧ್ಯಾಹ್ನ ಇರುವುದಿಲ್ಲ. ರಾತ್ರಿ ವೇಳೆ ಆರೋಗ್ಯದಲ್ಲಿ ಏರುಪೇರಾದರೆ ತಾಲ್ಲೂಕು ಆಸ್ಪತ್ರೆಗಳಿಗೆ ದೌಡಾಯಿಸಬೇಕಾದ ಸ್ಥಿತಿ ಇದೆ. ಅಲ್ಲಿಯೂ ತಜ್ಞ ವೈದ್ಯರ ಕೊರತೆ ಇದ್ದು, ಜಿಲ್ಲಾ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ತುರ್ತು ಚಿಕಿತ್ಸೆ ಈಗಲೂ ಗ್ರಾಮೀಣ ಪ್ರದೇಶದ ಜನರಿಗೆ ಗಗನಕುಸುಮವಾಗಿದೆ.

ಸಾಕಷ್ಟು ಪಿಎಚ್‌ಸಿ ಕೇಂದ್ರಗಳಲ್ಲಿ ಎಂಬಿಬಿಎಸ್ ವೈದ್ಯರಿಲ್ಲ. ಆಯುಷ್ ವೈದ್ಯರ ಮೇಲೆ ನಡೆಸಲಾಗುತ್ತಿದೆ. ಎಕ್ಸ್‌ರೇ, ಸ್ಕ್ಯಾನಿಂಗ್, ರಕ್ತ ಪರೀಕ್ಷೆ ಪ್ರಯೋಗಾಲಯಗಳಲ್ಲಿ ಯಂತ್ರಗಳಿಲ್ಲದ್ದರಿಂದ ಖಾಸಗಿ ಆಸ್ಪತ್ರೆ, ಪ್ರಯೋಗಾಲಯಗಳ ಮೊರೆ ಹೋಗಬೇಕಾದ ಸ್ಥಿತಿ ಇದೆ. ಸರ್ಕಾರಿ ಆಸ್ಪತ್ರೆಗೆ ದಾಖಲಾದರೂ, ಸ್ಕ್ಯಾನಿಂಗ್, ಕೆಲ ರಕ್ತ ಪರೀಕ್ಷೆಗಳನ್ನು ಹೊರಗಡೆಯೇ ಮಾಡಿಸಬೇಕಾಗಿದೆ. ಇದರಿಂದ ಬಡ ಜನರ ಮೇಲೆ ಆರ್ಥಿಕ ಹೊರೆ ಬೀಳುತ್ತಿದೆ.

ಸಮಯಕ್ಕೆ ವೈದ್ಯರು ಬರಲ್ಲ; ಸಿಬ್ಬಂದಿ ಕೊರತೆ

ಮೈಸೂರು: ಮೈಸೂರು ಜಿಲ್ಲೆಯ ಗ್ರಾಮಾಂತರ ಭಾಗದ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯರು ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಬಹುತೇಕ ವೈದ್ಯರು ನಗರದಲ್ಲಿ ನೆಲೆಸಿದ್ದು, ಗ್ರಾಮಾಂತರ ಆರೋಗ್ಯ ಕೇಂದ್ರ ತಲುಪುವಷ್ಟರಲ್ಲಿ ಮಧ್ಯಾಹ್ನ 12 ಗಂಟೆಯಾಗಿರುತ್ತದೆ. ಸಂಜೆಯೂ ಬೇಗನೇ ಹೊರಟು ಹೋಗುತ್ತಾರೆ. ಜೊತೆಗೆ ಸಿಬ್ಬಂದಿ ಕೊರತೆ. ನರ್ಸ್‌ಗಳು ಇಲ್ಲ, ಸೌಲಭ್ಯವೂ ಇಲ್ಲ.

ಮೈಸೂರು ತಾಲ್ಲೂಕಿನ ಕಡಕೊಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರಾತ್ರಿ ವೇಳೆ ಚಿಕಿತ್ಸೆಯೇ ಸಿಗುವುದಿಲ್ಲ. ಮೈಸೂರು– ನಂಜನಗೂಡು ರಾಷ್ಟ್ರೀಯ ಹೆದ್ದಾರಿಯಲ್ಲೇ ಈ ಗ್ರಾಮವಿದ್ದು, ಗರ್ಭಿಣಿಯರು, ಅಪಘಾತಕ್ಕೆ ಒಳಗಾದವರು ತುರ್ತು ಚಿಕಿತ್ಸೆ ಸಿಗದೆ ಪರದಾಡುವಂತಾಗಿದೆ.

ಚಾಮರಾಜನಗರದ ಬಹುತೇಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಸ್ಥಳೀಯವಾಗಿ ಉಳಿದುಕೊಳ್ಳುತ್ತಿಲ್ಲ. ತಡವಾಗಿ ಬರುವುದು, ಸಂಜೆ ಬೇಗ ಹೋಗುವ ದೂರುಗಳಿವೆ.

ಕೊಡಗು ಜಿಲ್ಲೆಯಲ್ಲಿ 104 ಗ್ರಾಮ ಪಂಚಾಯಿತಿಗಳಿದ್ದು, ಕೇವಲ 27 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಗುಡ್ಡಗಾಡು ಪ್ರದೇಶದ ಜನರು ಹಾಗೂ ತೋಟದ ಕಾರ್ಮಿಕರು ಕೊರೊನಾ ವೈರಾಣು ಸೋಂಕಿಗೆ ತುತ್ತಾದರೆ ದೂರದ ಆರೋಗ್ಯ ಕೇಂದ್ರಕ್ಕೆ ತೆರಳಿ, ತಪಾಸಣೆಗೆ ಒಳಗಾಗುವ ಪರಿಸ್ಥಿತಿ ಇದೆ.

ಆಸ್ಪತ್ರೆ ಇದ್ದರೂ ತಪ್ಪದ ಅಲೆದಾಟ

ರಾಯಚೂರು: ಸಾಲಗುಂದಾ ಪ್ರಾಥಮಿಕ ಆರೋಗ್ಯ ಕೇಂದ್ರವು ಸುಸಜ್ಜಿತ ಕಟ್ಟಡ ಹೊಂದಿದ್ದರೂ ಕಾಯಂ ವೈದ್ಯರಿಲ್ಲ. ಒಂದು ವರ್ಷದಿಂದ ವೈದ್ಯರ ಹುದ್ದೆ ಖಾಲಿ ಇದೆ. ನಿಯೋಜನೆ ಮೇಲೆ ವೈದ್ಯರನ್ನು ನೇಮಿಸಿದರೂ, ಅವರು ಪದೇ ಪದೇ ಬದಲಾಗುತ್ತಾರೆ.

'ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕು ಕೇಂದ್ರದಿಂದ 20 ಕಿ.ಮೀ. ಮತ್ತು ರಾಯಚೂರಿನಿಂದ 110 ಕಿ.ಮೀ.ದೂರದಲ್ಲಿರುವ ಸಾಲಗುಂದಾ ಗ್ರಾಮದ ಜನಸಂಖ್ಯೆ 10 ಸಾವಿರಕ್ಕೂ ಹೆಚ್ಚು. ಹಾವು ಕಡಿತ, ಹೆರಿಗೆ ನೋವು ಮುಂತಾದವುಗಳಿಗೆ ಸಿಂಧನೂರು ಇಲ್ಲವೇ ರಾಯಚೂರಿಗೆ ದೌಡಾಯಿಸಬೇಕು. ಇಲ್ಲಿ ಆಂಬುಲೆನ್ಸ್ ಕೂಡ ಇಲ್ಲ' ಎಂದು ಸಾಲಗುಂದಾ ನಿವಾಸಿ ಎಸ್.ಎಂ.ಖಾದ್ರಿ ಹೇಳುತ್ತಾರೆ.

'ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತುರ್ತು ಚಿಕಿತ್ಸೆ ಸಿಗುವುದರ ಬಗ್ಗೆ ಖಾತ್ರಿ ಇರುವುದಿಲ್ಲ. ವಾಹನದ ವ್ಯವಸ್ಥೆ ಮಾಡಿಕೊಂಡು ತಾಲ್ಲೂಕು ಅಥವಾ ಜಿಲ್ಲಾ ಆಸ್ಪತ್ರೆಗೆ ಹೋಗಬೇಕು' ಎಂದು ಅವರು ವಿವರಿಸುತ್ತಾರೆ.

'ರೋಗಿಗಳ ಚಿಕಿತ್ಸೆಗೆಂದೇ ಎರಡು ದಿನಗಳ ಹಿಂದೆಯಷ್ಟೇ ಆಯುಷ್ ವೈದ್ಯರನ್ನು ನೇಮಿಸಲಾಗಿದೆ. ಆಂಬುಲೆನ್ಸ್ ಸೌಲಭ್ಯಕ್ಕಾಗಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಅಯ್ಯನಗೌಡ ಹೇಳುತ್ತಾರೆ.

ಪ್ರಥಮ ಮುಖ್ಯಮಂತ್ರಿ ಹುಟ್ಟೂರಲ್ಲಿ ವೈದ್ಯರಿಲ್ಲ

ಕೋಲಾರ: ರಾಜ್ಯದ ಪ್ರಥಮ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ಹುಟ್ಟೂರಾದ ಕ್ಯಾಸಂಬಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರವು ಕಾಯಂ ವೈದ್ಯರಿಲ್ಲದೆ ರೋಗಗ್ರಸ್ತವಾಗಿದೆ.

ಕೆಜಿಎಫ್ ತಾಲ್ಲೂಕಿನ ಕ್ಯಾಸಂಬಳ್ಳಿಯು ಹೋಬಳಿ ಕೇಂದ್ರವಾಗಿದ್ದು, ಸುಮಾರು 2 ಸಾವಿರ ಜನಸಂಖ್ಯೆ ಹೊಂದಿದೆ. ಅಕ್ಕಪಕ್ಕದ 100ಕ್ಕೂ ಹೆಚ್ಚು ಹಳ್ಳಿಗಳ ಜನರು ವೈದ್ಯಕೀಯ ಸೇವೆಗೆ ಈ ಹೋಬಳಿ ಕೇಂದ್ರದ ಆಸ್ಪತ್ರೆಯನ್ನು ಅವಲಂಬಿಸಿದ್ದಾರೆ.

ಇಲ್ಲಿ ವೈದ್ಯರಾಗಿದ್ದ ಡಾ.ಸುನಿಲ್ ಅವರು ಕೆಜಿಎಫ್ ತಾಲ್ಲೂಕು ಆರೋಗ್ಯಾಧಿಕಾರಿಯಾಗಿ ಮುಂಬಡ್ತಿ ಪಡೆದು ಹೋದ ನಂತರ ಕಳೆದೊಂದು ವರ್ಷದಿಂದ ಈ ಆರೋಗ್ಯ ಕೇಂದ್ರಕ್ಕೆ ಕಾಯಂ ವೈದ್ಯರನ್ನು ನೇಮಿಸಿಲ್ಲ.

ಸುದ್ದಿ 2 ನಿಮಿಷ

'ಸಿದ್ದರಾಮಯ್ಯ ಉರಿಯುವ ಬೆಂಕಿಯಲ್ಲಿ ಮೈ ಕಾಯಿಸುತ್ತಿದ್ದಾರೆ'

ಬೆಂಗಳೂರು: ಕೇರಳದ ಕಮ್ಯುನಿಸ್ಟ್ ಸರ್ಕಾರವು ನಾರಾಯಣ ಗುರುಗಳ ಹೆಸರನ್ನು ಬಳಸಿ ತಂದು ಸೃಷ್ಟಿಸಿರುವ ಪ್ರಚೋದಿತ ವಿವಾದದ ಉರಿಯುವ ಬೆಂಕಿಯಲ್ಲಿ ರಾಜ್ಯ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮೈ ಕಾಯಿಸಿಕೊಳ್ಳುತ್ತಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಟೀಕಿಸಿದ್ದಾರೆ.

ಈ ಕುರಿತು ಭಾನುವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಮಂಗಳೂರಿನ ಲೇಡಿ ಹಿಲ್ ವೃತ್ತಕ್ಕೆ ನಾರಾಯಣ ಗುರುಗಳ ಹೆಸರನ್ನು ನಾಮಕರಣ ಮಾಡಲು ಅಲ್ಲಿನ ಮಹಾನಗರ ಪಾಲಿಕೆ ನಿರ್ಣಯ ತೆಗೆದುಕೊಂಡಾಗ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ವಿರೋಧಿಸಿತ್ತು. ಆ ಸಮಯದಲ್ಲಿ ನೀವು ಮೌನಕ್ಕೆ ಶರಣಾಗಿದ್ದಿರಿ. ಆಗ ನಿಮಗೆ ನಾರಾಯಣ ಗುರುಗಳ ಬಗ್ಗೆ ಗೌರವ ಇರಲಿಲ್ಲವೇ? ಕೇರಳ ಸರ್ಕಾರ ಸೃಷ್ಟಿಸಿದ ಪ್ರಶ್ನೆನ್ನು ನೀವು ಏಕೆ ಪ್ರೋತ್ಸಾಹಿಸುತ್ತೀರಿ' ಎಂದು ಪ್ರಶ್ನಿಸಿದ್ದಾರೆ.

'ಕೇಂದ್ರ ಸರ್ಕಾರ ನೇರವಾಗಿ ಸ್ತಬ್ಧಚಿತ್ರಗಳನ್ನು ಆಯ್ಕೆ ಮಾಡುವುದಿಲ್ಲ. ಆ ಕೆಲಸವನ್ನು ರಕ್ಷಣಾ ಇಲಾಖೆಯ ಅಧಿಕಾರಿಗಳು ಮಾಡುತ್ತಾರೆ. ಈ ವಿಷಯದಲ್ಲಿ ನಾರಾಯಣ ಗುರು ಮತ್ತು ಶಂಕರಾಚಾರ್ಯರ ಹೆಸರನ್ನು ಎಳೆದು ತಂದು ಸಮಾಜ ಒಡೆಯಲು ಕೇರಳ ಸರ್ಕಾರ ಯತ್ನಿಸುತ್ತಿದೆ. ಈ ವಿವಾದದ ಕೂಸನ್ನು ರಾಜ್ಯದಲ್ಲಿ ಎತ್ತಿ ಆಡಿಸುತ್ತಿರುವ ಸಿದ್ದರಾಮಯ್ಯ, ಇಲ್ಲಿಯೂ ಸಮಾಜವನ್ನು ಒಡೆಯಲು ಪ್ರಯತ್ನಿಸುತ್ತಿದ್ದಾರೆ' ಎಂದರು.

₹7.68 ಲಕ್ಷಕ್ಕೆ ಹಳ್ಳಿಕಾರ್ ಎತ್ತು ಮಾರಾಟ



ಶ್ರೀರಂಗಪಟ್ಟಣ (ಮಂಡ್ಯ): ತಾಲ್ಲೂಕಿನ ಪಾಲಹಳ್ಳಿಯ ವಿನೋದ್ ಎಂಬುವವರ ಹಳ್ಳಿಕಾರ್ ತಳಿಯ ಒಂಟಿ ಎತ್ತು ₹7.68 ಲಕ್ಷಕ್ಕೆ ಮಾರಾಟವಾಗಿದೆ. ಚಿಕ್ಕಮಗಳೂರಿನ ತೇಗೂರು ಮಂಜುನಾಥ್ ಈ ಎತ್ತನ್ನು ಭಾನುವಾರ ಖರೀದಿಸಿದರು.

ಒಂದು ವರ್ಷದ ಹಿಂದೆ ವಿನೋದ್ ಈ ಎತ್ತನ್ನು ₹4.5 ಲಕ್ಷಕ್ಕೆ ಖರೀದಿಸಿದ್ದರು. ಅದಕ್ಕೆ 'ಕಿಂಗ್ ಗಗನ್' ಎಂದು ಹೆಸರಿಟ್ಟಿದ್ದರು. ಹಳ್ಳಿಕಾರ್ ತಳಿಯ ಒಂಟಿ ಎತ್ತು ಇಷ್ಟು ಬೆಲೆಗೆ ಮಾರಾಟವಾಗಿರುವುದು ಈ ಭಾಗದಲ್ಲಿ ಇದೇ ಮೊದಲು ಎಂದು ಗ್ರಾಮಸ್ಥರು ಹೇಳಿದ್ದಾರೆ.

ಈ ಎತ್ತು ಇದುವರೆಗೆ 80ಕ್ಕೂ ಹೆಚ್ಚು ಎತ್ತಿನಗಾಡಿ ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಿದೆ. ಇದು ಮತ್ತೊಂದು ಎತ್ತಿನ ಜತೆಗೂಡಿ ಸುಮಾರು 70 ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಸ್ಥಾನ ಗಳಿಸಿದೆ. ಎತ್ತನ್ನು ಖರೀದಿದಾರರಿಗೆ ಹಸ್ತಾಂತರಿಸುವ ಮುನ್ನ ವಿನೋದ್ ಮತ್ತು ಅವರ ಕುಟುಂಬ ಸದಸ್ಯರು ಅದಕ್ಕೆ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಿದರು.

'ನನ್ನ ಬಳಿ ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ಸಾಧನೆ ಮಾಡಿರುವ 'ಅಪ್ಪಣ್ಣ' ಹೆಸರಿನ ಮತ್ತೊಂದು ಹಳ್ಳಿಕಾರ್ ತಳಿಯ ಎತ್ತು ಇದ್ದು, ಅದೂ ₹ 7 ಲಕ್ಷ ಬೆಲೆ ಬಾಳುತ್ತದೆ' ಎಂದು ವಿನೋದ್ ಹೇಳಿದರು.

ಜಾರಕಿಹೊಳಿ ಸಹೋದರರನ್ನು ದೂರವಿಟ್ಟು ಕತ್ತಿ ಸಭೆ

ಒಂದನೇ ಪುಟದಿಂದ....

ಶಾಸಕ ಅನಿಲ ಬೆನಕೆ ಹಾಗೂ ಮಹಾಂತೇಶ ದೊಡ್ಡಗೌಡರ ಅವರಿಗೆ ನಿಗಮ–ಮಂಡಳಿ ಅಧ್ಯಕ್ಷ ಗಾದಿ ಕೊಡಬೇಕು ಎಂದು ಮುಖ್ಯಮಂತ್ರಿಯನ್ನು ಒತ್ತಾಯಿಸುವ ನಿರ್ಧಾರಕ್ಕೆ ಮುಖಂಡರು ಬಂದಿದ್ದಾರೆ ಎನ್ನಲಾಗಿದೆ. ಸಂಸದೆ ಮಂಗಲಾ ಅಂಗಡಿ ಪಾಲ್ಗೊಂಡಿರಲಿಲ್ಲ. ಶಾಸಕರಾದ ರಮೇಶ ಜಾರಕಿಹೊಳಿ ಮತ್ತು ಬಾಲಚಂದ್ರ ಜಾರಕಿಹೊಳಿ ಅವರಿಗೆ ಆಹ್ವಾನ ಇರಲಿಲ್ಲ ಎಂದು ತಿಳಿದುಬಂದಿದೆ. 'ಈಚೆಗೆ ನಡೆದ ವಿಧಾನಪರಿಷತ್, ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷಕ್ಕೆ ಆಗಿರುವ ಹಾನಿ, ಮುಖಂಡರಿಂದಲೇ ಬಿದ್ದಿರುವ ಒಳಹೊಡೆತ ಮೊದಲಾದ ವಿಷಯಗಳ ಕುರಿತು ಚರ್ಚೆ ನಡೆದಿದೆ. ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಲಖನ್ ಜಾರಕಿಹೊಳಿ ಕಣಕ್ಕಿಳಿಸಿದ್ದರಿಂದ ಅಧಿಕೃತ ಅಭ್ಯರ್ಥಿ ಸೋಲನುಭವಿಸಬೇಕಾಯಿತು. ಇಂತಹ ಬೆಳವಣಿಗೆಗಳು ಸಂಘಟನೆಗೆ ಒಳ್ಳೆಯದಲ್ಲ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಜಾರಕಿಹೊಳಿ ಸಹೋದರರಿಂದ ಪಕ್ಷಕ್ಕೆ ಹಾನಿ ಆಗುತ್ತಿರುವುದನ್ನು ತಡೆಯುವುದು ಹೇಗೆ ಎಂಬಿತ್ಯಾದಿ ವಿಷಯಗಳ ಕುರಿತು ಸಮಾಲೋಚನೆ ನಡೆಸಿದ್ದಾರೆ' ಎಂದು ಮೂಲಗಳು ಮಾಹಿತಿ ನೀಡಿವೆ. ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಪಕ್ಷಕ್ಕೆ ಹೊಡೆತ ಬೀಳದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ವರಿಷ್ಠರು ಕ್ರಮ ಕೈಗೊಳ್ಳಬೇಕು. ನೇಮಕಾತಿಗಳಲ್ಲಿ ಪಕ್ಷ ನಿಷ್ಠರಿಗೆ ಮಣೆ ಹಾಕಬೇಕು ಎಂಬ ಒತ್ತಾಯ ವ್ಯಕ್ತವಾಯಿತು ಎನ್ನಲಾಗಿದೆ.

ಸಿಬ್ಬಂದಿ ಕೊರತೆಗಿಲ್ಲ ಮದ್ದು!

ಒಂದನೇ ಪುಟದಿಂದ

ಹೆಚ್ಚಿನ ಪಿಎಚ್‌ಸಿ ಮತ್ತು ಸಿಎಚ್‌ಸಿಗಳಲ್ಲಿ ಒಬ್ಬ ಸಿಬ್ಬಂದಿ ಎರಡರಿಂದ ಮೂರು ಹುದ್ದೆಗಳ ಕಾರ್ಯಭಾರ ನಿರ್ವಹಿಸುತ್ತಿದ್ದಾರೆ. ವೈದ್ಯರೇ ಡೇಟಾ ಎಂಟ್ರಿ ಕೆಲಸವನ್ನೂ ಮಾಡಬೇಕಾದ ಸ್ಥಿತಿ ಇದೆ' ಎಂದು ಸಿಬ್ಬಂದಿ ಕೊರತೆಯ ಚಿತ್ರಣ ಮುಂದಿಡುತ್ತಾರೆ ವಿವಿಧ ಜಿಲ್ಲೆಗಳ ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ತಾಲ್ಲೂಕು ಆರೋಗ್ಯಾಧಿಕಾರಿಗಳು.

ಸೌಲಭ್ಯಗಳ ಬರ: ರಾಜ್ಯದ ಪಿಎಚ್‌ಸಿ ಮತ್ತು ಸಿಎಚ್‌ಸಿಗಳಲ್ಲಿ ಸೌಲಭ್ಯಗಳ ಕೊರತೆಯೂ ತೀವ್ರವಾಗಿದೆ. ಹಲವೆಡೆ ಪ್ರಯೋಗಾಲಯಗಳ ಯಂತ್ರೋಪಕರಣಗಳು ಕೆಟ್ಟು ಕುಳಿತಿವೆ. ಕೆಲವು ಕಡೆಗಳಿಗೆ ಯಂತ್ರೋಪಕರಣ ಪೂರೈಕೆಯೇ ಆಗಿಲ್ಲ. ಹಾಸಿಗೆ, ಪೀಠೋಪಕರಣ, ಕಂಪ್ಯೂಟರ್‌ಗಳ ಕೊರತೆ ಕಾಡುತ್ತಿದೆ. 'ತಾಲ್ಲೂಕಿಗೆ ಒಂದೆರಡು ಆರೋಗ್ಯ ಕೇಂದ್ರಗಳಲ್ಲಿ ಮಾತ್ರ ವೈದ್ಯರು, ಸಿಬ್ಬಂದಿ ಓಡಾಟಕ್ಕೆ ಸ್ವಂತ ವಾಹನಗಳಿವೆ. ಒಂದರಿಂದ ಎರಡು ಆರೋಗ್ಯ ಕೇಂದ್ರಗಳು ಮಾತ್ರ ಸ್ವಂತ ಆಂಬುಲೆನ್ಸ್ ಹೊಂದಿವೆ. ವೈದ್ಯರು ಕೇಂದ್ರ ಸ್ಥಾನದಲ್ಲಿ ವಾಸಿಸುವುದಕ್ಕೆ ವಸತಿ ಸೌಲಭ್ಯದ ಕೊರತೆಯೂ ತೀವ್ರವಾಗಿದೆ' ಎನ್ನುತ್ತವೆ ಆರೋಗ್ಯ ಇಲಾಖೆ ಮೂಲಗಳು.

'ಕೋವಿಡ್ ಸಂದರ್ಭದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಕುರಿತು ಜನರಲ್ಲಿ ಒಂದಷ್ಟು ಜಾಗೃತಿ ಮೂಡಿದೆ. ಆದರೆ, ಸರ್ಕಾರಕ್ಕೆ ಜಾಗೃತಿ ಮೂಡಿರುವುದರ ಬಗ್ಗೆ ಇನ್ನೂ ಅನುಮಾನಗಳಿವೆ. ಪಿಎಚ್‌ಸಿ ಮತ್ತು ಸಿಎಚ್‌ಸಿಗಳ ನಿರ್ವಹಣೆಗೆ ಅನುದಾನದ ಕೊರತೆ ಇದೆ. ಈ ಕಾರಣಕ್ಕಾಗಿಯೇ ಅಲ್ಲಿ ಸಮಸ್ಯೆಗಳು ಬಿಗಡಾಯಿಸುತ್ತಿವೆ. ಪಿಎಚ್‌ಸಿ ಮತ್ತು ಸಿಎಚ್‌ಸಿಗಳಲ್ಲಿ ಸರ್ಕಾರವೇ ರೂಪಿಸಿದ ಮಾನದಂಡಗಳ ಪಾಲನೆ ಆಗುತ್ತಿಲ್ಲ. ಅವು ಒಂದು ರೀತಿಯಲ್ಲಿ ಈಗ ಬೇಡದ ಕೂಸಿನಂತಾಗಿವೆ' ಎನ್ನುತ್ತಾರೆ ಕರ್ನಾಟಕ ಜನಾರೋಗ್ಯ ಚಳವಳಿಯ ಸಹ ಸಂಚಾಲಕ ವಿಜಯಕುಮಾರ್ ಸೀತಪ್ಪ.

ಸಮಸ್ಯೆಗಳಲ್ಲೇ ಮುಳುಗಿವೆ ಇಎಸ್‌ಐ ಆಸ್ಪತ್ರೆಗಳು

ಕಾರ್ಮಿಕರಿಗೆ ರಿಯಾಯ್ತಿ ದರದಲ್ಲಿ ಚಿಕಿತ್ಸೆ ನೀಡುವುದಕ್ಕಾಗಿಯೇ ಪ್ರಾರಂಭಿಸಲಾದ ರಾಜ್ಯ ಕಾರ್ಮಿಕ ವಿಮಾ ನಿಗಮದ (ಇಎಸ್‌ಐಸಿ) ಆಸ್ಪತ್ರೆಗಳು ರಾಜ್ಯದಲ್ಲಿ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿವೆ. ರಾಜ್ಯದ ಬಹುತೇಕ ಇಎಸ್‌ಐ ಆಸ್ಪತ್ರೆಗಳು ವೈದ್ಯರು ಮತ್ತು ಸಿಬ್ಬಂದಿ ಕೊರತೆಯಿಂದ ನಲುಗುತ್ತಿವೆ.

ಕಲಬುರಗಿ ಮತ್ತು ಬೆಂಗಳೂರಿನ ರಾಜಾಜಿನಗರದಲ್ಲಿರುವ ಇಎಸ್‌ಐ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳು ಹಾಗೂ ಪೀಣ್ಯದಲ್ಲಿರುವ ಇಎಸ್‌ಐ ಆಸ್ಪತ್ರೆಗಳನ್ನು ನೇರವಾಗಿ ಕೇಂದ್ರ ಸರ್ಕಾರದ ಇಎಸ್‌ಐ ನಿಗಮವೇ ನಿರ್ವಹಿಸುತ್ತಿದೆ. ಕೆಲವು ವರ್ಷಗಳಿಂದ ಈಚೆಗೆ ಈ ಸಂಸ್ಥೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಕೇಂದ್ರ ಸರ್ಕಾರ ಆಸಕ್ತಿ ತೋರದೇ ಇರುವುದರಿಂದ ಸಿಬ್ಬಂದಿ ಕೊರತೆ ಹೊರಲಾರದ ಭಾರವಾಗಿ ಪರಿಣಮಿಸುತ್ತಿದೆ.

ಬೆಳಗಾವಿ, ದಾಂಡೇಲಿ, ದಾವಣಗೆರೆ, ಹುಬ್ಬಳ್ಳಿ, ಇಂದಿರಾನಗರ (ಬೆಂಗಳೂರು), ಮಂಗಳೂರು ಮತ್ತು ಮೈಸೂರಿನ ಇಎಸ್‌ಐ ಆಸ್ಪತ್ರೆಗಳನ್ನು ರಾಜ್ಯ ಸರ್ಕಾರವೇ ನಿರ್ವಹಿಸುತ್ತಿದೆ. ಆದರೆ, ಇಎಸ್‌ಐ ನಿಗಮವೇ ವೆಚ್ಚ ಭರಿಸಬೇಕಿದೆ. ಸಕಾಲಕ್ಕೆ ಅನುದಾನ ಬರುತ್ತಿಲ್ಲ ಮತ್ತು ಖಾಲಿ ಹುದ್ದೆಗಳ ಭರ್ತಿಗೆ ನಿಗಮ ಆಸಕ್ತಿ ತೋರುತ್ತಿಲ್ಲ. ಹೆಚ್ಚಿನ ಚಿಕಿತ್ಸೆಗೆ ಶಿಫಾರಸು ಪಡೆಯುವುದಕ್ಕೂ ಕಾರ್ಮಿಕರು ಈ ಆಸ್ಪತ್ರೆಗಳಲ್ಲಿ ದಿನಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಇದೆ.

'ದಾಖಲೆ ಪ್ರಮಾಣದಲ್ಲಿ ಹುದ್ದೆ ಭರ್ತಿ'

'ಒಂದೂವರೆ ವರ್ಷದಲ್ಲಿ ರಾಜ್ಯದ ಆರೋಗ್ಯ ಇಲಾಖೆಯಲ್ಲಿ ದಾಖಲೆಯ ಪ್ರಮಾಣದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಕಾಯಂ ಅಲ್ಲದಿದ್ದರೂ ಬೇರೆ ಬೇರೆ ಸ್ವರೂಪದಲ್ಲಿ ತುಂಬಲಾಗಿದೆ. ಆದರೂ, ಕೆಲವು ಹುದ್ದೆಗಳು ಖಾಲಿ ಉಳಿದಿವೆ. ಅವುಗಳನ್ನು ಭರ್ತಿ ಮಾಡುವ ಪ್ರಯತ್ನ ಜಾರಿಯಲ್ಲಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

'ಜಿಲ್ಲೆಗೊಂದು ಪಂಚಮಸಾಲಿ ಮಠ ಅಗತ್ಯ'

ಹರಿಹರ: ರಾಜ್ಯದ ದೊಡ್ಡ ಸಮಾಜಗಳಲ್ಲಿ ಒಂದಾದ ಪಂಚಮಸಾಲಿ ಸಮಾಜವನ್ನು ಸಂಘಟಿಸುವುದು ಎರಡ್ಮೂರು ಮಠ, ಶ್ರೀಗಳಿಂದ ಕಷ್ಟ. ಹೀಗಾಗಿ ಜಿಲ್ಲೆಗೊಂದು ಪಂಚಮಸಾಲಿ ಮಠವನ್ನು ರಚಿಸುವ ಅಗತ್ಯವಿದೆ ಎಂದು ಹರಿಹರದಲ್ಲಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠಾಧಿಪತಿ ವಚನಾನಂದ ಸ್ವಾಮೀಜಿ ಪ್ರತಿಪಾದಿಸಿದರು.


ವಚನಾನಂದ ಸ್ವಾಮೀಜಿ

ಮಠದಲ್ಲಿ ಭಾನುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಸಮಾಜದ ಜನರಿಗೆ ಅಧ್ಯಾತ್ಮ, ಧಾರ್ಮಿಕ ಸಂಸ್ಕಾರ ನೀಡುವ ಜವಾಬ್ದಾರಿ ಮಠಗಳದ್ದು. ರಾಜ್ಯದ ವಿವಿಧೆಡೆಯಿಂದ ಭಕ್ತರು ಆಹ್ವಾನಿಸುತ್ತಾರೆ. ಆದರೆ, ಅವರೆಲ್ಲರನ್ನೂ ತಲುಪಲು ಸಾಧ್ಯವಾಗುತ್ತಿಲ್ಲ. ಇಂತಹ ಸ್ಥಿತಿಯಲ್ಲಿ ಹೆಚ್ಚು ಮಠಗಳಾದರೆ ಸಮಾಜದ ಹಿತಕ್ಕೆ ಪೂರಕ' ಎಂದು ತಿಳಿಸಿದರು.

'ಸಮುದಾಯದ ಸಂಘಟನೆಗಾಗಿ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಅಲಗೂರಿನಲ್ಲಿ ಪಂಚಮಸಾಲಿ ಸಮಾಜದ ಸ್ವಾಮೀಜಿಗಳ ಒಕ್ಕೂಟದಿಂದ ಪೀಠ ಸ್ಥಾಪನೆಗೆ ನಮ್ಮ ಬೆಂಬಲವಿದೆ.' ಎಂದರು.

'ಮುರುಘಾ ಶರಣರಿಂದ ನನ್ನ ಮೇಲೆ ಒತ್ತಡ': 'ಹರಿಹರ ಪೀಠಕ್ಕೆ ಶ್ರೀಗಳ ಆಯ್ಕೆಗೆ 2006ರಿಂದ ಹುಡುಕಾಟ ನಡೆಸಿದ್ದೆವು. ಆಗ, ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಆಯ್ಕೆ ಮಾಡಿದರೆ ಹಾವೇರಿ ಬಳಿ 90 ಎಕರೆ ಜಮೀನನ್ನು ಪೀಠಕ್ಕಾಗಿ ನೀಡುವುದಾಗಿ ಚಿತ್ರದುರ್ಗದ ಮುರುಘಾ ಶರಣರು ನನ್ನ ಮೇಲೆ ಒತ್ತಡ ಹೇರಿದ್ದರು. ನೀನು ಒಪ್ಪಿದರೆ ಬಿ.ಸಿ. ಉಮಾಪತಿ ಸೇರಿ ಎಲ್ಲರೂ ಒಪ್ಪುತ್ತಾರೆ ಎಂದಿದ್ದರು' ಎಂದು ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಸೋಮನಗೌಡ ಪಾಟೀಲ್ ಆರೋಪಿಸಿದರು.

ಪ್ರಥಮ ಜಗದ್ಗುರುಗಳಾಗಿ ಡಾ.ಮಹಾದೇವ ಶಿವಾಚಾರ್ಯ ಸ್ವಾಮೀಜಿ ಆಯ್ಕೆ

ಪಂಚಮಸಾಲಿ 3ನೇ ಪೀಠ ಫೆ.14 ರಂದು ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಧರ್ಮ ಜಾಗೃತಿ, ಸಂಸ್ಕಾರ ಉಣಬಡಿಸುವ ಉದಾತ್ತ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಪಂಚಮಸಾಲಿ ಸಮಾಜದ ಮೂರನೇಯ ಪೀಠ ಫೆ.14 ರಂದು ಜಮಖಂಡಿ ತಾಲ್ಲೂಕಿನ ಆಲಗೂರದಲ್ಲಿ ಅಸ್ತಿತ್ವಕ್ಕೆ ಬರಲಿದ್ದು, ಪ್ರಥಮ ಜಗದ್ಗುರುಗಳಾಗಿ ಬಬಲೇಶ್ವರ ಬೃಹನ್ಮಠದ ಡಾ.ಮಹಾದೇವ ಶಿವಾಚಾರ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮನಗೂಳಿ ಹಿರೇಮಠದ ಸಂಗನಬಸವ ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚಮಸಾಲಿ ಸಮಾಜದ ಶ್ರೇಯೋಭಿವೃದ್ಧಿ, ಉದಾತ್ತ ಸಂಸ್ಕಾರ ಮೂಡಿಸುವ ದೃಷ್ಟಿಯಿಂದ ಈ ಪೀಠ ಸ್ಥಾಪನೆಯಾಗುತ್ತಿದೆ. ಪಂಚಮಸಾಲಿ ಸಮುದಾಯದ ಪಂಚ ಪೀಠಗಳಾಗಬೇಕು ಎಂಬುದು ಹರಿಹರ ಪೀಠದ ಹಿಂದಿನ ಜಗದ್ಗುರು ಡಾ.ಮಹಾಂತ ಶ್ರೀಗಳ ಕನಸಿತ್ತು. ಅವರ ಆಶಯಗಳಿಗೆ ಅನುಗುಣವಾಗಿಯೇ ಈ ಮೂರನೆಯ ಪೀಠ ಸ್ಥಾಪನೆ ಮಾಡಲಾಗುತ್ತಿದೆ ಎಂದು ಹೇಳಿದರು.


ಡಾ.ಮಹಾದೇವ ಶಿವಾಚಾರ್ಯ ಸ್ವಾಮೀಜಿ

ಇದು ನಿರಾಣಿ ಪೀಠ' ಎಂಬ ಆರೋಪದಲ್ಲಿ ಸತ್ಯಾಂಶವಿಲ್ಲ. ನಿರಾಣಿ ಎಲ್ಲ ಸಮುದಾಯಗಳಿಗೆ ಸಹಾಯ ಮಾಡಿದ್ದಾರೆ. ನಮಗೆ ಇದುವರೆಗೂ ನಿರಾಣಿಯವರು ಸಂಪರ್ಕದಲ್ಲಿ ಇಲ್ಲ. ಸ್ವಾಮೀಜಿಗಳು ಮನೆಗೆ ಬಂದರೆ ಅವರಿಗೆ ಸಹಾಯ ಮಾಡುವ ಮನಸ್ಸು ನಿರಾಣಿಗಿದೆ ಎಂದು ಸ್ಪಷ್ಟಪಡಿಸಿದರು.

ಬಬಲೇಶ್ವರ ಬ್ರಹನ್ಮಠದ ಡಾ. ಮಹಾದೇವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕೂಡಲಸಂಗಮ, ಹರಿಹರ ಪೀಠಗಳು ಧರ್ಮ ರಕ್ಷಣೆ, ಸಂಸ್ಕಾರ ಕಲಿಸುವುದು, ಧಾರ್ಮಿಕ ಬೋಧನೆ ಮಾಡಿಲ್ಲ. ಹಾಗಾಗಿ ಮೂರನೆಯ ಪೀಠ ಸ್ಥಾಪನೆಯಾಗುತ್ತಿದೆ ಎಂದರು.

ಹರಿಹರ ಪೀಠಕ್ಕೆ ಈ ಮೊದಲು ನನ್ನನ್ನೇ ಪೀಠಾಧ್ಯಕ್ಷರನ್ನಾಗಿ ಮಾಡುವುದಾಗಿ ಹರಿಹರದಿಂದ ಬಂದಿದ್ದ ಹಲವು ಹಿರಿಯರು, ಮುಖಂಡರು ಹೇಳಿದ್ದರು. ಆದರೆ, ಸಾಧ್ಯವಾಗಿರಲಿಲ್ಲ. ಇದೀಗ ಮೂರನೆಯ ಪೀಠದ ಅವಕಾಶ ಬಂದಿದ್ದು, ನಾನು ಪೀಠಾಧ್ಯಕ್ಷರಾಗಲು ಒಪ್ಪಿದ್ದೇನೆ ಎಂದು ಹೇಳಿದರು.

ಸಮಾಜದ ಮುಖಂಡ ಡಾ.ಸುರೇಶ ಬಿರಾದಾರ ಮಾತನಾಡಿ, ಪಂಚಮಸಾಲಿ ಸಮುದಾಯದ ಮೂರನೆಯ ಪೀಠ ಮುರುಗೇಶ ನಿರಾಣಿ ಪರವಾಗಿದೆ ಎಂಬುದು ಶುದ್ಧ ಸುಳ್ಳು. ಮೂರನೆಯ ಪೀಠ ಸ್ಥಾಪನೆಗೆ ಸಮಾಜದ 60 ಸ್ವಾಮೀಜಿಗಳ ಬೆಂಬಲವಿದ್ದು, ಸಮಾಜದ ಜನರಿಗೆ ಉತ್ತಮ ಸಂಸ್ಕಾರ ನೀಡಲು ಅಸ್ತಿತ್ವಕ್ಕೆ ಬರಲಿದೆ ಎಂದರು.

ಬುರಣಾಪುರ ಯೋಗೇಶ್ವರಿ ಮಾತಾ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ನ್ಯಾಯಾಧೀಶೆ ಕಾರು ಅಡ್ಡಗಟ್ಟಿದ ವಕೀಲರು

ದೊಡ್ಡಬಳ್ಳಾಪುರ: ನ್ಯಾಯಾಧೀಶೆಯೊಬ್ಬರು ರಾತ್ರಿ ವೇಳೆ ವಕೀಲರೊಟ್ಟಿಗೆ ಪ್ರಯಾಣಿಸುತ್ತಿದ್ದ ಕಾರನ್ನುಅಡ್ಡಗಟ್ಟಿದ ಸ್ಥಳೀಯ ವಕೀಲರ ಗುಂಪೊಂದು ಇಬ್ಬರನ್ನೂ ತರಾಟೆಗೆ ತೆಗೆದುಕೊಂಡ ವಿಡಿಯೊ ವೈರಲ್ ಆಗಿದೆ.

ನಗರದ ಹೊರವಲಯದಲ್ಲಿ ಶುಕ್ರವಾರ ರಾತ್ರಿ ನ್ಯಾಯಾಧೀಶೆ ಮತ್ತು ವಕೀಲರೊಬ್ಬರ ಜೊತೆ ವಕೀಲರ ಗುಂಪು ನಡೆಸಿದ ಜಟಾಪಟಿ ದೃಶ್ಯಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯಲಾಗಿದೆ. ಈ ವಿಡಿಯೊ ತುಣುಕು ಈಗ ಎಲ್ಲೆಡೆ ಹರಿದಾಡುತ್ತಿದೆ. ಕಾರಿನಲ್ಲಿ ಕುಳಿತಿದ್ದ ವಕೀಲನನ್ನು ಕೆಳಗಿಳಿಸಿ ತರಾಟೆಗೆ ತೆಗೆದುಕೊಂಡ ಗುಂಪು ನಂತರ ಕಾರು ಚಾಲನೆ ಮಾಡುತ್ತಿದ್ದ ನ್ಯಾಯಾಧೀಶೆಯನ್ನೂ ಕೆಳಗೆ ಇಳಿಯುವಂತೆ ಒತ್ತಾಯಿಸಿರುವುದು ವಿಡಿಯೊದಲ್ಲಿದೆ.

ಈ ಘಟನೆ ನಡೆದು ಎರಡು ದಿನಗಳಾದರೂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿಲ್ಲ. ಈ ಬಗ್ಗೆ ಅಧಿಕೃತವಾಗಿ ಮಾಹಿತಿ ನೀಡಲು ಎಲ್ಲರೂ ಹಿಂಜರಿಯುತ್ತಿದ್ದಾರೆ. ಇದರ ಬೆನ್ನಲ್ಲೇ ದೊಡ್ಡಬಳ್ಳಾಪುರದ ಜೆಎಂಎಫ್‌ಸಿ ಮತ್ತು ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ಜ್ಯೋತಿ ಕಾಳೆ ಅವರನ್ನು ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿದೆ.

ಒಳನೋಟ

'ಮಾತಷ್ಟೇ ಜೋರು:ಹರಿಯದ ನೀರು'

ಬೆಂಗಳೂರು:'ಮಾತಷ್ಟೇ ಜೋರು:ಹರಿಯದ ನೀರು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಜ.23) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಯೋಜನೆಗಳ ದುರ್ಬಳಕೆ



ಈ ದೇಶ ಕೃಷಿಯಿಂದ ಅವಲಂಬಿತವಾಗಿದೆ. ಈ ಹಿಂದೆ ರಾಜರು ಕೃಷಿ ಹಾಗೂ ನೀರಾವರಿಗಾಗಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದರು. ಆನಂತರ ಬಂದ ರಾಜಕಾರಣಿಗಳು ನೀರಾವರಿ ಯೋಜನೆಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡರು. ಯೋಜನೆಗಳ ಹೆಸರಲ್ಲಿ ತಮ್ಮ ರಾಜಕೀಯ ಹಾದಿಯನ್ನು ಭದ್ರಪಡಿಸಿಕೊಂಡರು. ಆಗಾಗ ಅನುದಾನ ಘೋಷಿಸಿ, ಜನರನ್ನು ಮೂರ್ಖರನ್ನಾಗಿ ಮಾಡುತ್ತಿದ್ದಾರೆ. ಇದಕ್ಕೆ ಅಧಿಕಾರಿಗಳ ಸಹಕಾರ ಕಡಿಮೆಯೇನಿಲ್ಲ. ಈ ಕಾರಣದಿಂದಲೇ ನೀರಾವರಿ ಯೋಜನೆಗಳು ಸಫಲಗೊಳ್ಳದೆ, ಇನ್ನೂ ವಾಗ್ದಾನವಾಗಿ ಉಳಿದಿವೆ.

ಎಚ್.ಕೆ.ಗಂಗಾಧರ್, ಬೆಂಗಳೂರು

ಮತದಾರರು ಪಾಠ ಕಲಿಸಲಿ



ಚುನಾವಣೆ ಸಂದರ್ಭದಲ್ಲಿ ಮತ ಕೇಳಲು ಬರುವ ರಾಜಕಾರಣಿಗಳಿಗೆ ಸರಿಯಾದ ಪಾಠ ಕಲಿಸಿದರೆ ಮಾತ್ರ ದೇಶದಲ್ಲಿ ರೈತರಿಗೆ ಹಾಗೂ ಕೃಷಿಗೆ ಹೆಚ್ಚಿನ ಆದ್ಯತೆ ಸಿಗುತ್ತದೆ. ರಾಜಕೀಯ ನಾಯಕರು ಜನರನ್ನು ಕಡೆಗಣಿಸುತ್ತಾ ಬಂದಿದ್ದಾರೆ. ರೈತರಿಗೆ ನೀರಾವರಿ ಅನಿವಾರ್ಯ. ಸರ್ಕಾರ ರೈತರಿಗೆ ನೀರು ಒದಗಿಸುವ ಕೆಲಸ ಮಾಡಬೇಕು. ಆಶ್ವಾಸನೆಗಳನ್ನು ಕೇಳಿ ಜನರಿಗೂ ಸಾಕಾಗಿದೆ.

ಬಿ.ಎಸ್.ಮುಳ್ಳೂರ, ಬೆಳಗಾವಿ

ಇಂದಿನಿಂದಲೇ ಸಂರಕ್ಷಿಸಿ



ಜೀವಾಮೃತ ಎಂದೇ ಕರೆಯಲ್ಪಡುವ ನೀರು ಮನುಷ್ಯರು, ಕೃಷಿ, ಕೈಗಾರಿಕೆ, ಹೈನುಗಾರಿಕೆ, ಜಾನುವಾರುಗಳು ಸೇರಿದಂತೆ ಎಲ್ಲರ ಜೀವ ಮತ್ತು ಜೀವನಕ್ಕೆ ಅನಿವಾರ್ಯ. ಚುನಾವಣೆ ಬಂದಾಗ ನೀರಾವರಿ ಯೋಜನೆಗಳನ್ನು ಬಡಿದೆಬ್ಬಿಸಿ, ಅಸ್ತ್ರವಾಗಿ ನಮ್ಮ ಮೇಲೆ ಪ್ರಯೋಗಿಸುತ್ತಾರೆ. ಮುಂದಿನ ಪೀಳಿಗೆಯವರಿಗಾಗಿ ಇಂದಿನಿಂದಲೇ ನೀರಿನ ಸಂರಕ್ಷಣೆ ಮಾಡಬೇಕು. ರಾಜಕೀಯದ ಈ ಆಟವನ್ನು ಜನ ಅರಿತರೆ ಮಾತ್ರ ಉತ್ತಮ ಸಮಾಜ ಕಾಣಲು ಸಾಧ್ಯ.

ಪವನ್ ರಾಮ್, ಚಿತ್ರದುರ್ಗ

ಪಕ್ಷಾತೀತ ಕೆಲಸ ನಡೆಯಲಿ



ನಮ್ಮ ರಾಜ್ಯದ ನೀರಾವರಿ ಯೋಜನೆಗಳು ಚುನಾವಣೆ ಸಮಯದಲ್ಲಿ ಮಾತ್ರ ಸದ್ದು ಮಾಡುತ್ತವೆ. ನೀರಾವರಿ ಯೋಜನೆಗಳೆಲ್ಲ ದಶಕಗಳನ್ನು ದಾಟಿದರೂ ಪೂರ್ಣಗೊಂಡಿಲ್ಲ. ರಾಜಕಾರಣಿಗಳು ಪಕ್ಷಾತೀತವಾಗಿ ಹೋರಾಟ ಮಾಡಿದರೆ, ಯೋಜನೆಗಳು ಅನುಷ್ಠಾನಕ್ಕೆ ಬಂದು ಜನರ ಸಮಸ್ಯೆ ನೀಗುತ್ತದೆ.

ಮಮತಾ, ಹಾಸನ



ಗೋವಾ ವಿಧಾನಸಭೆ ಚುನಾವಣೆ: ದೇವರ ಮುಂದೆ ಶಪಥ ಮಾಡಿಸಿದ ಕಾಂಗ್ರೆಸ್

ಪಕ್ಷ ಬಿಡೆವು: ಅಭ್ಯರ್ಥಿಗಳ ಪ್ರಮಾಣ

ಪಣಜಿ (ಪಿಟಿಐ): ಶಾಸಕರಾಗಿ ಆಯ್ಕೆಯಾದ ಬಳಿಕ ಪಕ್ಷ ಬದಲಿಸುವುದಿಲ್ಲ ಎಂದು ಗೋವಾ ವಿಧಾನಸಭೆ ಚುನಾವಣೆಯ ಅಭ್ಯರ್ಥಿಗಳನ್ನು ಕಾಂಗ್ರೆಸ್ ಪಕ್ಷವು ದೇವರ ಮುಂದೆ ಪ್ರಮಾಣ ಮಾಡಿಸಿದೆ. ಕಳೆದ ಐದು ವರ್ಷಗಳಲ್ಲಿ ಪಕ್ಷವು ಪಕ್ಷಾಂತರದಿಂದ ಜರ್ಜರಿತೊಂಡಿತ್ತು. ಹಾಗಾಗಿ, ಪಕ್ಷವು ಈ ಕ್ರಮಕ್ಕೆ ಮುಂದಾಗಿದೆ.

ಎಲ್ಲ 34 ಅಭ್ಯರ್ಥಿಗಳನ್ನು ಬಸ್ಸೊಂದರಲ್ಲಿ ದೇವಾಲಯ, ಚರ್ಚ್ ಮತ್ತು ದರ್ಗಾಕ್ಕೆ ಕರೆದೊಯ್ದು ಪಕ್ಷಾಂತರದ ವಿರುದ್ಧ ಶನಿವಾರ ಪ್ರಮಾಣ ಮಾಡಿಸಲಾಯಿತು. ಕಳೆದ ವಿಧಾನಸಭೆ ಚುನಾವಣೆಯ ಬಳಿಕ ಕಾಂಗ್ರೆಸ್‌ನ ಅತಿ ಹೆಚ್ಚು ಶಾಸಕರು ಪಕ್ಷ ತೊರೆದು ಬಿಜೆಪಿ ಮತ್ತು ಇತರ ಪಕ್ಷಗಳಿಗೆ ಹೋಗಿದ್ದರು.

2017ರ ವಿಧಾನಸಭಾ ಚುನಾವಣೆಯಲ್ಲಿ 17 ಅಭ್ಯರ್ಥಿಗಳು ಕಾಂಗ್ರೆಸ್‌ನಿಂದ ಗೆದ್ದಿದ್ದರು. ಗೋವಾ ವಿಧಾನಸಭೆಯಲ್ಲಿ ಅತಿ ದೊಡ್ಡ ಪಕ್ಷವಾಗಿ ಕಾಂಗ್ರೆಸ್ ಮೂಡಿಬಂದಿತ್ತು. ಪಕ್ಷಾಂತರದ ಪರಿಣಾಮಮವಾಗಿ ಈಗ ಇಬ್ಬರು ಶಾಸಕರು ಮಾತ್ರ ಉಳಿದಿದ್ದಾರೆ. ಕಾಂಗ್ರೆಸ್‌ನ 10 ಶಾಸಕರು 2019ರಲ್ಲಿ ಬಿಜೆಪಿ ಸೇರುವ ಮೂಲಕ ಬಿಜೆಪಿ ಬಲ 27ಕ್ಕೆ ಏರಿಕೆ ಆಗಿತ್ತು.


ಚಿದಂಬರಂ


ಮಮತಾ

ಪಣಜಿಯಲ್ಲಿರುವ ಮಹಾಲಕ್ಷ್ಮಿ ದೇವಾಲಯ, ಬಂಬೊಲಿಮ್‌ನಲ್ಲಿರುವ ಚರ್ಚ್ ಮತ್ತು ಬೆಟಿಮ್ ಗ್ರಾಮದಲ್ಲಿರುವ ದರ್ಗಾಕ್ಕೆ ಅಭ್ಯರ್ಥಿಗಳನ್ನು ಕರೆದೊಯ್ಯಲಾಯಿತು. ಕಾಂಗ್ರೆಸ್‌ನ ಗೋವಾ ಚುನಾವಣಾ ವೀಕ್ಷಕ ಪಿ. ಚಿದಂಬರಂ ಅವರು ಅಭ್ಯರ್ಥಿಗಳ ಜತೆಗೆ ಇದ್ದರು.

ಪ್ರತಿಜ್ಞೆ ಕೈಗೊಳ್ಳುವುದು ಗೋವಾದಲ್ಲಿ ಇದೇ ಮೊದಲೇನೂ ಅಲ್ಲ. ಗೋವಾ ಫಾರ್ವರ್ಡ್ ಪಾರ್ಟಿಯ (ಜಿಎಫ್‌ಪಿ) ಮೂವರು ಶಾಸಕರು ಮತ್ತು ಪದಾಧಿಕಾರಿಗಳನ್ನು ಮಾಪುಸಾದಲ್ಲಿರುವ ದೇವ ಬೋದಗೇಶ್ವರ ದೇವಾಲಯಕ್ಕೆ ಕರೆದೊಯ್ದು 2022ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ನೀಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿಸಲಾಗಿತ್ತು. ಮನೋಹರ್ ಪರಿಕ್ಕರ್ ನೇತೃತ್ವದಲ್ಲಿ 2017ರಲ್ಲಿ ಸರ್ಕಾರ ರಚನೆ ಆದಾಗ ಜಿಎಫ್‌ಪಿ ಬೆಂಬಲ ನೀಡಿತ್ತು. ಜಿಎಫ್‌ಪಿ ಶಾಸಕರನ್ನು ಸಚಿವರನ್ನಾಗಿ ಮಾಡಲಾಗಿತ್ತು.

ಆದರೆ, ಕಾಂಗ್ರೆಸ್‌ನ 10 ಶಾಸಕರು 2019ರಲ್ಲಿ ಬಿಜೆಪಿ ಸೇರಿದ ಬಳಿಕ, ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಜಿಎಫ್‌ಪಿ ಸಚಿವರನ್ನು ಕೈಬಿಟ್ಟಿದ್ದರು. ವಿಜಯ್ ಸರ್ದೇಸಾಯಿ ನೇತೃತ್ವದ ಜಿಎಫ್‌ಪಿಗೆ ಹಿನ್ನಡೆ ಆಗಿತ್ತು. ಪ್ರಮಾಣ ಮಾಡಿದ್ದರೂ ಜಿಎಫ್‌ಪಿ ಶಾಸಕ ಜಯೇಶ್ ಸಲಗಾಂವಕರ್ ಅವರು ಬಿಜೆಪಿ ಸೇರಿದ್ದರು.

ಜನರ ಮನಸ್ಸಿನಲ್ಲಿ ವಿಶ್ವಾಸ ಮೂಡಿಸುವುದಕ್ಕಾಗಿ ಅಭ್ಯರ್ಥಿಗಳನ್ನು ದೇವರ ಮುಂದೆ ಪ್ರಮಾಣ ಮಾಡಿಸಲಾಯಿತು

ಗಿರೀಶ್ ಚೋಡಣ್‌ಕರ್, ಗೋವಾ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ

‘ಮೈತ್ರಿ ನಕಾರಕ್ಕೆ ಪಕ್ಷಾಂತರವೇ ಕಾರಣ’

ಕಾಂಗ್ರೆಸ್ ಪಕ್ಷದ ಮುಖಂಡರನ್ನು ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸೆಳೆದಿದ್ದರಿಂದಲೇ ಆ ಪಕ್ಷದ ಜತೆಗೆ ಚುನಾವಣಾ ಮೈತ್ರಿಗೆ ಮುಂದಾಗಲಿಲ್ಲ ಎಂದು ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಭಾನುವಾರ ಹೇಳಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಕಾಂಗ್ರೆಸ್‌ಗೆ ಸಾಧ್ಯವಾಗದಿದ್ದರೆ ಅದಕ್ಕೆ ಚಿದಂಬರಂ ಅವರೇ ಹೊಣೆ ಎಂದು ಟಿಎಂಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರು ಇತ್ತೀಚೆಗೆ ಹೇಳಿದ್ದರು. ಗೋವಾದಲ್ಲಿ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳಲು ಅಧಿಕೃತ ಪ್ರಸ್ತಾವವನ್ನು ಚಿದಂಬರಂ ಮುಂದೆ ಇರಿಸಲಾಗಿತ್ತು ಎಂದು ಮಮತಾ ಬ್ಯಾನರ್ಜಿ ಅವರೂ ಹೇಳಿದ್ದರು.

‘ಮೈತ್ರಿಯ ಪ್ರಸ್ತಾವವನ್ನು ಟಿಎಂಸಿ ಮುಂದಿಟ್ಟದ್ದು ನಿಜ. ಆದರೆ, ಅದಕ್ಕೆ ಮೊದಲು ಮತ್ತು ನಂತರ ಕೆಲವು ಬೆಳವಣಿಗೆಗಳು ನಡೆದವು. ಲುಯಿಝಿನೊ ಫೆಲೀರೊ ಅವರನ್ನು ಟಿಎಂಸಿ ಸೆಳೆದುಕೊಂಡಿತು. ಮೈತ್ರಿ ಪ್ರಸ್ತಾವದ ನಂತರವೂ ಅಲೆಕ್ಸೊ ಲೌರೆಂಕೊ ಅವರನ್ನು ಸೆಳೆದುಕೊಂಡರು. ಲೌರೆಂಕೊ ಅವರು ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯಲ್ಲಿ ಇದ್ದರು’ ಎಂದು ಚಿದಂಬರಂ ಹೇಳಿದ್ದಾರೆ.

ಮತ್ತೆ ಮುನ್ನೆಲೆಗೆ ಬಂದ ಹಿಂದೂಗಳ ವಲಸೆ ವಿಚಾರ

ಉತ್ತರ ಪ್ರದೇಶ: ಕೈರಾನಾ ಹಿಂದೂಗಳಿಗೆ ಅಮಿತ್ ಶಾ ಅಭಯ

ಪ್ರಜಾವಾಣಿ ವಾರ್ತೆ

ಲಖನೌ: ಇಲ್ಲಿನ ಶಾಮ್ಲಿ ಜಿಲ್ಲೆಯ ಕೈರಾನಾದಿಂದ ವಲಸೆ ಹೋಗಿದ್ದ ಹಿಂದೂಗಳ ವಿಚಾರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುನಾವಣೆ ಸಂದರ್ಭದಲ್ಲಿ ಮತ್ತೆ ಮುನ್ನೆಲೆಗೆ ತಂದಿದ್ದಾರೆ. ಶನಿವಾರ ಇಲ್ಲಿ ಬಿಜೆಪಿ ಕಾರ್ಯಕರ್ತರ ಜತೆ ಮನೆ-ಮನೆ ಭೇಟಿ ನಡೆಸಿದ ಶಾ ಅವರು, ಯಾರೂ ಹೆದರಬೇಕಿಲ್ಲ ಎಂದು ಅಭಯ ನೀಡಿದ್ದಾರೆ.

ಸಮಾಜವಾದಿ ಪಕ್ಷದ ಆಡಳಿತದ ಅವಧಿಯಲ್ಲಿ ಕೈರಾನಾದಿಂದ ವಲಸೆ ಹೋಗಿದ್ದ ಕುಟುಂಬಗಳು, ಬಿಜೆಪಿ ಆಡಳಿತದಲ್ಲಿ ವಾಪಸ್ ಆಗಿವೆ. ಅಂತಹ ಕುಟುಂಬಗಳನ್ನು, ವ್ಯಾಪಾರಿಗಳನ್ನು ಅಮಿತ್ ಶಾ ಶನಿವಾರ ಭೇಟಿ ಮಾಡಿದ್ದಾರೆ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ. ‘ನೀವು ಈಗ ಯಾರಿಗೂ ಹೆದರುವ ಅವಶ್ಯಕತೆ ಇಲ್ಲ. ಈಗ ನಿಮ್ಮನ್ನು ಕಾಪಾಡುವ ಸರ್ಕಾರವಿದೆ’ ಎಂದು ಎಲ್ಲರಿಗೂ ಅಮಿತ್ ಶಾ ಅಭಯ ನೀಡಿದ್ದಾರೆ.



ನಿಮ್ಮನ್ನು ಇಲ್ಲಿಂದ ಓಡಿಸಿದ್ದವರೇ ಈಗ ಇಲ್ಲಿಂದ ಓಡಿ ಹೋಗಿದ್ದಾರೆ. ನಿಮ್ಮಲ್ಲಿ ಇನ್ನೂ ಯಾರಾದರೂ ವಾಪಸ್ ಬಂದಿಲ್ಲದಿದ್ದರೆ ಅವರಿಗೆ ಕರೆ ಮಾಡಿ, ಬರಲು ಹೇಳಿ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಎಸ್‌ಪಿ ಮತ್ತು ಬಿಎಸ್‌ಪಿ ರಾಜ್ಯವನ್ನು ಕಗ್ಗತ್ತಲಿಗೆ ದೂಡಿದ್ದವು. ಅಪರಾಧಿಗಳೇ ತುಂಬಿದ್ದ ಈ ಪಕ್ಷದ ನೇತೃತ್ವದ ಸರ್ಕಾರಗಳು ಭ್ರಷ್ಟಾಚಾರದಲ್ಲಿ ಮುಳುಗಿತ್ತು. ಅಲ್ಲದೆ ಅವರು ಅಲ್ಪಸಂಖ್ಯಾತರ ಓಲೈಕೆ ಮಾಡುತ್ತಿದ್ದರು. ಬಿಜೆಪಿ ಸರ್ಕಾರವು ರಾಮಮಂದಿರ ನಿರ್ಮಿಸುತ್ತಿದೆ. ಕಾಶಿಯನ್ನು ಅಭಿವೃದ್ಧಿಪಡಿಸಿದೆ. ಆದರೆ ಹಿಂದಿನ ಸರ್ಕಾರಗಳು ಇವೆಲ್ಲವನ್ನು ಕಡೆಗಣಿಸಿದ್ದವು ಎಂದು ಶಾ ಆರೋಪಿಸಿದ್ದಾರೆ.

ಮತ ಸೆಳೆಯಲು ಗಾಯಕರ ಮೊರೆ ಹೋದ ಪಕ್ಷಗಳು

ಚಂಡೀಗಡ (ಪಿಟಿಐ): ಪಂಜಾಬ್‌ನ ಜನಪ್ರಿಯ ಹಾಡುಗಾರರಲ್ಲಿ ಹಲವರು ಚುನಾವಣಾ ಕಣಕ್ಕೆ ಇಳಿದಿದ್ದಾರೆ. ಮತದಾರರನ್ನು ಸೆಳೆಯಲು ಈ ಗಾಯಕರ ಜನಪ್ರಿಯತೆಯನ್ನು ಪಕ್ಷಗಳು ನೆಚ್ಚಿಕೊಂಡಿವೆ.

ಪಂಜಾಬಿ ಪಾಪ್ ಸಂಸ್ಕೃತಿ ಹೆಚ್ಚುಹೆಚ್ಚು ಜನಪ್ರಿಯಗೊಳ್ಳುತ್ತಿದೆ. ಜನಪ್ರಿಯ ಗಾಯಕರನ್ನು ಕಣಕ್ಕೆ ಇಳಿಸಿದರೆ ಜನರ ಜತೆ ಸಂಪರ್ಕ ಸುಲಭ ಎಂದು ಪಕ್ಷಗಳು ನಂಬಿವೆ.


ಜನಪ್ರಿಯ ಹಾಡುಗಾರ ಶುಭದೀಪ್ ಸಿಂಗ್ ಸಂಧು ಅವರನ್ನು ಕಾಂಗ್ರೆಸ್ ಪಕ್ಷವು ಮನ್ಸಾ ಕ್ಷೇತ್ರದಿಂದ ಕಣಕ್ಕೆ ಇಳಿಸಿದೆ. ಸಿಧು ಮೂಸೇವಾಲಾ ಎಂದೇ ಖ್ಯಾತರಾಗಿರುವ ಅವರು, ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರ ನಿಕಟವರ್ತಿ. ಗಾಯಕರಾದ ಅನ್ಮೋಲ್ ಗಗನ್ ಮಾನ್ ಮತ್ತು ಬಲ್ಕರ್ ಸಿಧು ಅವರಿಗೆ ಎಎಪಿ ಟಿಕೆಟ್ ನೀಡಿದೆ.

ಮೂಸೇವಾಲಾ ಅವರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಲಕ್ಷಾಂತರ ಫಾಲೋವರ್‌ಗಳು ಇದ್ದಾರೆ. ಮೂಸೇವಾಲಾ ಅವರು ಸಾಮಾಜಿಕ ಜಾಲತಾಣಗಳ ಮೂಲಕ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ.

ನಟ ಮತ್ತು ಸಮಾಜ ಸೇವಕ ಸೋನು ಸೂದ್ ಅವರ ಜನಪ್ರಿಯತೆಯನ್ನೂ ಬಳಸಿಕೊಳ್ಳಲು ಕಾಂಗ್ರೆಸ್ ಮುಂದಾಗಿದೆ. ಸೋನು ಅವರ ತಂಗಿ ಮಾಳವಿಕಾ ಅವರಿಗೆ ಮೊಗಾ ಕ್ಷೇತ್ರದಿಂದ ಟಿಕೆಟ್ ನೀಡಿದೆ.

ಖ್ಯಾತನಾಮರನ್ನು ಚುನಾವಣೆಗೆ ಬಳಸಿಕೊಳ್ಳುವುದು ಇದೇ ಮೊದಲೇನೂ ಅಲ್ಲ. ಪಂಜಾಬಿ ಗಾಯಕ ಮೊಹಮ್ಮದ್ ಸಿದ್ದಿಕ್ ಅವರು ಫರೀದ್‌ಕೋಟ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸದಸ್ಯ. ಗುರುದಾಸ್‌ಪುರದ ಬಿಜೆಪಿ ಸಂಸದ ಸನ್ನಿಡಿಯೋಲ್ ಜನಪ್ರಿಯ ನಟ. ಈ ಕ್ಷೇತ್ರವನ್ನು ನಟ ವಿನೋದ್ ಖನ್ನಾ ಹಿಂದೆ ಪ್ರತಿನಿಧಿಸಿದ್ದರು.

ಎಎಪಿಯ ಮುಖ್ಯಮಂತ್ರಿ ಅಭ್ಯರ್ಥಿ ಭಗವಂತ ಮಾನ್ ಅವರು ರಾಜಕೀಯಕ್ಕೆ ಬರುವ ಮೊದಲು ಜನಪ್ರಿಯ ಕಾಮಿಡಿಯನ್ ಆಗಿದ್ದರು. ಪಂಜಾಬ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ಕ್ರಿಕೆಟ್ ಆಟಗಾರರಾಗಿದ್ದರು.


ಪಂಜಾಬ್ ಲೋಕ ಕಾಂಗ್ರೆಸ್ ಮತ್ತು ಬಿಜೆಪಿಯ ಪಟಿಯಾಲ ಗ್ರಾಮೀಣ ಕ್ಷೇತ್ರದ ಜಂಟಿ ಅಭ್ಯರ್ಥಿ ಸಂಜೀವ್ ಶರ್ಮಾ ಅವರು ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರ ಮಗಳು ಬೀಬಾ ಜೈ ಇಂದರ್ ಕೌರ್ ಅವರ ಜತೆಗೆ ಪಟಿಯಾಲದ ಗುರುದ್ವಾರ ದುಖ್ನಿವರಣ್‌ಗೆ ಭಾನುವಾರ ಭೇಟಿ ಕೊಟ್ಟರು ಪಿಟಿಐ ಚಿತ್ರ

ಸಮೀಕ್ಷೆ ನಿಷೇಧಕ್ಕೆ ಎಸ್‌ಪಿ ಒತ್ತಾಯ

ಪ್ರಜಾವಾಣಿ ವಾರ್ತೆ

ಲಖನೌ: ವಿವಿಧ ಸುದ್ದಿ ವಾಹಿನಿಗಳಲ್ಲಿ ಪ್ರಸಾರ ಆಗುತ್ತಿರುವ ಚುನಾವಣಾ ಸಮೀಕ್ಷೆಗಳು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ. ಹಾಗಾಗಿ, ಚುನಾವಣಾ ಸಮೀಕ್ಷೆಗಳ ಪ್ರಸಾರವನ್ನು ನಿಷೇಧಿಸಬೇಕು ಎಂದು ಸಮಾಜವಾದಿ ಪಕ್ಷವು (ಎಸ್‌ಪಿಇ) ಚುನಾವಣಾ ಆಯೋಗವನ್ನು ಒತ್ತಾಯಿಸಿದೆ.

ಫೆಬ್ರುವರಿ 10ರಂದು ನಡೆಯಲಿರುವ ಮೊದಲ ಹಂತದ ಮತದಾನದ ನಾಮಪತ್ರ ಪ್ರಕ್ರಿಯೆ ಮುಗಿದಿದೆ. ಹಾಗಿದ್ದರೂ ವಿವಿಧ ಸುದ್ದಿ ವಾಹಿನಿಗಳು ಜನಮತ ಸಮೀಕ್ಷೆಯನ್ನು ಪ್ರಸಾರ ಮಾಡುತ್ತಿವೆ ಎಂದು ಎಸ್‌ಪಿ ಉತ್ತರ ಪ್ರದೇಶ ಘಟಕದ ಅಧ್ಯಕ್ಷ ನರೇಶ್ ಉತ್ತಮ್ ಅವರು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ.

‘ಜನಮತ ಸಮೀಕ್ಷೆಗಳು ಜನರ ಮನದಲ್ಲಿ ಗೊಂದಲ ಮೂಡಿಸುತ್ತಿವೆ. ಇವು ಚುನಾವಣಾ ಪ್ರಕ್ರಿಯೆಯನ್ನು ಬಾಧಿಸುತ್ತಿವೆ. ಹಾಗೆ ಮಾಡುವುದು ಮಾದರಿ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆ’ ಎಂದು ನರೇಶ್ ಅವರು ಪತ್ರದಲ್ಲಿ ಹೇಳಿದ್ದಾರೆ.

ಜನಮತ ಸಮೀಕ್ಷೆಗಳ ಬಗ್ಗೆ ಇತರ ಪಕ್ಷಗಳು ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ. ಜನಮತ ಸಮೀಕ್ಷೆ ಪ್ರಸಾರದಲ್ಲಿ ತಪ್ಪೇನೂ ಇಲ್ಲ, ಅದು ನೀತಿ ಸಂಹಿತೆಯ ಉಲ್ಲಂಘನೆ ಅಲ್ಲ ಎಂಬುದು ಬಿಜೆಪಿಯ ಅಭಿಪ್ರಾಯವಾಗಿದೆ.

ಎಸ್‌ಪಿ ಸೇರಿದ ‘ಎತ್ತರದ ವ್ಯಕ್ತಿ’

ಪ್ರಜಾವಾಣಿ ವಾರ್ತೆ

ಲಖನೌ: ದೇಶದ ಅತಿ ಎತ್ತರದ ವ್ಯಕ್ತಿ ಎನಿಸಿಕೊಂಡಿರುವ ಉತ್ತರ ಪ್ರದೇಶದ ಪ್ರತಾಪಗಡ ಜಿಲ್ಲೆಯ ಧರ್ಮೇಂದ್ರ ಪ್ರತಾಪ್ ಸಿಂಗ್ ಅವರು ಅಖಿಲೇಶ್ ಯಾದವ್ ಸಮ್ಮುಖದಲ್ಲಿ ಶನಿವಾರ ಸಮಾಜವಾದಿ ಪಕ್ಷಕ್ಕೆ (ಎಸ್‌ಪಿ) ಸೇರ್ಪಡೆಯಾದರು. ಅವರು 8 ಅಡಿ 1 ಇಂಚು ಎತ್ತರವಿದ್ದಾರೆ.

ಪಕ್ಷದ ಪರವಾಗಿ ರಾಜ್ಯದ ವಿವಿಧ ಕಡೆಗಳಲ್ಲಿ ಪ್ರಚಾರ ನಡೆಸುವುದಾಗಿ ಪ್ರತಾಪ್ ಸಿಂಗ್ ಅವರು ಪ್ರಕಟಿಸಿದ್ದಾರೆ. ‘ಸಮಾಜವಾದಿ ಪಕ್ಷದ ನೀತಿಗಳು ಹಾಗೂ ಕಾರ್ಯಕ್ರಮಗಳಿಂದ ಪ್ರೇರಿತನಾಗಿ ಪಕ್ಷ ಸೇರಿದ್ದೇನೆ. ಅಖಿಲೇಶ್ ಅವರು ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗಲಿದ್ದಾರೆ’ ಎಂದು ಹೇಳಿದ್ದಾರೆ.

ಅವಿವಾಹಿತರಾಗಿರುವ 46 ವರ್ಷದ ಪ್ರತಾಪ್ ಸಿಂಗ್ ಅವರಿಗೆ ಈಗಲೂ ಉದ್ಯೋಗ ಸಿಕ್ಕಿಲ್ಲ. ತಮ್ಮ ಕುಟುಂಬದವರು ಹಾಗೂ ಸ್ನೇಹಿತರು ಸಾಕಷ್ಟು ಹುಡುಕಾಡಿದರೂ, ತಮಗೆ ಹೊಂದಿಕೆಯಾಗುವ ಜೋಡಿ ಸಿಕ್ಕಿಲ್ಲ ಎಂದು ಅವರು ಹೇಳಿಕೊಂಡಿದ್ದಾರೆ.

ಹಿಂದಿ ಭಾಷೆಯಲ್ಲಿ ಸ್ನಾತಕೋತ್ತರ ಪದವೀಧರರಾಗಿರುವ ಪ್ರತಾಪ್, ಎತ್ತರದ ನಿಲುವಿನಿಂದಾಗಿ ಹೋದ ಕಡೆಯೆಲ್ಲಾ ಜನರಿಂದ ಗುರುತಿಸಿಕೊಳ್ಳುತ್ತಾರೆ. ಜನರು ಇವರನ್ನು ಸುತ್ತುವರಿದು ಸೆಲ್ಫಿ ತೆಗೆದುಕೊಳ್ಳುತ್ತಾರೆ.

‘ಸಮಾಜದ ಎಲ್ಲ ವರ್ಗಗಳಿಗೂ ನೋವುಂಟು ಮಾಡಿರುವ ಬಿಜೆಪಿಯ ದೋಷಪೂರಿತ ನೀತಿಗಳ ಬಗ್ಗೆ ಜನಜಾಗೃತಿ ಮೂಡಿಸುತ್ತೇನೆ’ ಎಂದು ‘ಲಂಬೂಜಿ’ ಹೇಳಿದ್ದಾರೆ.

ಪ್ರತಾಪ್ ಸಿಂಗ್ ಅವರ ಸೇರ್ಪಡೆಯಿಂದ ಪಕ್ಷಕ್ಕೆ ಬಲ ಬಂದಿದ್ದು, ಅವರನ್ನು ಪಕ್ಷದ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಳ್ಳುವುದಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನರೇಶ್ ಉತ್ತಮ್ ತಿಳಿಸಿದ್ದಾರೆ.

ಎತ್ತರದ ವ್ಯಕ್ತಿಯ ಸೇರ್ಪಡೆಯಿಂದ ಚುನಾವಣಾ ಕಣದಲ್ಲಿ ಸಮಾಜವಾದಿ ಪಕ್ಷವು ಎತ್ತರದ ಸ್ಥಾನಕ್ಕೆ ಹೋಗಲಿದೆಯೇ ಎಂದು ಕಾದುನೋಡಬೇಕಿದೆ.


ಎತ್ತರದ ನಿಲುವಿನ ಧರ್ಮೇಂದ್ರ ಪ್ರತಾಪ್ ಸಿಂಗ್ ಅವರನ್ನು ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಪಕ್ಷಕ್ಕೆ ಬರಮಾಡಿಕೊಂಡರು—ಪಿಟಿಐ ಚಿತ್ರ

‘ನೇತಾಜಿ ಚಿಂತನೆ ಪಾಲಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ’

ನವದೆಹಲಿ (ಪಿಟಿಐ): ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಸೇರ್ಪಡೆಯುಕ್ತ ಮತ್ತು ಜಾತ್ಯತೀತ ಚಿಂತನೆಯನ್ನು ಅಳವಡಿಸಿಕೊಳ್ಳುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಅವರ ಕುಟುಂಬ ಸದಸ್ಯರು ಪ್ರತಿಪಾದಿಸಿದ್ದಾರೆ.

‘ಎಲ್ಲ ಧರ್ಮಗಳವರು ಶಾಂತಿ, ಸೌಹಾರ್ದದಿಂದ ಬದುಕುವುದು ನಮ್ಮ ತಂದೆ ಕನಸಾಗಿತ್ತು. ಪ್ರತಿಮೆ ಸ್ಥಾಪಿಸುವುದಷ್ಟೇ ಅವರಿಗೆ ಗೌರವಲ್ಲ. ಅವರ ಚಿಂತನೆ, ಮೌಲ್ಯಗಳನ್ನು ಅನುಸರಿಸಬೇಕು‘ ಎಂದು ಅನಿತಾ ಬೋಸ್ ಪ್ರತಿಕ್ರಿಯಿಸಿದರು.

ಬೋಸ್ ಅವರ ಮರಿಸೋದರಳಿಯ ಚಂದ್ರಕುಮಾರ್ ಬೋಸ್ ಅವರು, ದೇಶದಲ್ಲಿ ನೇತಾಜಿ ಅವರ ಚಿಂತನೆಗಳನ್ನು ಜಾರಿಗೊಳಿಸಲು ಒತ್ತು ನೀಡಬೇಕು ಎಂದು ಕೇಂದ್ರವನ್ನು ಒತ್ತಾಯಿಸಿದ್ದಾರೆ.

ಬೋಸ್ ಅವರು ಸುಮಾರು 70 ವರ್ಷದ ಹಿಂದೆಯೇ ಮೃತಪಟ್ಟಿದ್ದಾರೆ ಎಂಬ ನಂಬಿಕೆ ಇದೆ. ಆದರೆ, ಅವರ ಸಾವು, ಸಮಯ, ವರ್ಷ, ಸ್ಥಳ ಕುರಿತ ವಿವರಗಳು ಇನ್ನೂ ರಹಸ್ಯವಾಗಿಯೇ ಉಳಿದಿವೆ.

ಸ್ತಬ್ಧಚಿತ್ರ ತಿರಸ್ಕರಿಸಿ ಅವಮಾನ ಕೇಂದ್ರ ವಿರುದ್ಧ ಮಮತಾ ಟೀಕೆ : ‘ನೇತಾಜಿ ಅವರ ಪ್ರತಿಮೆ ಸ್ಥಾಪಿಸುವ ಮೂಲಕ, ಗಣರಾಜ್ಯ ಪಥ ಸಂಚಲನಕ್ಕೆ ಅವರನ್ನು ಕುರಿತ ಸ್ತಬ್ಧಚಿತ್ರ ನಿರಾಕರಿಸಿ ಮಾಡಿದ ಅನ್ಯಾಯ ಮರೆಮಾಚಲಾಗದು’ ಎಂದು ಪಶ್ಚಿಮ ಬಂಗಾಳ ಸರ್ಕಾರ ಟೀಕಿಸಿದೆ.

ಪ್ರಧಾನಿ ನರೇಂದ್ರಮೋದಿ ಅವರ ವಿರುದ್ಧ ಹರಿಹಾಯ್ದಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಸ್ತಬ್ಧಚಿತ್ರ ನಿರಾಕರಿಸುವ ಕಾರಣವನ್ನು ಇನ್ನೂ ಬಹಿರಂಗಪಡಿಸಿಲ್ಲ ಎಂದು ಹೇಳಿದರು.

ಗಣರಾಜ್ಯೋತ್ಸವ ಸಮಾರಂಭದಂದು ನಾವು ಆ ಸ್ತಬ್ಧಚಿತ್ರವನ್ನು ಇಲ್ಲಿ ಪ್ರದರ್ಶಿಸಲಿದ್ದೇವೆ. ಅದು ಎಷ್ಟು ಅದ್ದೂರಿಯಾಗಿದೆ ಎಂಬುದನ್ನು ಜನರೇ ನೋಡಲಿ. ಅದು, ನೇತಾಜಿ ಅವರ ವ್ಯಕ್ತಿತ್ವ ಮತ್ತು 75ನೇ ಸ್ವಾತಂತ್ರ್ಯೋತ್ಸವದ ಉತ್ಸಾಹವನ್ನು ಬಿಂಬಿಸಲಿದೆ. ಇದನ್ನು ನಿರಾಕರಿಸಿ ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳಕ್ಕೆ ಅನ್ಯಾಯ ಮಾಡಿದೆ ಎಂದು ಟೀಕಿಸಿದರು.

ಶಿಂಜೊ ಅಬೆಗೆ ನೇತಾಜಿ ಪ್ರಶಸ್ತಿ ಪ್ರದಾನ

ಕೋಲ್ಕತ್ತ (ಪಿಟಿಐ): ಇಲ್ಲಿನ ನೇತಾಜಿ ಸಂಶೋಧನಾ ಕೇಂದ್ರವು 2022ರ ನೇತಾಜಿ ಪ್ರಶಸ್ತಿಯನ್ನು ಜಪಾನ್‌ನ ಮಾಜಿ ಪ್ರಧಾನ ಮಂತ್ರಿ ಶಿಂಜೊ ಅಬೆ ಅವರಿಗೆ ಭಾನುವಾರ ಪ್ರದಾನ ಮಾಡಿದೆ.

ನೇತಾಜಿ ಸುಭಾಸ್ ಚಂದ್ರ ಬೋಸ್ ಅವರ 125 ನೇ ಜನ್ಮದಿನಾಚರಣೆ ಅಂಗವಾಗಿ ಅವರ ಎಲ್ಜಿನ್ ರಸ್ತೆಯಲ್ಲಿನ ನಿವಾಸದಲ್ಲಿ ನಡೆದ ಸಮಾರಂಭದಲ್ಲಿ ಕೋಲ್ಕತ್ತದ ಜಪಾನ್‌ನ ಕಾನ್ಸುಲ್ ಜನರಲ್ ನಕಮುರಾ ಯುಟಕಾ ಅವರು ಅಬೆ ಅವರ ಪರವಾಗಿ ಗೌರವವನ್ನು ಸ್ವೀಕರಿಸಿದರು.

ನುಡಿ-ಕಿಡಿ



ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸ್ಥಿತಿಯು ಶೋಚನೀಯವಾಗಿದೆ. ಆ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯು ಕೆಲವೇ ತಾಸುಗಳಲ್ಲಿ ತಮ್ಮ ನಿಲುವು ಬದಲಿಸಿಕೊಂಡರು. ಜನರು ತಮ್ಮ ಮತಗಳನ್ನು ಕಾಂಗ್ರೆಸ್‌ಗೆ ನೀಡಿ ವ್ಯರ್ಥ ಮಾಡದಿರುವುದು ಒಳ್ಳೆಯದು. ಎಲ್ಲರೂ ಬಿಎಸ್‌ಪಿಗೆ ಮತ ಹಾಕಬೇಕು

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ


ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್, ಎಸ್‌ಪಿ, ಬಹುಜನ ಸಮಾಜ ಪಕ್ಷ ಎಲ್ಲವಕ್ಕೂ ಒಟ್ಟಾಗಿ ನೂರು ಕ್ಷೇತ್ರಗಳೂ ಸಿಗುವುದಿಲ್ಲ. ಬಿಜೆಪಿಗೆ ಶೇ 50ಕ್ಕೂ ಹೆಚ್ಚು ಮತಗಳು ದೊರೆಯಲಿವೆ. ಈ ಹಿಂದಿನ ಎಲ್ಲ ದಾಖಲೆಗಳು ಮುರಿಯಲಿವೆ

ದಿನೇಶ್ ಶರ್ಮಾ, ಉತ್ತರ ಪ್ರದೇಶ ಉಪಮುಖ್ಯಮಂತ್ರಿ



ಸತ್ಯೇಂದ್ರ ಜೈನ್ (ದೆಹಲಿಯ ಸಚಿವ) ಅವರನ್ನು ಜಾರಿ ನಿರ್ದೇಶನಾಲಯವು ಪಂಜಾಬ್ ಚುನಾವಣೆಗೆ ಮುನ್ನ ಬಂಧಿಸಲಿದೆ ಎಂಬ ಮಾಹಿತಿ ಸಿಕ್ಕಿದೆ. ಈ ಹಿಂದೆಯೂ, ಜೈನ್ ಅವರಿಗೆ ಸೇರಿದ ಸ್ಥಳಗಳಲ್ಲಿ ಕೇಂದ್ರದ ಸಂಸ್ಥೆಗಳು ಶೋಧ ನಡೆಸಿದ್ದವು. ಚುನಾವಣೆ ಇರುವುದರಿಂದ ದಾಳಿ, ಬಂಧನ ಆಗಲಿವೆ. ಇಂತಹ ದಾಳಿ, ಬಂಧನಕ್ಕೆ ಹೆದರುವುದಿಲ್ಲ. ಏಕೆಂದರೆ, ನಾವು ತಪ್ಪು ಮಾಡಿಲ್ಲ

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ



ಒಬಿಸಿ ಸಮುದಾಯವನ್ನು ಪ್ರತಿನಿಧಿಸುತ್ತಿದ್ದ ಸಚಿವರು ಪಕ್ಷ ಬಿಟ್ಟಿರುವುದರಿಂದ ಬಿಜೆಪಿಗೆ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಅನನುಕೂಲ ಆಗದು. ಅವರೆಲ್ಲರೂ ಸ್ವ ಹಿತಾಸಕ್ತಿಗಾಗಿ ಪಕ್ಷ ಬಿಟ್ಟದ್ದಾರೆ. ಅವರಿಗೆ ಯಾವುದೇ ಸಿದ್ಧಾಂತ ಇಲ್ಲ. ಪಕ್ಷಾಂತರಿಗಳ ಜತೆಗೆ ಮತದಾರರು ಹೋದ ಬಗ್ಗೆ ನನಗೆ ಮಾಹಿತಿ ಇಲ್ಲ

ಕೇಶವ ಪ್ರಸಾದ್ ಮೌರ್ಯ, ಉತ್ತರ ಪ್ರದೇಶ ಉಪಮುಖ್ಯಮಂತ್ರಿ

ಆಧಾರ: ಪಿಟಿಐ

ರಾವತ್ ತಮ್ಮನ ಸ್ಪರ್ಧೆ ಇಲ್ಲ

ಡೆಹ್ರಾಡೂನ್ (ಪಿಟಿಐ): ಸೇನಾಪಡೆಗಳ ಮುಖ್ಯಸ್ಥರಾಗಿದ್ದ ಜ. ಬಿಪಿನ್ ರಾವತ್ ಅವರ ತಮ್ಮ, ಇತ್ತೀಚೆಗೆ ಬಿಜೆಪಿ ಸೇರಿದ್ದ ಕರ್ನಲ್ ವಿಜಯ್ ರಾವತ್ ಅವರು ಉತ್ತರಾಖಂಡ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದಾರೆ.

ಪಕ್ಷದ ಮುಖಂಡರು ಸ್ಪರ್ಧಿಸುವಂತೆ ಒತ್ತಾಯಿಸಿದ್ದರು. ಆದರೆ, ಅದನ್ನು ನಿರಾಕರಿಸಿದ್ದೇನೆ ಎಂದು ವಿಜಯ್ ತಿಳಿಸಿದ್ದಾರೆ. ಸ್ಪರ್ಧಿಸಲೇಬೇಕು ಎಂಬ ಒತ್ತಡ ಬಂದರೆ ಏನು ಮಾಡುವಿರಿ ಎಂಬ ಪ್ರಶ್ನೆಗೆ, ಶೇ 99ರಷ್ಟು ಭಾಗ ಅದನ್ನು ನಿರಾಕರಿಸಲಾಗುವುದು ಎಂದು ಅವರು ಹೇಳಿದ್ದಾರೆ.

‘ಚುನಾವಣೆಯಲ್ಲಿ ಸ್ಪರ್ಧಿಸಲು ನನಗೆ ಆಸಕ್ತಿ ಇಲ್ಲ. ಉತ್ತರಾಖಂಡದ ಜನರಿಗೆ ಸೇವೆ ಸಲ್ಲಿಸಬೇಕು ಎಂಬುದೇ ನನ್ನ ಧ್ಯೇಯ’ ಎಂದು ಅವರು ಹೇಳಿದ್ದಾರೆ.

ಚುನಾವಣೆಗೆ ಕೆಲವೇ ದಿನಗಳಿರುವಾಗ ವಿಜಯ್ ಅವರು ಬಿಜೆಪಿ ಸೇರಿದ್ದರು. ಹಾಗಾಗಿ, ಅವರು ಚುನಾವಣೆಯಲ್ಲಿ ಸ್ಪರ್ಧಿಸಬಹುದು ಎಂಬ ವರದಿಗಳು ಪ್ರಕಟವಾಗಿದ್ದವು.

ಉತ್ತರಾಖಂಡ: ಮಹಿಳಾ ಮೋರ್ಚಾ ಅಧ್ಯಕ್ಷೆಗೆ ಬಿಜೆಪಿ ಟಿಕೆಟ್ ಇಲ್ಲ

ಡೆಹ್ರಾಡೂನ್ (ಪಿಟಿಐ): ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ರೀತು ಖಂಡೂರಿ ಅವರನ್ನು ಉತ್ತರಾಖಂಡ ವಿಧಾನಸಭೆ ಚುನಾವಣೆ ಅಭ್ಯರ್ಥಿಗಳ ಪಟ್ಟಿಯಿಂದ ಬಿಜೆಪಿ ಕೈಬಿಟ್ಟಿದೆ. ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ, ಇತ್ತೀಚೆಗೆ ಬಿಜೆಪಿಗೆ ಸೇರ್ಪಡೆಯಾದ ಸರಿತಾ ಆರ್ಯ ಅವರಿಗೆ ಟಿಕೆಟ್ ನೀಡಿದೆ.

ಈ ವಾರ ಬಿಡುಗಡೆ ಮಾಡಿದ 59 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಯಮಕೇಶ್ವರ ಕ್ಷೇತ್ರದ ಹಾಲಿ ಶಾಸಕಿಯಾಗಿರುವ ರೀತು ಅವರ ಹೆಸರು ಇರಲಿಲ್ಲ. ರೇಣು ಬಿಷ್ತ್ ಅವರನ್ನು ಈ ಕ್ಷೇತ್ರದಿಂದ ಬಿಜೆಪಿ ಕಣಕ್ಕೆ ಇಳಿಸಿದೆ.

ಕೆಲವೇ ದಿನಗಳ ಹಿಂದೆ ಬಿಜೆಪಿ ಸೇರಿದ್ದ ಸರಿತಾ ಆರ್ಯಾ ಅವರಿಗೆ ಅವರು ಬಯಸಿದ್ದ ನೈನಿತಾಲ್ ಕ್ಷೇತ್ರದಿಂದಲೇ ಟಿಕೆಟ್ ನೀಡಲಾಗಿದೆ.

ಮಾಜಿ ಮುಖ್ಯಮಂತ್ರಿ ಭುವನ್ ಚಂದ್ರ ಖಂಡೂರಿ ಅವರ ಮಗಳಾಗಿರುವ ರೀತು ಅವರಿಗೆ ಟಿಕೆಟ್ ನಿರಾಕರಿಸಿದ್ದು ಪಕ್ಷದಲ್ಲಿ ಹಲವರ ಆಶ್ಚರ್ಯಕ್ಕೆ ಕಾರಣವಾಗಿದೆ. ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಅನು ಕಕ್ಕರ್ ಅವರ ನೇತೃತ್ವದ ನಿಯೋಗವು ಪಕ್ಷದ ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿ ಅಜಯ್ ಕುಮಾರ್ ಅವರನ್ನು ಭೇಟಿಯಾಗಿ, ನಿರ್ಧಾರ ಮರುಪರಿಶೀಲನೆಗೆ ಕೋರಿದೆ.

ಚುನಾವಣಾ ಕಣದಲ್ಲಿ

- **ಕಾಂಗ್ರೆಸ್ ಅಭ್ಯರ್ಥಿ ಅಪ್ನಾ ದಳಕ್ಕೆ:** ರಾಂಪುರ ಜಿಲ್ಲೆಯ ಸುಅರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹೈದರ್ ಅಲಿ ಖಾನ್ ಅವರು ಕಾಂಗ್ರೆಸ್ ತೊರೆದಿದ್ದಾರೆ. ಬಿಜೆಪಿಯ ಮಿತ್ರಪಕ್ಷ ಅಪ್ನಾ ದಳದ (ಸೋನೇಲಾಲ್) ಅಭ್ಯರ್ಥಿಯಾಗಿ ಅದೇ ಕ್ಷೇತ್ರದಿಂದ ಅವರು ಸ್ಪರ್ಧಿಸಲಿದ್ದಾರೆ. ಅವರ ತಂದೆ ನವಾಬ್ ಕಾಜಿಂ ಅಲಿ ಖಾನ್ ಅವರು ಪಕ್ಕದ ರಾಂಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಬರೇಲಿ ಕಂಟೋನ್ಮೆಂಟ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುಪ್ರಿಯಾ ಆರನ್ ಅವರು ಎಸ್‌ಪಿಗೆ ಶನಿವಾರವಷ್ಟೇ ಸೇರಿದ್ದರು
- **ತಾರಾ ಪ್ರಚಾರಕರು:** ಸಮಾಜವಾದಿ ಪಕ್ಷವು ಉತ್ತರ ಪ್ರದೇಶದಲ್ಲಿ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಿಗೆ 30 ತಾರಾ ಪ್ರಚಾರಕರ ಪಟ್ಟಿ ಪ್ರಕಟಿಸಿದೆ. ಅದರಲ್ಲಿ ಪಕ್ಷದ ಸ್ಥಾಪಕ ಮುಲಾಯಂ ಸಿಂಗ್ ಯಾದವ್, ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಬಿಜೆಪಿ ತೊರೆದು ಇತ್ತೀಚೆಗೆ ಎಸ್‌ಪಿ ಸೇರಿದ ಸ್ವಾಮಿ ಪ್ರಸಾದ್ ಮೌರ್ಯ ಅವರೂ ಇದ್ದಾರೆ. ಪಕ್ಷದ ಉಪಾಧ್ಯಕ್ಷ ಕಿರಣ್ಮಯ್ ನಂದಾ, ಪ್ರಧಾನ ಕಾರ್ಯದರ್ಶಿ ರಾಮ್‌ಗೋಪಾಲ್ ಯಾದವ್, ರಾಜ್ಯಸಭಾ ಸದಸ್ಯೆ ಜಯಾ ಬಚ್ಚನ್ ಅವರಿಗೆ ಸ್ಥಾನ ನೀಡಲಾಗಿದೆ
- **ಪಕ್ಷೇತರ ಮಗನ ಪರವಾಗಿ ಸಚಿವನ ಪ್ರಚಾರ:** ಪಂಜಾಬ್ ಸಚಿವ ರಾಣಾ ಗುರ್ಜೀತ್ ಸಿಂಗ್ ಅವರು ತಮ್ಮ ಮಗ ಮತ್ತು ಪಕ್ಷೇತರ ಅಭ್ಯರ್ಥಿ ರಾಣಾ ಇಂದರ್ ಪ್ರತಾಪ್ ಸಿಂಗ್ ಪರವಾಗಿ ಬಿರುಸಿನ ಪ್ರಚಾರ ನಡೆಸಿದ್ದಾರೆ. ನವತೇಜ್ ಸಿಂಗ್ ಚೀಮಾ ಅವರನ್ನು ಕಾಂಗ್ರೆಸ್ ಇಲ್ಲಿ ಕಣಕ್ಕೆ ಇಳಿಸಿದೆ. ಗುರ್ಜೀತ್ ಅವರಿಗೆ ಕಪುರ್ತಲಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ನೀಡಲಾಗಿದೆ. ಚೀಮಾ ಸೇರಿ ನಾಲ್ವರು ಮುಖಂಡರು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದು, ಗುರ್ಜೀತ್ ಉಚ್ಚಾಟಿಸುವಂತೆ ಒತ್ತಾಯಿಸಿದ್ದರು

ನೇತಾಜಿ ಸುಭಾಷ್ ಚಂದ್ರ ಬೋಸ್ ಅಪದಾ ಪ್ರಬಂಧನ್ ಪುರಸ್ಕಾರ್

‘ಗುಜರಾತ್‌ನ ಸಂಸ್ಥೆ, ಸಿಕ್ಕಿಂನ ವಿನೋದ್ ಶರ್ಮಾಗೆ ಪ್ರಶಸ್ತಿ’

ನವದೆಹಲಿ (ಪಿಟಿಐ): ಪ್ರಾಕೃತಿಕ ವಿಕೋಪ ನಿರ್ವಹಣೆಯಲ್ಲಿ ಉತ್ತಮ ಸಾಧನೆಗೆ ನೀಡುವ ‘ಸುಭಾಷ್ ಚಂದ್ರ ಬೋಸ್ ಅಪದಾ ಪ್ರಬಂಧನ್ ಪುರಸ್ಕಾರ್’ ಪ್ರಶಸ್ತಿಗೆ 2022ನೇ ಸಾಲಿಗೆ ಗುಜರಾತ್ ಪ್ರಾಕೃತಿಕ ವಿಕೋಪ ನಿರ್ವಹಣೆ ಸಂಸ್ಥೆ (ಜಿಐಡಿಎಂ) ಮತ್ತು ಸಿಕ್ಕಿಂ ಪ್ರಾಕೃತಿಕ ವಿಕೋಪ ಪ್ರಾಧಿಕಾರದ ಉಪಾಧ್ಯಕ್ಷ ವಿನೋದ್ ಶರ್ಮಾ ಅವರನ್ನು ಆಯ್ಕೆ ಮಾಡಲಾಗಿದೆ. ಈ ಬಗ್ಗೆ ಕೇಂದ್ರ ಗೃಹ ಸಚಿವಾಲಯವು ಹೇಳಿಕೆ ನೀಡಿದೆ.

ಪ್ರತಿವರ್ಷವು ಜನವರಿ 23ರಂದು ಈ ಪ್ರಶಸ್ತಿಯನ್ನು ಪ್ರಕಟಿಸಲಿದ್ದು, ಸಂಸ್ಥೆ ಮತ್ತು ವ್ಯಕ್ತಿಗತ ವಿಭಾಗದಲ್ಲಿ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿ ಮೊತ್ತವು ಸಂಸ್ಥೆಗಳಿಗೆ ₹ 51 ಲಕ್ಷ, ವ್ಯಕ್ತಿಗಳಿಗೆ ₹ 5 ಲಕ್ಷ ನಗದು ಒಳಗೊಂಡಿದೆ. ಜೊತೆಗೆ ಪ್ರಮಾಣಪತ್ರ ನೀಡಲಾಗುತ್ತದೆ.

ಈ ವರ್ಷದ ಪ್ರಶಸ್ತಿಗಾಗಿ ಜುಲೈ 1, 2021ರ ನಂತರ ನಾಮನಿರ್ದೇಶನಗಳನ್ನು ಪರಿಗಣಿಸಿದ್ದು, ಒಟ್ಟು 243 ಪ್ರವೇಶಗಳು ಬಂದಿದ್ದವು. ಜಿಐಡಿಎಂ 2012ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಗುಜರಾತ್‌ನಲ್ಲಿ ಪ್ರಾಕೃತಿಕ ವಿಕೋಪ ನಿರ್ವಹಣೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಪ್ರಾಕೃತಿಕ ವಿಕೋಪ ನಿರ್ವಹಣೆ ಕುರಿತಂತೆ ಸಾಮರ್ಥ್ಯ ವೃದ್ಧಿಗೆ ಸಂಸ್ಥೆ ಒತ್ತು ನೀಡುತ್ತಿದ್ದು, ಈವರೆಗೆ 12,000 ವೃತ್ತಿಪರರಿಗೆ ತರಬೇತಿ ನೀಡಿದೆ. ಸಾಂಕ್ರಾಮಿಕ ಪಿಡುಗು ಹಾಗೂ ಅಪಾಯದ ಸಂದರ್ಭದಲ್ಲಿ ನಿರ್ವಹಣೆ ತರಬೇತಿ ಒದಗಿಸಿದೆ ಎಂದು ಹೇಳಿಕೆಯು ವಿವರಣೆ ನೀಡಿದೆ.

ವೈಯಕ್ತಿಕ ವಿಭಾಗದಲ್ಲಿ ಆಯ್ಕೆಯಾಗಿರುವ ಶರ್ಮಾ ಅವರು ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆಯಲ್ಲಿ ಹಿರಿಯ ಪ್ರೊಫೆಸರ್ ಮತ್ತು ಸಿಕ್ಕಿಂ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರು. ಈಗಿನ ರಾಷ್ಟ್ರೀಯ ಪ್ರಾಕೃತಿಕ ವಿಕೋಪ ನಿರ್ವಹಣೆ ಸಂಸ್ಥೆಯ ಸ್ಥಾಪಕರೂ ಹೌದು ಎಂದು ವಿವರಿಸಿದೆ.

2019, 2020, 2021ನೇ ಸಾಲಿನ ಪುರಸ್ಕೃತರ ಜೊತೆಗೆ ಬೋಸ್ ಅವರ 125ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಚಿವಾಲಯದ ಹೇಳಿಕೆತಿಳಿಸಿದೆ.

‘ಭಾರತದಷ್ಟೇ ಬೋಸ್, ಸಿಂಗಪುರ ಇತಿಹಾಸದ ಭಾಗವೂ ಹೌದು’ (ಸಿಂಗಪುರ ವರದಿ): ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಭಾರತದ ಇತಿಹಾಸದ ಭಾಗವಾಗಿರುವಷ್ಟೇ ಸಿಂಗಪುರದ ಇತಿಹಾಸದ ಭಾಗವೂ ಆಗಿದ್ದಾರೆ ಎಂದು ಇಲ್ಲಿನ ಪ್ರಮುಖ ಲೇಖಕ ಅಸಾದ್ ಲತೀಫ್ ಹೇಳಿದ್ದಾರೆ.

ಸಿಂಗಪುರದಲ್ಲಿ ನಡೆದ ಬೋಸ್ ಅವರ 125ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿಂಗಪುರ ಸ್ಥಾಪಕರಲ್ಲಿ ಪ್ರಮುಖರಾದ ಸರ್ ಸ್ಟ್ಯಾನ್‌ಫೋರ್ಡ್ ರಾಫೆಲ್ಸ್ ಅವರಂತೆ, ಬೋಸ್ ಅವರು ಸಿಂಗಪುರ ಇತಿಹಾಸದ ಭಾಗವೇ ಆಗಿದ್ದಾರೆ ಎಂದು ಹೇಳಿದರು.

‘ಸ್ವತಂತ್ರ ಸಿಂಗಪುರ ಸ್ಥಾಪನೆಯಲ್ಲಿ ಭಾರತ ವಹಿಸಿದ್ದ ಪಾತ್ರದಲ್ಲಿ ಬೋಸ್ ಅವರು ಕೇಂದ್ರ ಸ್ಥಾನದಲ್ಲಿ ನಿಲ್ಲುತ್ತಾರೆ’ ಎಂದು ಹೇಳಿದರು. ಅವರು ‘ಸಿಂಗಪುರದಲ್ಲಿ ನೇತಾಜಿ ದಿನಗಳು’ ಕುರಿತ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

ಭಾರತದ ರಾಯಭಾರ ಕಚೇರಿಯು ವಿಚಾರಗೋಷ್ಠಿ ಆಯೋಜಿಸಿತ್ತು. ಇಲ್ಲಿ, ‘ಬೋಸ್ ಅವರ ಭಾರತೀಯ ರಾಷ್ಟ್ರೀಯ ಸೇನೆ (ಐಎನ್‌ಎ), ಆಗ್ನೇಯ ಭಾಗದ ಮಲಯ್ ಪೆನಿಸುಲಾದಲ್ಲಿ ನಿಜವಾದ ಅರ್ಥದಲ್ಲಿ ಸಾಮೂಹಿಕ ರಾಜಕಾರಣಕ್ಕೆ ಪ್ರೇರೆಪಣೆಯಾಗಿತ್ತು. ಬೋಸ್ ಅವರು ಕಾರ್ಮಿಕರ ಜೊತೆಗೂಡಿ ಕಾರ್ಯನಿರ್ವಹಿಸಿದ್ದು, ಆಗ್ನೇಯ ಏಷಿಯಾದ ಭಾರತೀಯರನ್ನು ಗೌರವಿಸುತ್ತಿದ್ದರು’ ಎಂಬ ಅಂಶವು ಉಲ್ಲೇಖವಾಯಿತು.


ಸಂಸತ್ತಿನಲ್ಲಿ ಭಾನುವಾರ ನಡೆದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಸ್ಪೀಕರ್ ಓಂ ಬಿರ್ಲಾ, ಸಚಿವ ಪಿಯೂಶ್ ಗೋಯಲ್ ಪಾಲ್ಗೊಂಡಿದ್ದರು.

‘ವಿಧಾನಸೌಧದ ಮುಂಭಾಗಕ್ಕೆ ಸುಭಾಷ್ ಚಂದ್ರ ಬೋಸ್ ಪ್ರತಿಮೆ ಸ್ಥಳಾಂತರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ವಿಧಾನಸೌಧದ ಆವರಣದಿಂದ ಮುಂಭಾಗದ ಸೂಕ್ತ ಜಾಗಕ್ಕೆ ಶೀಘ್ರದಲ್ಲಿ ಸ್ಥಳಾಂತರ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನಾಚಾರಣೆ ಅಂಗವಾಗಿ ಭಾನುವಾರ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ‘ಸೂಕ್ತ ಸ್ಥಳದಲ್ಲಿ ಪ್ರತಿಮೆ ಸ್ಥಾಪಿಸುವುದು ನಾವು ಅವರಿಗೆ ಸಲ್ಲಿಸಬೇಕಾದ ಗೌರವ. ಈ ಬಗ್ಗೆ ಕೂಡಲೇ ತೀರ್ಮಾನ ಕೈಗೊಳ್ಳಲಾಗುವುದು. ಅಲ್ಲದೆ, ನೇತಾಜಿ ಅವರ ಮುಂದಿನ ಜನ್ಮದಿನಾಚರಣೆಯನ್ನು ವಿಧಾನಸೌಧದ ಮುಂಭಾಗದಲ್ಲಿಯೇ ಮಾಡಲಾಗುವುದು’ ಎಂದು ಹೇಳಿದರು.

ವರ್ಷ ಪೂರ್ತಿ ಆಚರಣೆ: ‘ಸುಭಾಷ್ ಚಂದ್ರ ಬೋಸ್ ಅವರ 125ನೇ ಜನ್ಮ ದಿನಾಚರಣೆಯನ್ನು ಸರ್ಕಾರದ ವತಿಯಿಂದ ವರ್ಷಪೂರ್ತಿ ಆಚರಿಸಲಾಗುವುದು. ಶಾಲಾ ಕಾಲೇಜುಗಳಲ್ಲಿ ನೇತಾಜಿ ಅವರ ಕುರಿತು ಚರ್ಚೆ, ವಸ್ತುಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮತ್ತೊಮ್ಮೆ ಅವರ ಧ್ಯೇಯ, ಆದರ್ಶಗಳನ್ನು ಇಂದಿನ’ ಎಂದರು.


ನೇತಾಜಿ ಸುಭಾಷ್ ಚಂದ್ರ ಬೋಸ್ ಭಾವಚಿತ್ರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಪುಷ್ಪನಮನ ಸಲ್ಲಿಸಿ, ಪ್ರತಿಜ್ಞೆ ಸ್ವೀಕರಿಸಿದರು. ಸಚಿವ ಭೈರತಿ ಬಸವರಾಜು, ಶಾಸ್ತ್ರೀಮಠ ಗುರುಜಿ ರಾಜಯೋಗಿಂದ್ರ ವೀರಯ್ಯ ಸ್ವಾಮಿ, ನೇತಾಜಿ ಸುಭಾಸ್ ಚಂದ್ರ ಬೋಸ್ ಅಧ್ಯಯನ ಮತ್ತು ಬಹು ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಜಿ. ಆರ್. ಶಿವಶಂಕರ್, ಅಮರನಾಥ್ ಕೋಟಿ ಇದ್ದರು ಪ್ರಜಾವಾಣಿ ಚಿತ್ರ



ಕಲಿತದ್ದು ಮುಗಿಯಿತು ಎಂಬ ಅಹಂ ಭಾವ ಎಂದಿಗೂ ಸಲ್ಲ.



ವಾಯುಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಅಧ್ಯಯನಕ್ಕಾಗಿ ರೂರ್ಕಿ ಐಐಟಿ ಆನ್‌ಲೈನ್ ಕೋರ್ಸ್ ಆರಂಭಿಸಿದೆ. ಕೋರ್ಸ್ ಕುರಿತ ವಿವರ ಇಲ್ಲಿದೆ.

‘ವಾಯು ಮಾಲಿನ್ಯ ನಿಯಂತ್ರಣ’ಕ್ಕೆ ಆನ್‌ಲೈನ್ ಕೋರ್ಸ್

ಕೋರ್ಸ್ ಕಾರ್ನರ್

ಗುರುರಾಜ್ ಎಸ್. ದಾವಣಗೆರೆ

ಕೈಗಾರಿಕಾ ಕ್ರಾಂತಿ, ಆಧುನಿಕ ತಂತ್ರಜ್ಞಾನ ಮತ್ತು ಮಾನವ ಲಾಲಸೆಗಳ ಅಪಾಯಕಾರಿ ಕೊಡುಗೆಯೆಂದೇ ಗುರುತಿಸಲಾಗುವ ವಾಯುಮಾಲಿನ್ಯ, ಮಾರಣಾಂತಿಕ ಕಾಯಿಲೆಗಳಿಗಿಂತ ಹೆಚ್ಚು ಮಾನವ ಪ್ರಾಣ ಹರಣ ಮಾಡುತ್ತಿದೆ. ಹಿಮಖಂಡಗಳು ಕರಗಿ, ಭೂಮಿ ಬಿಸಿ ಏರಿ, ಮಳೆ ಚಕ್ರಗಳು ತಿರುಗು ಮುರುಗಾಗಲು ವಾಯು ಮಾಲಿನ್ಯವೇ ಕಾರಣ ಎಂದು ನಿರ್ಧಾರವಾಗಿದೆ.

ಓಝೋನ್ ಪದರಗಳನ್ನು ಛಿದ್ರಮಾಡಿ, ‘ಜೀವ ಸಂಕುಲ’ಕ್ಕೆ ಮಾರಕವಾಗಿರುವ ವಾಯುಮಾಲಿನ್ಯವನ್ನು ನಿಯಂತ್ರಿಸಲು ಏನೆಲ್ಲ ಮಾಡಬಹುದು ಎಂಬುದರ ಬಗ್ಗೆ ಸ್ಥಳೀಯ ಹಾಗೂ ವಿಶ್ವ ಮಟ್ಟದಲ್ಲಿ ಚರ್ಚೆ, ಸಂವಾದಗಳು ನಡೆಯುತ್ತಿವೆ.
ಈ ಚರ್ಚೆ-ಸಂವಾದಗಳಿಗೆ ಪೂರಕವಾದ ಪಠ್ಯಕ್ರಮದ ಅಧ್ಯಯನ ಅಗತ್ಯ ಎಂಬುದನ್ನು ಮನಗಂಡ ರೂರ್ಕಿ ಐಐಟಿ (IIT ROORKEE) ಕೇಂದ್ರ ಸರ್ಕಾರದ SWAYAM (Study Webs of Active – Learning for Young Aspiring Minds) ಸಹಯೋಗದಲ್ಲಿ ಆನ್‌ಲೈನ್ ಕೋರ್ಸ್ ಪ್ರಾರಂಭಿಸಿದೆ. ಕಡಿಮೆ ಅವಧಿಯ ಹಾಗೂ ಕಡಿಮೆ ವೆಚ್ಚದ ಈ ಕೋರ್ಸ್‌ಗಾಗಿ ವಿಶೇಷ ಪಠ್ಯಗಳನ್ನು ಸಿದ್ಧಪಡಿಸಿದೆ.

ಇಂದಿನಿಂದ (ಜನವರಿ 24) ಕೋರ್ಸ್ ಪ್ರಾರಂಭವಾದರೂ, ಕೋರ್ಸ್ ದಾಖಲಾತಿಗೆ ಏಪ್ರಿಲ್ 15ರವರೆಗೆ ಅವಕಾಶವಿದೆ.

ಮೂರು ತಿಂಗಳಿನ ಈ ಕೋರ್ಸ್‌ನಲ್ಲಿ ಒಟ್ಟು 12 ಮಾಡ್ಯೂಲ್‌ಗಳಿರುತ್ತವೆ. ವಾಯುಮಾಲಿನ್ಯಕ್ಕೆ ಕಾರಣ, ವಿಧಗಳು, ನಿಯಂತ್ರಣಕ್ಕೆ ಬೇಕಾದ ತಂತ್ರಜ್ಞಾನ, ಅವುಗಳ ಬಳಕೆ, ನಿರ್ಮಾಣ, ಒಳಾಂಗಣ ಮಾಲಿನ್ಯ, ಅಂತರರಾಷ್ಟ್ರೀಯ ಒಪ್ಪಂದಗಳು, ಓಝೋನ್ ಪದರಕ್ಕೆ ಹಾನಿ, ಉಪಗ್ರಹ ಮಾಹಿತಿ ವಿಶ್ಲೇಷಣೆಗಳ ಕುರಿತು ವಿಸ್ತೃತವಾಗಿ ಕಲಿಸಲಾಗುತ್ತದೆ. ಕೊನೆಯ ಎರಡು ಮಾಡ್ಯೂಲ್‌ಗಳಲ್ಲಿ ಪ್ರಾಯೋಗಿಕ ಸಲಹೆಗಳಿರುತ್ತವೆ. ಸಿವಿಲ್ ಎಂಜಿನಿಯರಿಂಗ್ ಓದುವ ವಿದ್ಯಾರ್ಥಿಗಳಿಗೆ ಈ ಕೋರ್ಸ್‌ನಿಂದ ಹೆಚ್ಚು ಅನುಕೂಲ.

ಶುಲ್ಕ ವಿವರ: ₹1ಸಾವಿರ ಪರೀಕ್ಷಾ ಶುಲ್ಕ ಪಾವತಿಸಿ, ಮೂರು ಗಂಟೆಗಳ ಪರೀಕ್ಷೆಯನ್ನು ಯಾವುದಾದರೂ ಆಯ್ದ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಬರೆಯಬೇಕು. ಪ್ರಮಾಣ ಪತ್ರವನ್ನು ಐಐಟಿ ರೂರ್ಕಿ ಮತ್ತು NPTEL(National Program on Technology Enhanced Learning) ಗಳು ಜಂಟಿಯಾಗಿ ನೀಡುತ್ತವೆ.
ಕೋರ್ಸ್ ಕುರಿತ ವಿವರಕ್ಕಾಗಿ ಈ ಲಿಂಕ್ ನೋಡಿ: https://onlinecourses.nptel.ac.in

- ವಿದ್ಯಾರ್ಹತೆ : ವಿಜ್ಞಾನ / ಎಂಜಿನಿಯರಿಂಗ್ ಪದವಿ ಅಥವ ಸ್ನಾತಕೋತ್ತರ ಪದವಿ.
- ಅವಧಿ : 12 ವಾರಗಳು
- ಕೋರ್ಸ್ ಪ್ರಾರಂಭದ ದಿನಾಂಕ : 24 ಜನವರಿ 2022
- ಮುಕ್ತಾಯದ ದಿನಾಂಕ : 15 ಏಪ್ರಿಲ್ 2022
- ದಾಖಲಾತಿಗೆ ಕೊನೆಯ ದಿನಾಂಕ : 31 ಜನವರಿ 2022
- ಪರೀಕ್ಷೆ : 24 ಏಪ್ರಿಲ್ 2022
- ಪರೀಕ್ಷಾ ಶುಲ್ಕ : ₹1000
- ಕ್ರೆಡಿಟ್ ಪಾಯಿಂಟ್‌ಗಳು : 03



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

ರೊಬೋಟಿಕ್ಸ್: ಉದ್ಯೋಗ ನಷ್ಟವಾಗುತ್ತಿದೆಯೇ?

ಓದುಗರಾದ ಕಿರಣ್‌ರಾಜ್‌ರವರು ಎರಡು ಪ್ರಶ್ನೆಗಳನ್ನು ಕಳುಹಿಸಿದ್ದಾರೆ. ಅದರಲ್ಲಿ ಒಂದು ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್‌ಗೆ ಸಂಬಂಧಿಸಿದ್ದು. ಇನ್ನೊಂದು ನಮ್ಮ ದೇಶಕ್ಕೆ ಅನುಗುಣವಾದ ಎಂಜಿನಿಯರಿಂಗ್‌ನ ಇತರ ಕೋರ್ಸ್‌ಗಳ ಕುರಿತು ಮಾಹಿತಿ ನೀಡಿ ಎಂದು ಕೇಳಿದ್ದಾರೆ.

ಪ್ರಶ್ನೆ 1: ಕೃತಕ ಬುದ್ಧಿಮತ್ತೆ (ಎಐ) ಮತ್ತು ರೊಬೊಟಿಕ್ಸ್‌ನಿಂದ ಉದ್ಯೋಗ ನಷ್ಟವಾಗುತ್ತಿದೆಯೇ ಅಥವಾ ಸೃಷ್ಟಿಯಾಗುತ್ತಿದೆಯೇ?

ಈ ಪ್ರಶ್ನೆಗಳಿಗೆ ಸ್ವಲ್ಪ ವಿವರವಾಗಿ ಉತ್ತರ ನೀಡಬೇಕಿದೆ. ಕೃತಕ ಬುದ್ಧಿಮತ್ತೆ ಉಪಯೋಗಿಸಿ, ಯಂತ್ರಗಳು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಿ, ಇನ್ನೂ ಹೆಚ್ಚು ಫಲದಾಯಕ ಕಾರ್ಯಗಳಿಗೆ ಮಾನವ ಸಂಪನ್ಮೂಲವನ್ನು ನಿಯೋಜಿಸಲಾಗುತ್ತದೆ.

ಉದಾಹರಣೆಗಳು: ವಿಮಾನಗಳಲ್ಲಿನ ಆಟೋಪೈಲಟ್, ಸ್ವಯಂಚಾಲಿತ ಕಾರುಗಳು, ಸಂಚಾರ ನಿರ್ವಹಣೆ, ಟ್ಯಾಕ್ಸಿ ಸೇವೆಗಳು, ಇಮೇಲ್‌ಗಳು, ಸಾಮಾಜಿಕ ಮಾಧ್ಯಮಗಳು, ಆನ್‌ಲೈನ್ ಶಾಪಿಂಗ್ ಇತ್ಯಾದಿ.

ಹಾಗೆಯೇ, ಕೃತಕ ಬುದ್ಧಿಮತ್ತೆ, ಮೆಷಿನ್ ಲರ್ನಿಂಗ್ ಇತ್ಯಾದಿ ಸಿದ್ಧಾಂತಗಳನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಂಡು, ಸಾಮಾನ್ಯವಾಗಿ ಮನುಷ್ಯರು ಮಾಡುವ ಅನೇಕ ಕೆಲಸಗಳನ್ನು ಯಂತ್ರಗಳಿಂದ ಮಾಡಿಸುವುದೇ ರೊಬೊಟಿಕ್ಸ್. ಈ ರೋಬೊಗಳನ್ನು ಪ್ರತಿನಿತ್ಯದ ಸಾಮಾನ್ಯ ಕೆಲಸಗಳಿಗೂ ಮತ್ತು ಅತಿ ಹೆಚ್ಚಿನ ನಿಖರತೆಯ ಅಗತ್ಯವಿರುವ ಕೆಲಸಗಳಿಗೂ ಉಪಯೋಗಿಸಬಹುದು.

ಮನುಷ್ಯರಿಗೆ ಹೋಲಿಸಿದರೆ, ಈ ರೋಬೊಗಳ ಕಾರ್ಯಕ್ಷಮತೆ ಅತಿ ಹೆಚ್ಚಾಗಿರುವುದರಿಂದ, ಒಂದು ಅಂದಾಜಿನ ಪ್ರಕಾರ, ಇನ್ನು ಐದು ವರ್ಷಗಳಲ್ಲಿ ಶೇ 30 ಮಾನವನ ಉದ್ಯೋಗಗಳು ರೋಬೊಗಳ ಪಾಲಾಗಲಿದೆ!

ಕಾಲ್ ಸೆಂಟರ್‌ಗಳು, ಗ್ರಾಹಕ ಸಂಬಂಧ ನಿರ್ವಹಣೆ, ಆಟೊಮೊಬೈಲ್, ವೆಲ್ಡಿಂಗ್, ಪೇಂಟಿಂಗ್, ಜವಳಿ ಮತ್ತು ವಸ್ತ್ರೋದ್ಯಮ, ಪ್ಯಾಕಿಂಗ್, ಸರಕು ಸಾಗಣೆ ಮತ್ತು ನಿರ್ವಹಣೆ, ಸುರಕ್ಷತೆ ಮತ್ತು ಭದ್ರತೆ, ಶಿಕ್ಷಣ, ಅಡುಗೆ ಕೆಲಸಗಳು, ರೆಸ್ಟೋರೆಂಟ್ ಸೇವೆಗಳು ಇತ್ಯಾದಿ.

ಅನೇಕ ಕ್ಷೇತ್ರಗಳಲ್ಲಿ, ಹೆಚ್ಚುತ್ತಿರುವ ಯಾಂತ್ರೀಕರಣದ ಪರಿಣಾಮವಾಗಿ, ನಿನ್ನೆಯವರೆಗೂ ಇದ್ದ ಕೆಲಸಗಳು ಇಂದು ಮಾಯವಾಗುತ್ತಿವೆ; ಮುಂದಿನ ದಿನಗಳ ಕೆಲಸಗಳಿಗೆ ಅಗತ್ಯವಿರುವ ಕೌಶಲಭರಿತ ಮಾನವಸಂಪನ್ಮೂಲ ಇಂದು ತಯಾರಾಗುತ್ತಿಲ್ಲ. ಹಾಗಾಗಿ, ಕೆಲಸಕ್ಕಾಗಿ ಹೆಣಗಾಡುತ್ತಿರುವ ಉದ್ಯೋಗಾಂಕ್ಷಿಗಳು ಒಂದೆಡೆಯಾದರೆ, ಕೌಶಲಭರಿತ ಅಭ್ಯರ್ಥಿಗಳೇ ಸಿಗುತ್ತಿಲ್ಲವೆಂಬ ಆತಂಕ ಉದ್ಯೋಗದಾತರದ್ದು. ಪರಿಣಾಮವಾಗಿ ನಿರುದ್ಯೋಗದ ಸಮಸ್ಯೆ ಉಲ್ಬಣಗೊಂಡು ಗ್ರಾಹಕರ ಕೊಳ್ಳುವ ಸಾಮರ್ಥ್ಯ ಕ್ರಮೇಣ ಕಡಿಮೆಯಾಗುತ್ತಿದೆ.

ವಿಶ್ವ ಆರ್ಥಿಕ ವೇದಿಕೆಯ ಕಳೆದ ವರ್ಷದ ವರದಿಯಂತೆ 2025ರ ವೇಳೆಗೆ ಜಗತ್ತಿನ ಮನುಷ್ಯರು ಮಾಡುವ 85 ದಶಲಕ್ಷದಷ್ಟು ಕೆಲಸಗಳು ಯಂತ್ರಗಳ ಪಾಲಾಗಲಿವೆ; ಆದರೆ, ಇದೇ ಸಮಯದಲ್ಲಿ ಆರ್ಥಿಕ ಅಭಿವೃದ್ಧಿಯಿಂದ 97 ದಶಲಕ್ಷ ನೂತನ ಕೆಲಸಗಳೂ ಸೃಷ್ಟಿಯಾಗಲಿವೆ.

ಎರಡು ದಶಕಗಳ ಹಿಂದೆ, ಕಂಪ್ಯೂಟರ್ ಬಳಕೆ ಸಾರ್ವತ್ರಿಕವಾದಾಗ ಉದ್ಯೋಗ ನಷ್ಟಗಳಾದರೂ ಮಾನವನ ಕಾರ್ಯಕ್ಷಮತೆ ಹೆಚ್ಚಾಗಲು ಕಾರಣವೂ ಆಯಿತು. ಇಂದು, ಕಂಪ್ಯೂಟರ್, ಸ್ಮಾರ್ಟ್ ಫೋನ್‌ಗಳಿಲ್ಲದೆ ವೃತ್ತಿಜೀವನ ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಈ ಸಾಧನಗಳು ನಮ್ಮ ಜೀವನವನ್ನು ಆವರಿಸಿಕೊಂಡಿವೆ. ಹಾಗಾಗಿ, ಹೊಸ ಆವಿಷ್ಕಾರಗಳು, ಯಂತ್ರೋಪಕರಣಗಳು, ಸಾಧನಗಳು ಅಭಿವೃದ್ಧಿಯ ಪಥದಲ್ಲಾಗುವ ಬೆಳವಣಿಗೆಗಳು. ಪರಿಣಾಮವಾಗಿ, ಉದ್ಯಮಗಳಲ್ಲಿ ನೂತನ ತಂತ್ರಜ್ಞಾನದ ಅಳವಡಿಕೆ ಆಗುತ್ತಿದ್ದಂತೆ, ಭವಿಷ್ಯದ ಉದ್ಯೋಗಗಳ ಸ್ವರೂಪ, ಗುಣಲಕ್ಷಣಗಳು ಬದಲಾಗುವುದೂ ಒಂದು ಸಹಜ ಪ್ರಕ್ರಿಯೆ.

ವಿಮರ್ಶಾತ್ಮಕ ಚಿಂತನೆ, ವಿಶ್ಲೇಷಣಾತ್ಮಕ ಕೌಶಲ, ಸಕ್ರಿಯ ಕಲಿಕೆ, ಸ್ವಯಂ-ನಿರ್ವಹಣೆ ಇತ್ಯಾದಿ ಪ್ರಾಥಮಿಕ ಕೌಶಲಗಳು ಭವಿಷ್ಯದ ಉದ್ಯೋಗಗಳಿಗೆ ಅಗತ್ಯವಾದ ಅರ್ಹತೆಯನ್ನು ಹೆಚ್ಚಿಸುವ ನಿರೀಕ್ಷೆಯಿದೆ. ಇದರರ್ಥ, ಸಾಂಪ್ರದಾಯಿಕ ಕ್ಷೇತ್ರಗಳ ಅವಕಾಶಗಳು ಇರುವುದಿಲ್ಲ ಎಂದಲ್ಲ; ಆದರೆ, ನೂತನ ಅವಕಾಶಗಳತ್ತ ಗಮನವನ್ನು ಹರಿಸಿ, ನಿಮ್ಮ ಸಾಮರ್ಥ್ಯ, ಅಭಿರುಚಿಗೆ ತಕ್ಕಂತೆ ವೃತ್ತಿ ಮತ್ತು ಅದರಂತೆ ನಿಮ್ಮ ಶಿಕ್ಷಣದ ಆಯ್ಕೆ ಮತ್ತು ಕೌಶಲಾಭಿವೃದ್ಧಿಯಿರಲಿ ಎಂದು.

ಎರಡನೇ ಪ್ರಶ್ನೆ; ಕಂಪ್ಯೂಟರ್ ವಿಜ್ಞಾನ ಹಾಗೂ ಅಥವಾ ಮಾಹಿತಿ ವಿಜ್ಞಾನದ ಕೋರ್ಸ್‌ಗಳು ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದೇ ಅಥವಾ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದೇ? ನಮ್ಮ ದೇಶಕ್ಕೆ ಅನುಗುಣವಾದ ಎಂಜಿನಿಯರಿಂಗ್‌ನ ಇತರ ಕೋರ್ಸ್‌ಗಳ ಕುರಿತು ಮಾಹಿತಿ ನೀಡಿ.

ಎಲ್ಲಾ ಎಂಜಿನಿಯರಿಂಗ್ ಕೋರ್ಸ್‌ಗಳು ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಪಟ್ಟಿವೆ ಅಥವಾ ಔದ್ಯೋಗಿಕ ವಿಜ್ಞಾನದ ಕೋರ್ಸ್‌ಗಳೆಂದು ಹೇಳಬಹುದು.

ಈಗ ಸುಮಾರು 50ಕ್ಕೂ ಹೆಚ್ಚು ಎಂಜಿನಿಯರಿಂಗ್ ಕೋರ್ಸ್‌ಗಳಿವೆ. ಈ ಎಲ್ಲಾ ಕೋರ್ಸ್‌ಗಳಲ್ಲಿ ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಕೆಮಿಕಲ್, ಆರ್ಕಿಟೆಕ್ಚರ್, ಬಯೋಟೆಕ್, ಆಟೊಮೊಬೈಲ್, ಇನ್‌ಸ್ಟ್ರುಮೆಂಟೇಷನ್, ಮೈನಿಂಗ್ ಇತ್ಯಾದಿ ಕೋರ್ಸ್‌ಗಳ ಉಪಯುಕ್ತತೆ ಹೆಚ್ಚಾಗಿ ನಮ್ಮ ದೇಶದ ಉದ್ಯಮಗಳಿಗೆ ಸಂಬಂಧಪಟ್ಟದ್ದಾಗಿದೆ.

ಕಂಪ್ಯೂಟರ್ ವಿಜ್ಞಾನ ಸೇರಿದಂತೆ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕಿರುವ ಬೇಡಿಕೆ ಕೇವಲ ನಮ್ಮ ದೇಶಕ್ಕೆ ಸೀಮಿತವಾಗದೆ ಹೆಚ್ಚಿನ ವ್ಯವಹಾರ, ಆದಾಯ ಬೇರೆ ರಾಷ್ಟ್ರಗಳ ಉದ್ಯಮಗಳಿಂದಲೇ ಎನ್ನುವುದನ್ನು ನಾವು ಗಮನಿಸಬೇಕು.

ಆದ್ದರಿಂದಲೇ, ಬೇರೆ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಹೋಲಿಸಿದರೆ, ಈ ಕ್ಷೇತ್ರ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ. ಹಾಗಾಗಿ, ಆಯಾ ಉದ್ಯಮಗಳ ಅಭಿವೃದ್ಧಿಯಂತೆ ಮಾನವ ಸಂಪನ್ಮೂಲದ ಬೇಡಿಕೆ ಮತ್ತು ಬೇಡಿಕೆಯಂತೆ ಪೂರೈಕೆಯಿರುವುದು ಸಹಜ.

(ಲೇಖಕರು ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ; ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

‘ಸಾಧನೆಗೆ ಉತ್ತೇಜನ ವಿದ್ಯಾಧನ’

ವಿದ್ಯಾರ್ಥಿ ವೇತನ ಕೈಪಿಡಿ

ಬಸವರಾಜ ದಳವಾಯಿ

ಕ್ರೀಡಾಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ವಿದ್ಯಾರ್ಥಿವೇತನ, ಪ್ರೋತ್ಸಾಹಧನ ಯೋಜನೆಗಳು ಇನ್ನಷ್ಟು ಸಾಧನೆ ಮಾಡಲು ಅವರನ್ನು ಉತ್ತೇಜಿಸುತ್ತಿವೆ. ಆರ್ಥಿಕ ಸಂಕಷ್ಟ ಎದುರಿಸುವ ಗ್ರಾಮೀಣ ಭಾಗದ ಬಡ ಕುಟುಂಬಗಳ ಹಲವು ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ ಮರುಪಾವತಿ, ನಗದು ಬಹುಮಾನದ ಕೊಡುಗೆಗಳು ವರದಾನವಾಗಿವೆ. ಈ ಅಭಿಪ್ರಾಯಗಳು ಕ್ರೀಡಾಪಟುಗಳ ಮಾತಿನಲ್ಲಿ ವ್ಯಕ್ತವಾಗಿವೆ.

ಬಾಗಲಕೋಟೆ ಜಿಲ್ಲೆಯ ತುಳಸಿಗೇರಿಯ ಸೈಕ್ಲಿಂಗ್ ಪಟು ರೇಣುಕಾ ದಂಡಿನ ಅವರಿಗೆ 2014ರಲ್ಲಿ ರಾಜ್ಯ ಸರ್ಕಾರ ₹ 1 ಲಕ್ಷ ಪ್ರೋತ್ಸಾಹ ನೀಡಿತ್ತು. ಸೈಕ್ಲಿಂಗ್‌ಗಾಗಿ ಸೈಕಲ್ ಕೂಡ ನೀಡಲಾಗಿತ್ತು. ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದಿರುವ ಅವರು, ಪದವಿ ಮುಗಿಸಿದ್ದು, ಸೈಕ್ಲಿಂಗ್ ಕೋಚ್ ಆಗುವ ಹಂಬಲದಲ್ಲಿದ್ದಾರೆ.

ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಪದವಿ ಮಾಡುವ ಸಂದರ್ಭದಲ್ಲಿ ಶಿಕ್ಷಣ ಶುಲ್ಕ ಮರುಪಾವತಿಯ ಸೌಲಭ್ಯ ಪಡೆದವರು ಬೆಂಗಳೂರಿನ ಪ್ಯಾರಾ ಈಜುಪಟು ನಿರಂಜನ್ ಮುಕುಂದನ್. ರಾಜ್ಯ ಸರ್ಕಾರ ಉದ್ಯೋಗ ನೀಡುವುದರ ಮೂಲಕವೂ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲಿ ಎನ್ನುತ್ತಾರೆ ಅವರು.

ನಿರಂಜನ್ ಅವರು ಇತ್ತೀಚೆಗೆ ಕ್ರೊವೇಷ್ಯಾದಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಆರು ಚಿನ್ನದ ಪದಕಗಳನ್ನು ಗೆದ್ದು ಈ ವರ್ಷ ನಡೆಯಲಿರುವ ವಿಶ್ವ ಪ್ಯಾರಾ ಈಜು ಸ್ಪರ್ಧೆಗೆ ಅರ್ಹತೆ ಗಳಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಅಮರಾವತಿಯ ಸೈಕ್ಲಿಂಗ್ ಪಟು ಸಂಪತ್ ಪಾಸಮೇಲ್ ಅವರಿಗೆ ಖೇಲೊ ಇಂಡಿಯಾ ಯೋಜನೆಯಡಿ ತಿಂಗಳಿಗೆ ₹ 10 ಸಾವಿರ ಪ್ರೋತ್ಸಾಹಧನ ಸಿಗುತ್ತಿತ್ತು. ಆದರೆ ಕಳೆದ ಒಂದು ವರ್ಷದಿಂದ ಕೈಸೇರಿಲ್ಲ. ತಾಯಿ ಟೇಲರಿಂಗ್ ವೃತ್ತಿ ಮಾಡುತ್ತಾರೆ. ಪ್ರೋತ್ಸಾಹಧನವು ತನ್ನ ಓದಿಗೆ, ಕ್ರೀಡಾ ಸಲಕರಣೆಗಳ ಖರೀದಿಗೆ ವಿನಿಯೋಗವಾಗುತ್ತಿತ್ತು ಎನ್ನುತ್ತಾರೆ ಅವರು.

ಸದ್ಯ ಡಿಪ್ಲೊಮಾ ಓದುತ್ತಿರುವ ಸಂಪತ್, 2018ರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. 2021ರಲ್ಲಿ ಹೈದರಾಬಾದ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಟೂರ್ನಿಯಲ್ಲಿ ಚಿನ್ನ ಅವರ ಮುಡಿಗೇರಿತ್ತು.

ನಡಿಗೆ ಸ್ಪರ್ಧಿ, ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ತಟ್ಟಗೇರಿಯ ವಿಜಯಲಕ್ಷ್ಮಿ ಅವರಿಗೆ 2019ರ ಡಿಸೆಂಬರ್‌ನಲ್ಲಿ ರಾಜ್ಯ ಸರ್ಕಾರ ಪ್ರೋತ್ಸಾಹಧನವಾಗಿ ₹ 1 ಲಕ್ಷ ನೀಡಿದೆ. ಅದರಲ್ಲಿ ಅರ್ಧದಷ್ಟು ಹಣದಲ್ಲಿ ಕ್ರೀಡಾ ಪರಿಕರಗಳ ಖರೀದಿಸಿದ ಅವರು, ವ್ಯವಸಾಯದ ಖರ್ಚಿಗೆಂದು ತಂದೆಯ ಕೈಗೆ ಒಪ್ಪಿಸಿದರು. ಶುಲ್ಕ ಮರುಪಾವತಿ ಸೌಲಭ್ಯ; ಕಾಲೇಜಿನಿಂದಲೂ ನೆರವು ಸಿಕ್ಕಿದೆ’ ಎನ್ನುತ್ತಾರೆ ಅವರು.

ಬಿಎಸ್‌ಸಿ ಓದುತ್ತಿರುವ ವಿಜಯಲಕ್ಷ್ಮಿ, 2019ರಲ್ಲಿ ರಾಜ್ಯಮಟ್ಟದ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಮತ್ತು ಕಂಚು ಗೆದ್ದಿದ್ದರು.

ಏಕಲವ್ಯ ಪ್ರಶಸ್ತಿ ಪುರಸ್ಕೃತ ಸೈಕ್ಲಿಂಗ್ ಪಟು ಬಾಗಲಕೋಟೆ ಜಿಲ್ಲೆಯ ತುಳಸಿಗೇರಿಯ ವೆಂಕಪ್ಪ ಕೆಂಗಲಗುತ್ತಿ. ಅವರಿಗೆ ರಾಜ್ಯ ಸರ್ಕಾರ 2019–20ನೇ ಸಾಲಿನಲ್ಲಿ ₹ 70 ಸಾವಿರ ನಗದು ಪುರಸ್ಕಾರ ನೀಡಿತ್ತು. ಕ್ರೀಡಾ ಸಲಕರಣೆಗಳ ಖರೀದಿಗೆ ಇದನ್ನು ಬಳಸಿಕೊಂಡೆ ಎನ್ನುವ ಅವರು, ಸದ್ಯ ರೈಲ್ವೆ ಇಲಾಖೆಯ ಉದ್ಯೋಗಿಯಾಗಿದ್ದಾರೆ.

> “ಕ್ರೀಡಾಪಟುಗಳು ಪ್ರೋತ್ಸಾಹಧನವನ್ನು ತಮ್ಮ ಪ್ರಗತಿಗೆ ಬಳಸಿಕೊಳ್ಳಬೇಕು. ಹೆಚ್ಚಿನವರಿಗೆ ಕೇಂದ್ರ ಸರ್ಕಾರದ ಉದ್ಯೋಗ ಸಿಗುತ್ತದೆ. ರಾಜ್ಯ ಸರ್ಕಾರವೇ ಅವರಿಗೆ ಉದ್ಯೋಗ ನೀಡಿದರೆ ಇನ್ನೂ ಉತ್ತಮ.”
>
> ಅನಿತಾ ನಿಂಬರಗಿ, ಸೈಕ್ಲಿಂಗ್ ಕೋಚ್

(ಮುಂದಿನ ವಾರ: ಖಾಸಗಿ ಸಂಸ್ಥೆಗಳಿಂದ ಕ್ರೀಡಾ ವಿದ್ಯಾರ್ಥಿವೇತನ)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ

Prose-2

There is a girl by the Tracks

English

1. Give a brief account of Roma and Baleshwar. What happened to Roma?

Roma Talreja was a 21- year old B. Com graduate from Pune. She was working as a call centre executive for two years. She loved her job. She is talking and connecting happily to customers and making new friends. Baleshwar Mishra was a 20- year old an unemployed high school dropout. He was a tall and thin youngster from Mirzapur, UP. He had come to Mumbai recently. In Mumbai he was living with his two elder brothers and was looking for a job. Roma jammed between other women and tried to settle in a ladies compartment.

But she was suddenly pushed out and fell on the railway tracks became unconscious. Though Baleshwar a stranger to that girl, jumped off the opposite coming train with burst of pain in his ankle to help Roma.

2. According to Dalai Lama, “Love and Compassion are the true religions.” Justify. OR
What values can we learn from the lesson ‘There is a girl by the tracks’?

Love and Compassion are the divine qualities, and they are the true religions. A human being should be merciful to help the people who are in trouble. Helping others is a human quality with time sense and presence of mind. Anybody can help the worried people beyond legal obligations. We should have the empathy as Baleshwar that she needed help that day was Roma; tomorrow it could be some other like us or he. It is true that when we help others we certainly help ourselves one day.



II. Read the following extracts and answer the questions that follow.

1. “Oh, I couldn’t thank him.”

a) Who does ‘him’ refer?
‘Him ‘refers to the truck driver.
b) Why was Baleshwar unable to thank him?
The truck driver had slipped away from the hospital.
c) What does it reveal about truck the driver?
He does not expect anything but always ready to help.

2. “I can’t imagine what would have happened if Baleshwar hadn’t been there,”

a) Who is the ‘I’ refer? ‘I’ refers to Roma.
b) When did the speaker say this? When she was feeling better.
c) What does ‘there’ refer here?
‘There’ refers to the place where Roma had fallen on the tracks.

3. “They fear getting trapped in the courts or with the police.”

a) Who said these words& when?
Baleshwar Mishra said when the people did not come forward to help.
b) Whom do ‘they’ refer?
‘They’ refers to the people who were looking the scene that Roma had hurt.
c) Why were they feared about the courts and police?
They would have been troubled by the legal obligations.

Annappa Shetty MA,M.Ed, SRP in English,Hassan


ವಿದ್ಯುದಾವೇಶಗಳು ಮತ್ತು ಕ್ಷೇತ್ರಗಳು

ಹಿಂದಿನ ಸಂಚಿಕೆಯಿಂದ...


ದ್ವಿತೀಯ ಪಿಯುಸಿ

ಭೌತಶಾಸ್ತ್ರ

ಬಲವು ಒಂದು ಸದಿಶ ಕೂಲಂಬ್‌ನ ನಿಯಮವನ್ನು ಸದಿಶ ಸಂಕೇತದಲ್ಲಿ ಬರೆಯುವುದು ಉತ್ತಮ. q_1 ಮತ್ತು q_2 ಮತ್ತು ಸ್ಥಾನ ಸದಿಶಗಳ ಆವೇಶಗಳು ಕ್ರಮವಾಗಿ r_1 ಮತ್ತು r_2 ಆಗಿರಲಿ. (ಕೆಳಗಿನ (a) ನೋಡಿ)



(a)



(b)

ನಾವು q_1 ಮೇಲೆ q_2 ದಿಂದಾಗ ಬಲವನ್ನು F_{12} ಎಂದು ಮತ್ತು q_2 ಮೇಲೆ q_1 ದಿಂದಾದ ಬಲ F_{21} ಎಂದು ಸೂಚಿಸಿದೆ. ಅನುಕೂಲಕ್ಕಾಗಿ q_1 ಮತ್ತು q_2 ಎರಡು ಬಿಂದು ಆವೇಶಗಳನ್ನು 1 ಮತ್ತು 2 ಸಂಖ್ಯೆಯನ್ನು ಗೊತ್ತುಮಾಡಲಾಗಿದೆ. ಮತ್ತು 1 ರಿಂದ 2ಕ್ಕೆ ಮುಂದುವರೆದ ಸದಿಶವನ್ನು r_{21} ಎಂದು ಸೂಚಿಸಲಾಗಿದೆ.

$$\mathbf{r}_{21} = \mathbf{r}_2 - \mathbf{r}_1$$

ಇದೇ ರೀತಿ 2 ರಿಂದ 1ಕ್ಕೆ ಮುಂದುವರೆದ ಸದಿಶವನ್ನು r_{12} ಎಂದು ಸೂಚಿಸಲಾಗುತ್ತದೆ.

$$\mathbf{r}_{12} = \mathbf{r}_1 - \mathbf{r}_2 = -\mathbf{r}_{21}$$

r_{21} ಮತ್ತು r_{12} ಸದಿಶಗಳ ಪ್ರಮಾಣವನ್ನು ಕ್ರಮವಾಗಿ r_{21} ಮತ್ತು r_{12} ಎಂದು ಸೂಚಿಸುವರು. ($r_{21} = r_{12}$) ಸದಿಶದ ದಿಕ್ಕನ್ನು ಒಂದು ಘಟಕ ಸದಿಶದಿಂದ ಸದಿಶದ ನೇರದಲ್ಲಿ ವಿಶ್ಲೇಷಿಸಲಾಗುವುದು, 1 ರಿಂದ 2ಕ್ಕೆ ದಿಕ್ಕನ್ನು (ಅಥವಾ 2 ರಿಂದ 1ಕ್ಕೆ) ಸೂಚಿಸಲು, ನಾವು ಘಟಕ ಸದಿಶಗಳನ್ನು ವ್ಯಾಖ್ಯಾನಿಸಬಹುದು.

$$\hat{\mathbf{r}}_{21} = \frac{\mathbf{r}_{21}}{r_{21}} \quad \hat{\mathbf{r}}_{12} = \frac{\mathbf{r}_{12}}{r_{12}}, \qquad \hat{\mathbf{r}}_{21} = \hat{\mathbf{r}}_{12}$$

r_1 ಮತ್ತು r_2 ಗಳಲ್ಲಿರುವ ಎರಡು ಬಿಂದು ಆವೇಶಗಳ ನಡುವೆ ಇರುವ ಕೂಲಂಬ್‌ನ ಬಲದ ನಿಯಮವನ್ನು ಈ ರೀತಿ ವ್ಯಕ್ತ ಪಡಿಸಲಾಗುವುದು.

$$F_{21} = \frac{1}{4\pi\varepsilon_0} \frac{q_1 q_2}{r_{21}^2} \hat{\mathbf{r}}_{21} \qquad \text{.....................(3)}$$

ಸಮೀಕರಣ (3)ಕ್ಕೆ ಸಂಬಂಧಿಸಿದ ಕೆಲವು ಟಿಪ್ಪಣಿಗಳು:

- ಸಮೀಕರಣ (.3) ಇದು q_1 ಮತ್ತು q_2 ಗಳ ಯಾವುದೇ ಚಿಹ್ನೆ ಧನಾತ್ಮಕ ಅಥವಾ ಋಣಾತ್ಮಕವಾಗಿದ್ದರೂ ಮಾನ್ಯ ಮಾಡುತ್ತದೆ. ಒಂದು ವೇಳೆ q_1 ಮತ್ತು q_2 ಗಳು ಒಂದೇ ಬಗೆಯ ಚಿಹ್ನೆಯಾದರೆ (ಎರಡೂ ಧನಾತ್ಮಕ ಅಥವಾ ಎರಡೂ ಋಣಾತ್ಮಕವಾದರೆ) F_{21} ಇದು $\hat{r}_{21}$ ನೇರದಲ್ಲಿರುತ್ತದೆ. ಅದು ವಿಕರ್ಷಣೆಯನ್ನು ಸೂಚಿಸುತ್ತದೆ. ಇದು ಸಜಾತಿಯ ಆವೇಶಗಳಾಗಿರಲೇಬೇಕು. ಒಂದು ವೇಳೆ q_1 ಮತ್ತು q_2 ಗಳು ವಿರುದ್ಧ ಚಿಹ್ನೆಗಳಾದರೆ F_{21}

  ಇದು $\hat{\mathbf{r}}_{21} (-\hat{\mathbf{r}}_{12})$.ರ ನೇರದಲ್ಲಿರುತ್ತದೆ.

  ಇದು ಆಕರ್ಷಣೆಯನ್ನು ಸೂಚಿಸುತ್ತದೆ.

  ನಿರೀಕ್ಷೆಯಂತೆ ವಿಜಾತಿಯ ಆವೇಶಗಳು. ಹಾಗಾಗಿ ನಮಗೆ ಸಜಾತಿಯ ಮತ್ತು ವಿಜಾತಿಯ ಆವೇಶಗಳಿಗೆ ಬೇರೆ ಬೇರೆ ಸಮೀಕರಣಗಳನ್ನು ಬರೆಯಲು ಸಾಧ್ಯವಿಲ್ಲ. ಸಮೀಕರಣ (3) ಎರಡೂ ಪ್ರಕರಣಗಳನ್ನು ಸರಿಯಾಗಿ ಸೂಚಿಸುತ್ತದೆ [ಚಿತ್ರ (b)].

- ಆವೇಶ q_2 ದಿಂದಾಗಿ q_1 ಮೇಲೆ ಇರುವ ಬಲ F12 ವನ್ನು ಸಮೀಕರಣ (1.3) ರಿಂದ ಪಡೆಯಲಾಗುತ್ತದೆ. 1 ಮತ್ತು 2ನ್ನು ಸರಳವಾಗಿ ಅದಲು ಬದಲು ಮಾಡುವುದರಿಂದ ಅಂದರೆ.

$$\mathbf{F}_{12} = \frac{1}{4\pi\varepsilon_0} \frac{q_1 q_2}{r_{12}^2} \hat{\mathbf{r}}_{12} = -\mathbf{F}_{21}$$

ಆದ್ದರಿಂದ ಕೂಲಂಬ್‌ನ ನಿಯಮವು ನ್ಯೂಟನ್ ನಿಯಮವನ್ನು ಸಮ್ಮತಿಸುತ್ತದೆ.

- ಕೂಲಂಬ್ ನಿಯಮ [ಸಮೀಕರಣ(3)] ವು ನಿರ್ವಾತದಲ್ಲಿ ಎರಡು ಆವೇಶ q_1 ಮತ್ತು q_2 ಗಳ ನಡುವಿನ ಬಲವನ್ನು ನೀಡುತ್ತದೆ. ಒಂದು ವೇಳೆ ಆವೇಶಗಳನ್ನು ಒಂದು ವಸ್ತುವಿನಲ್ಲಿ ಅಥವಾ ವಸ್ತುವಿನ ಮಧ್ಯದಲ್ಲಿರುವ ಜಾಗದಲ್ಲಿ ಇಟ್ಟರೆ, ಈ ಸಂದರ್ಭದಲ್ಲಿ ವಸ್ತುವಿನಲ್ಲಿರುವ ಮೂಲಭೂತ ಆವೇಶದಿಂದಾಗಿ ಜಟಿಲವಾಗಿರುತ್ತದೆ.
- ಎರಡು ಬಿಂದು ಆವೇಶಗಳ ನಡುವಿನ ಸ್ಥಾಯಿ ವಿದ್ಯುತ್ ಬಲಕ್ಕೆ ಕೂಲಂಬ್ ನಿಯಮ ಮತ್ತು ಎರಡು ಸ್ಥಿರ ಬಿಂದುಗಳ ನಡುವಿನ ಗುರುತ್ವಾಕರ್ಷಣಾ ಬಲ ನ್ಯೂಟನ್‌ನ ನಿಯಮಗಳೆರಡೂ ಆವೇಶಗಳ/ರಾಶಿಗಳ ನಡುವಿನ ಅಂತರವನ್ನು ಅವಲಂಬಿಸಿದ ವಿಲೋಮ ವರ್ಗವನ್ನು ಹೊಂದಿದೆ. (a) ಬಲಗಳ ಸಾಮರ್ಥ್ಯಗಳನ್ನು ಅವುಗಳ ಪ್ರಮಾಣಗಳ ಅನುಪಾತವನ್ನು ನಿರ್ಧರಿಸಿ ಹೋಲಿಸಿರಿ. (i) ಒಂದು ಇಲೆಕ್ಟ್ರಾನ್ ಮತ್ತು ಒಂದು ಪ್ರೋಟಾನ್‌ಗಳಿಗೆ (ii) ಎರಡು ಪ್ರೋಟಾನ್‌ಗಳಿಗೆ. (b) ಇಲೆಕ್ಟ್ರಾನ್ ಮತ್ತು ಪ್ರೋಟಾನ್‌ಗಳು 1Å ($= 10^{-10}$m) ಅಂತರದಲ್ಲಿರುವಾಗ ಅವುಗಳ ಪರಸ್ಪರ ಆಕರ್ಷಣೆಯ ವಿದ್ಯುತ್ ಬಲದಿಂದಾಗಿ ವೇಗೋತ್ಕರ್ಷವನ್ನು ಅಂದಾಜು ಮಾಡಿರಿ.
($m_p = 1.67 \times 10^{-27}$ kg, $m_e = 9.11 \times 10^{-31}$ kg)

ಪರಿಹಾರ:

(a) (i) r ದೂರದ ಅಂತರದಲ್ಲಿರುವ ಒಂದು ಇಲೆಕ್ಟ್ರಾನ್ ಮತ್ತು ಒಂದು ಪ್ರೋಟಾನ್‌ಗಳ ನಡುವಿನ ವಿದ್ಯುತ್ ಬಲ:

$$F_e = -\frac{1}{4\pi\varepsilon_0} \frac{e^2}{r^2}$$

ಅಲ್ಲಿ ಋಣಾತ್ಮಕ ಚಿಹ್ನೆಯ ಆಕರ್ಷಣಾ ಬಲವನ್ನು ಸೂಚಿಸುತ್ತದೆ. ಅನುರೂಪವಾದ ಗುರುತ್ವಾಕರ್ಷಣಾ ಬಲವು (ಯಾವಾಗಲೂ ಆಕರ್ಷಣೆ)

(ಮುಂದುವರಿಯುವುದು...)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ ‘ಎಲೆಕ್ಟ್ರಿಕ್ ಚಾರ್ಜ್‌ಸ್ ಅಂಡ್ ಫೀಲ್ಡ್ಸ್’ ಅಧ್ಯಾಯದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/35kDoG1

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಅನ್ಯಾಯ ಹಾಗೂ ತಪ್ಪಿನ ಜೊತೆ ರಾಜಿ ಮಾಡಿಕೊಳ್ಳುವುದು ಘೋರ ಅಪರಾಧ ಎಂಬುದನ್ನು ಮರೆಯದಿರಿ.
-ಸುಭಾಷ್‌ಚಂದ್ರ ಬೋಸ್

ಕೋವಿಡ್ ಪರೀಕ್ಷೆ: ಉದಾಸೀನ ಬೇಡ ಆರ್ಥಿಕ ಚಟುವಟಿಕೆಗೆ ತಡೆ ಸಲ್ಲದು

ಕೋವಿಡ್ ನಿರ್ವಹಣೆಯ ವಿಚಾರವಾಗಿ ಕೆಲವು ದಿನಗಳಿಂದ ಪರಸ್ಪರ ವಿರೋಧಾಭಾಸ ಎಂಬಂತಹ ಸೂಚನೆಗಳು ಬರುತ್ತಿವೆ. ದೇಶದಲ್ಲಿ ಈಚೆಗೆ ಕೆಲವು ದಿನಗಳಿಂದ ದಿನವೊಂದಕ್ಕೆ ಮೂರು ಲಕ್ಷಕ್ಕಿಂತ ಹೆಚ್ಚಿನ ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ದೇಶದ ಕೆಲವು ಪ್ರದೇಶಗಳಲ್ಲಿ ಹೊಸ ಪ್ರಕರಣಗಳ ಪ್ರಮಾಣದಲ್ಲಿ ಹೆಚ್ಚಳ ಆಗುತ್ತಿಲ್ಲ ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಪರೀಕ್ಷೆಗೆ ಗುರಿಪಡಿಸಿದ ಜನರಲ್ಲಿ ಕೋವಿಡ್ ದೃಢಪಡುವಿಕೆ ಪ್ರಮಾಣದಲ್ಲಿ ತುಸು ಇಳಿಕೆ ಕಂಡುಬಂದಿದೆ. ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯು ಮುಂದಿನ 14 ದಿನಗಳಲ್ಲಿ ಉತ್ತುಂಗಕ್ಕೆ ತಲುಪಲಿದೆ ಎಂದು ಮಾತನ್ನು 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಮದ್ರಾಸ್)' ವರದಿಯೊಂದು ಹೇಳಿದೆ. ಹೆಚ್ಚಿನ ಪ್ರಕರಣಗಳು ವರದಿಯಾಗುತ್ತಿರುವ ಕೇರಳದಲ್ಲಿ, ಪರೀಕ್ಷೆಗೆ ಒಳಗಾದವರಲ್ಲಿ ಕೋವಿಡ್ ದೃಢಪಡುತ್ತಿರುವ ಪ್ರಮಾಣವು ಶೇ 40ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದೆ. ಕೇರಳದಲ್ಲಿ ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿರುವ ಪ್ರಮಾಣ ಕೂಡ ಹೆಚ್ಚು ಇದೆ. ಆದರೆ, ದೇಶದಲ್ಲಿ ಕೆಲವು ದಿನಗಳಲ್ಲಿ ವರದಿಯಾದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಕಡಿಮೆ ಆಗಿದ್ದು, ಪರೀಕ್ಷೆಗಳನ್ನು ಕಡಿಮೆಗೊಳಿಸಿದ್ದರಿಂದ ಆಗಿರಬಹುದು ಎಂದು ಭಾವಿಸಬಹುದು. ಪರೀಕ್ಷೆಗಳ ಸಂಖ್ಯೆ ದೇಶದಲ್ಲಿ ಈಗ ಕಡಿಮೆಯಾಗಿದೆ.



ಅಲ್ಲದೆ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು (ಐಸಿಎಂಆರ್) ಈಚೆಗೆ ಹೊರಡಿಸಿದ ಮಾರ್ಗಸೂಚಿಯೊಂದರಲ್ಲಿ ಇದ್ದ ನಿರ್ದೇಶನಗಳು ಕೂಡ ಪರೀಕ್ಷೆಯ ಸಂಖ್ಯೆ ಕಡಿಮೆ ಆಗಲಿಕ್ಕೆ ಕಾರಣವಾಗಿರಬಹುದು. ಕೋವಿಡ್ ರೋಗಿಗಳ ಸಂಪರ್ಕಕ್ಕೆ ಬಂದಿರುವ, ರೋಗ ಲಕ್ಷಣಗಳು ಇಲ್ಲದವರನ್ನು ಪರೀಕ್ಷೆಗೆ ಒಳಪಡಿಸುವ ಅಗತ್ಯ ಇಲ್ಲ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿತ್ತು. ಈ ಮಾರ್ಗಸೂಚಿ ಹೊರಬಿದ್ದ ನಂತರದಲ್ಲಿ ಹಲವು ಕಡೆಗಳಲ್ಲಿ ಪರೀಕ್ಷೆಗಳ ಸಂಖ್ಯೆಯಲ್ಲಿ ಇಳಿಕೆ ಆಗಿದೆ.

ಆದರೆ, ಕೇಂದ್ರ ಆರೋಗ್ಯ ಸಚಿವಾಲಯವು ಪರೀಕ್ಷೆಯಲ್ಲಿ ಉದಾಸೀನ ಧೋರಣೆ ತಳೆಯುವುದು ಬೇಡ ಎಂದು ಎಚ್ಚರಿಸಿದೆ. ಸಚಿವಾಲಯ ಹೇಳಿರುವುದು ಸ್ವಾಗತಾರ್ಹ. ಕೇಂದ್ರ ಆರೋಗ್ಯ ಇಲಾಖೆ ಕಾರ್ಯದರ್ಶಿಯು ಎಲ್ಲ ರಾಜ್ಯಗಳಿಗೂ ಈ ವಿಚಾರವಾಗಿ ಪತ್ರ ಬರೆದಿದ್ದಾರೆ. ಆದರೆ, ಈ ಪತ್ರವು ಐಸಿಎಂಆರ್ ಮಾರ್ಗಸೂಚಿಗಳನ್ನು ಕೂಡ ಅನುಮೋದಿಸಿರುವ ಕಾರಣ, ಪತ್ರದ ಬಗ್ಗೆ ಇನ್ನಷ್ಟು ಸ್ಪಷ್ಟತೆಯ ಅಗತ್ಯ ಇದೆ. ಸ್ಪಷ್ಟತೆ ಇಲ್ಲದ ರೀತಿಯಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಬಾರದು. ಮಾರ್ಗಸೂಚಿಗಳು ಹಲವು ರೀತಿಗಳಲ್ಲಿ ವ್ಯಾಖ್ಯಾನಿಸಬಹುದಾದ ರೀತಿಯಲ್ಲಿಯೂ ಇರಬಾರದು. ಸೋಂಕನ್ನು ಆರಂಭಿಕ ಹಂತದಲ್ಲಿ ಗುರುತಿಸುವುದೇ ಪರೀಕ್ಷೆಯ ಉದ್ದೇಶ. ಕೊರೊನಾ ವೈರಾಣುವಿನ ರೂಪಾಂತರಿ ತಳಿ ಓಮೈಕ್ರಾನ್ ಪರಿಣಾಮವನ್ನು ಅರ್ಥ ಮಾಡಿಕೊಳ್ಳುವ ಅತ್ಯಂತ ಪ್ರಮುಖ ಮಾರ್ಗವೆಂದರೆ, ಆಸ್ಪತ್ರೆಗಳಿಗೆ ದಾಖಲಾಗುವವರ ಪ್ರಮಾಣ ಮತ್ತು ಮರಣ ಪ್ರಮಾಣದ ಮೇಲೆ ಗಮನ ಇರಿಸುವುದು. ಇದರ ಜೊತೆಯಲ್ಲಿಯೇ, ಸಾಂಕ್ರಾಮಿಕದ ಹೆಜ್ಜೆ ಯಾವ ರೀತಿಯಲ್ಲಿ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ಪರೀಕ್ಷೆಗಳು ದೊಡ್ಡ ಮಟ್ಟದಲ್ಲಿ ನೆರವಿಗೆ ಬರುತ್ತವೆ. ಕೋವಿಡ್ ಕ್ಲಸ್ಟರ್‌ಗಳನ್ನು, ವ್ಯಾಪಕವಾಗಿ ಹರಡಿರುವ ಪ್ರದೇಶಗಳನ್ನು ಗುರುತಿಸಲು ಪರೀಕ್ಷೆಗಳು ನೆರವಾಗುತ್ತವೆ. ಪರೀಕ್ಷೆಗಳ ಮೂಲಕ ಇಂತಹ ಪ್ರದೇಶಗಳನ್ನು ಗುರುತಿಸಿದರೆ, ಸಾಂಕ್ರಾಮಿಕ ಇನ್ನಷ್ಟು ಹರಡುವುದನ್ನು ತಡೆಯಬಹುದು. ಇದು ಸಾವಿನ ಪ್ರಮಾಣವನ್ನು ತಗ್ಗಿಸುವಲ್ಲಿ ನೆರವಾಗುತ್ತದೆ. ಹಾಗಾಗಿ, ಪರೀಕ್ಷೆಯ ವಿಚಾರದಲ್ಲಿ ಉದಾಸೀನ ಬೇಡವೇ ಬೇಡ.

ಕೋವಿಡ್ ಸಾಂಕ್ರಾಮಿಕವನ್ನು ನಿಗ್ರಹದಲ್ಲಿ ಇರಿಸಿಕೊಂಡೇ ವಾಣಿಜ್ಯ ಚಟುವಟಿಕೆಗಳು ಹಾಗೂ ಮನುಷ್ಯನ ಇತರ ದೈನಂದಿನ ಚಟುವಟಿಕೆಗಳು ಸಾಗುವಂತೆ ಮಾಡಬೇಕು

ಕೋವಿಡ್ ನಿಭಾಯಿಸುವ ವಿಚಾರದಲ್ಲಿ ಮಹತ್ವದ ನಿರ್ಣಯವೊಂದನ್ನು ಕೈಗೊಂಡಿರುವ ರಾಜ್ಯ ಸರ್ಕಾರವು ವಾರಾಂತ್ಯದ ಕರ್ಫ್ಯೂವನ್ನು ತೆಗೆದುಹಾಕಿದೆ. ಇದು ಸ್ವಾಗತಾರ್ಹ ಕ್ರಮ. ಜನರ ಜೀವನವನ್ನು, ಜೀವನೋಪಾಯವನ್ನು ಕಾಪಾಡಬೇಕು ಎಂಬುದಕ್ಕೆ ಇದು ಪೂರಕವಾಗಿ ಇದೆ. ಕೋವಿಡ್ ಸಾಂಕ್ರಾಮಿಕವನ್ನು ನಿಗ್ರಹದಲ್ಲಿ ಇರಿಸಿಕೊಂಡೇ ವಾಣಿಜ್ಯ ಚಟುವಟಿಕೆಗಳು ಹಾಗೂ ಮನುಷ್ಯನ ಇತರ ದೈನಂದಿನ ಚಟುವಟಿಕೆಗಳು ಸಾಗುವಂತೆ ಮಾಡಬೇಕು. ಈ ದಿಸೆಯಲ್ಲಿ, ವಾರಾಂತ್ಯದ ಕರ್ಫ್ಯೂವನ್ನು ತೆಗೆದುಹಾಕುವ ಕ್ರಮ ವರ್ತಕ ಸಮುದಾಯಕ್ಕೆ ಸಮಾಧಾನ ತರುವಂಥದ್ದು. ಲಾಕ್‌ಡೌನ್ ಜಾರಿಗೆ ತರುವುದು, ಒಂದಿಷ್ಟು ಅಂಗಡಿಗಳನ್ನು ಮಾತ್ರ ಮುಚ್ಚಿಸುವುದು, ವಾರಾಂತ್ಯದ ಅವಧಿಯಲ್ಲಿ ಜನ ಮನೆಗಳಿಂದ ಹೊರಗೆ ಬರಬಾರದು ಎನ್ನುವುದು... ಇಂತಹ ಕ್ರಮಗಳಿಂದ ಕೋವಿಡ್ ನಿಗ್ರಹ ಸಾಧ್ಯವಿಲ್ಲ ಎನ್ನುವುದು ಸರಿಸುಮಾರು ಎರಡು ವರ್ಷಗಳ ಅವಧಿಯಲ್ಲಿ ಗೊತ್ತಾಗಿದೆ. ಹಾಗಾಗಿ, ಮುಂದಿನ ದಿನಗಳಲ್ಲಿ ಕಾಯಿಲೆ ನಿಗ್ರಹ ಕಾರ್ಯತಂತ್ರವು ಆರ್ಥಿಕ ಚಟುವಟಿಕೆಗಳಿಗೆ ತಡೆ ಒಡ್ಡುವಂಥದ್ದು ಆಗದಂತೆ ನೋಡಿಕೊಳ್ಳಬೇಕು. ಪರೀಕ್ಷೆಯನ್ನು ಹೆಚ್ಚಿಸಬೇಕು, ಕೋವಿಡ್ ಪತ್ತೆಯಾದವರಿಗೆ ಸೂಕ್ತ ಚಿಕಿತ್ಸೆ ಒದಗಿಸಬೇಕು. ಅದಕ್ಕೆ ಬೇಕಾದ ವೈದ್ಯಕೀಯ ಸೌಕರ್ಯ ಎಲ್ಲೆಡೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಇವು ಮಾತ್ರ ಸರ್ಕಾರಗಳಿಗೆ ಆದ್ಯತೆಯ ಕೆಲಸ ಆಗಬೇಕು.

ಮುಂದಿನ ದಿನಗಳಲ್ಲಿ ಸಾನಿಯಾ ಮಿರ್ಜಾ ಅವರ ಸ್ಥಾನ ತುಂಬುವವರು ಯಾರು?

ಪ್ರವಾಹದ ವಿರುದ್ಧ ಈಜಿದ ಛಲಗಾತಿ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಕಳೆದ ಎರಡು ದಶಕಗಳಲ್ಲಿ ವೃತ್ತಿಪರ ಟೆನಿಸ್ ಭೂಪಟದಲ್ಲಿ ಭಾರತದ ಸ್ತ್ರೀಶಕ್ತಿಗೆ ಸ್ಥಾನ ಗಳಿಸಿಕೊಟ್ಟವರು ಸಾನಿಯಾ ಮಿರ್ಜಾ. ಸದಾ ಪ್ರವಾಹದ ವಿರುದ್ಧ ಈಜುತ್ತಲೇ ಸಾಧನೆಯ ಮುಗುಳ್ನಗೆ ಸೂಸುವ ಛಲಗಾತಿ ಈ ಆಟಗಾರ್ತಿ.

ಆರು ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳು, ಸುಮಾರು ಐವತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳು, ಮೂರು ಒಲಿಂಪಿಕ್ಸ್‌ನಲ್ಲಿ ಸ್ಪರ್ಧೆ ಹಾಗೂ ಹತ್ತಾರು ಪ್ರತಿಷ್ಠಿತ ಪುರಸ್ಕಾರಗಳು ಹೈದರಾಬಾದಿನ ಅವರ ಮನೆಯ ಗೋಡೆಗಳನ್ನು ಅಲಂಕರಿಸಿವೆ. ಅವೆಲ್ಲವೂ ಅವರು ಈ ದೇಶಕ್ಕೆ ಕೊಟ್ಟ ಕೊಡುಗೆಗಳೂ ಹೌದು.

ಇದೀಗ ಈ ಟೆನಿಸ್ ಋತುವಿನ ನಂತರ ನಿವೃತ್ತಿಯಾಗುವುದಾಗಿ ಹೈದರಾಬಾದ್‌ನ ಆಟಗಾರ್ತಿ ಘೋಷಿಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಅಮೆರಿಕ ಓಪನ್ ಟೂರ್ನಿ ಅವರಿಗೆ ಕೊನೆಯ ಗ್ರ್ಯಾನ್‌ಸ್ಲಾಂ ಟೂರ್ನಿಯಾಗಬಹುದು. ಆದರೆ 35 ವರ್ಷದ ಸಾನಿಯಾ ವಿದಾಯದಿಂದ ತೆರವಾಗುವ ಸ್ಥಾನವನ್ನು ತುಂಬುವವರು ಯಾರು ಎಂಬ ಪ್ರಶ್ನೆಗೆ ಮಾತ್ರ ಬೇಗನೆ ಉತ್ತರ ಸಿಗುವುದು ಕಷ್ಟ. ಅದಕ್ಕಾಗಿ ಇನ್ನಷ್ಟು ಕಾಲ ಕಾಯಬೇಕಾಗಬಹುದು.

ಏಕೆಂದರೆ ಟೆನಿಸ್ ಕ್ರೀಡೆ ಇವತ್ತಿಗೂ ಭಾರತದಲ್ಲಿ ದೊಡ್ಡ ನಗರಪ್ರದೇಶಗಳ ಎಲೀಟ್ ವರ್ಗದವರಿಗಷ್ಟೇ ಸೀಮಿತ ಎಂಬ ಮಾತು ಇದೆ. ಅಲ್ಲದೆ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಕಟ್ಟುಪಾಡುಗಳನ್ನು ಮೀರಿ ನಿಲ್ಲುವ ಸವಾಲುಗಳು ಬಾಲಕಿಯರಿಗೆ ಇನ್ನೂ ತಪ್ಪಿಲ್ಲ. ದಶಕಗಳ ಹಿಂದೆ ಸಾನಿಯಾ ಟೆನಿಸ್ ಆಯ್ಕೆ ಮಾಡಿಕೊಳ್ಳುವ ಮುನ್ನ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಜ್ಜೆಗುರುತು ಮೂಡಿಸಿದ್ದ ನಿರುಪಮಾ ಮಂಕಡ್ ಮತ್ತು ನಿರುಪಮಾ ಸಂಜೀವ್ ಕೂಡ ತಮ್ಮ ಕಾಲಘಟ್ಟದ ಸವಾಲುಗಳನ್ನು ಎದುರಿಸಿ ನಿಂತವರು.

ಆದರೆ, ಸಾನಿಯಾ ಅವರದ್ದು ತುಸು ಭಿನ್ನವಾದ ಕಥೆ. ಆರಂಭಿಕ ದಿನಗಳಲ್ಲಿ ಎದುರಿಸಿದ ಸವಾಲುಗಳು ಒಂದು ಬಗೆಯಾದರೆ, ಹತ್ತಾರು ಮಹತ್ವದ ಸಾಧನೆಗಳನ್ನು ಮಾಡಿದ ನಂತರವೂ ಎದುರಿಸಿದ ಕಹಿಗಳು ಹಲವು. ಆದರೂ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿ ಮಹಿಳೆಯೊಬ್ಬಳು ಮೈಲುಗಲ್ಲಾಗಿ ಬೆಳೆದು ನಿಲ್ಲುವ ಬಗೆಯನ್ನು ತೋರಿಸಿಕೊಟ್ಟರು.

'ಸಾನಿಯಾ ಯಾವಾಗಲೂ ವೈರುಧ್ಯಗಳನ್ನು ಎದುರಿಸುತ್ತಲೇ ಬೆಳೆದವರು. ತಮ್ಮ ಏಕಾಗ್ರತೆ, ಆತ್ಮವಿಶ್ವಾಸ ಮತ್ತು ಆತ್ಮಗೌರವವನ್ನು ಎಂದೂ ಬಿಟ್ಟುಕೊಟ್ಟವರಲ್ಲ. ಭಾರತದ ಕ್ರೀಡೆಗೆ ಹೊಸದಿಕ್ಕು ತೋರಿಸುವಲ್ಲಿ ಆಕೆಯದ್ದು ಪ್ರಮುಖ ಪಾತ್ರ' ಎಂದು ಸಾನಿಯಾ ಆತ್ಮಚರಿತ್ರೆ 'ಏಸ್ ಅಗೇನ್‌ಸ್ಟ್ ಆಡ್ಸ್' ಕೃತಿಯ ಬೆನ್ನುಡಿಯಲ್ಲಿ ದಿಗ್ಗಜ ಮಹೇಶ್ ಭೂಪತಿ ಬರೆದಿರುವುದು ಅಕ್ಷರಶಃ ದಿಟವಾದದ್ದು.

ಆರನೇ ವಯಸ್ಸಿನಲ್ಲಿ ಟೆನಿಸ್‌ನತ್ತ ಆಕರ್ಷಿತರಾದ ಸಾನಿಯಾಗೆ ಮೊದಲ ಕೋಚ್ ಮತ್ತು ಬೆಂಬಲವಾಗಿ ನಿಂತವರು ತಂದೆ ಇಮ್ರಾನ್ ಮಿರ್ಜಾ ಮತ್ತು ತಾಯಿ ನಸೀಮಾ. ಸಾನಿಯಾ ಪುಟ್ಟ ತೋಳುಗಳಲ್ಲಿದ್ದ ಅದಮ್ಯ ಚೈತನ್ಯವನ್ನು ಇಮ್ರಾನ್ ಅಂದು ಗುರುತಿಸದೇ ಹೋಗಿದ್ದರೆ, ಭಾರತದ ಕ್ರೀಡೆಗೆ ಬಹಳ ದೊಡ್ಡ ನಷ್ಟವಾಗುತ್ತಿತ್ತು. 2002ರಿಂದಲೇ ವೃತ್ತಿಪರ ಟೆನಿಸ್‌ನಲ್ಲಿ ತಮ್ಮ ಹೆಜ್ಜೆಗುರುತು ಮೂಡಿಸಲು ಆರಂಭಿಸಿದ್ದರು. ಆಫ್ರೋ ಏಷ್ಯನ್ ಗೇಮ್ಸ್, ಏಷ್ಯನ್ ಗೇಮ್ಸ್, ಸ್ಯಾಫ್ ಗೇಮ್ಸ್‌ನಲ್ಲಿ ಪದಕಗಳನ್ನು ಗೆದ್ದರು. 2005ರಲ್ಲಿ ಗ್ರ್ಯಾನ್‌ಸ್ಲಾಂ ಅಂಗಳಕ್ಕೂ ಕಾಲಿಟ್ಟರು. ಸಿಂಗಲ್ಸ್‌ನಲ್ಲಿ ತಮ್ಮ ಛಾಪು ಮೂಡಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಲಿಯಾಂಡರ್ ಪೇಸ್, ಮಹೇಶ್ ಭೂಪತಿ ಅವರೊಂದಿಗೆ ಆಡಿದ್ದು ಅವರ ವೃತ್ತಿಕೌಶಲ ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ರುಷ್ಮಿ ಚಕ್ರವರ್ತಿಯ ನಂತರ ಅವರು ಮಹಿಳಾ ಡಬಲ್ಸ್‌ನಲ್ಲಿ ವಿದೇಶಿ ಆಟಗಾರ್ತಿಯೊಂದಿಗೇ ಪಾಲುದಾರಿಕೆ ಮಾಡಬೇಕಾಯಿತು. ಇದೂ ಒಂದು ರೀತಿಯಲ್ಲಿ ಅವರ ಕೌಶಲಕ್ಕೆ ಸಾಣೆ ಹಿಡಿಯಲು ಕಾರಣವಾಯಿತು.

ಟಾಪ್ 100 ಆಟಗಾರ್ತಿಯರೊಳಗೆ ಸ್ಥಾನ ಪಡೆಯುವ ಸಾಧನೆ ಕಿರಿದೇನಲ್ಲ. ಆದರೂ ಅವರ ಮೇಲೆ ಸ್ವಧರ್ಮದ ಸಂಪ್ರದಾಯವಾದಿಗಳ ಕೆಂಗಣ್ಣು ಮಾತ್ರ ತಪ್ಪಲಿಲ್ಲ. ಅವರು ಆಡುವಾಗ ಧರಿಸುತ್ತಿದ್ದ ಪೋಷಾಕು ಧರ್ಮಕ್ಕೆ ವಿರುದ್ಧವಾದದ್ದು ಎಂಬ ಫತ್ವಾ ಜಾರಿಯಾಯಿತು. ಆದರೆ ಸಾನಿಯಾ ಅವತ್ತು ಅದನ್ನು ಮೀರಿ ನಿಂತರು. 2006ರಲ್ಲಿ ಅವರು ಇಸ್ರೇಲ್‌ನ ಆಟಗಾರ್ತಿ ಶಹರ್ ಪಿಯರ್ ಜೊತೆ ಆಡುವುದನ್ನು ಇಸ್ಲಾಮಿಕ್ ಸಂಘಟನೆಗಳು ವಿರೋಧಿಸಿದ್ದವು. ಆದರೆ ಇವರಿಬ್ಬರ ಜೋಡಿಯು 2007ರಲ್ಲಿ ಕ್ಯಾಲಿಫೋರ್ನಿಯಾದಲ್ಲಿ ನಡೆದ ಡಬ್ಲ್ಯುಟಿಎ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಯಿತು. ಬೀಜಿಂಗ್ ಒಲಿಂಪಿಕ್ಸ್‌ಗೆ ಕೆಲವು ತಿಂಗಳು ಬಾಕಿಯಿದ್ದಾಗ ಮಣಿಕಟ್ಟಿನ ನೋವು ಕಾಡಿತು.

'ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಅವಕಾಶ ಬಹಳ ದೊಡ್ಡದು. ಇಂತಹ ಅವಕಾಶವನ್ನು ಯಾವ ಕಾರಣಕ್ಕೂ ಬಿಡಬಾರದು' ಎಂದು ತಂದೆ ಹೇಳಿದ ಮಾತುಗಳು ಸಂಜೀವಿನಿಯಾದವು. ಒಲಿಂಪಿಕ್ಸ್‌ನಲ್ಲಿ ಆಡಿದ ಭಾರತದ ಮೊದಲ ಮಹಿಳಾ ಟೆನಿಸ್‌ಪಟುವೆಂಬ ಹೆಗ್ಗಳಿಕೆ ಅವರದ್ದಾಯಿತು. ಬೀಜಿಂಗ್‌ನಲ್ಲಿ ಸಿಂಗಲ್ಸ್ ಮತ್ತು ಸುನಿತಾ ರಾವ್ ಅವರೊಂದಿಗೆ ಡಬಲ್ಸ್‌ನಲ್ಲಿ ಆಡಿದರು. ನಂತರದ ದಿನಗಳಲ್ಲಿ ಮಣಿಕಟ್ಟಿನ ಶಸ್ತ್ರಚಿಕಿತ್ಸೆಯೂ ಆಯಿತು. ಇದು ಅವರಿಂದ ಸಿಂಗಲ್ಸ್‌ನಲ್ಲಿ ಆಡುವ ಅವಕಾಶವನ್ನು ಕಿತ್ತುಕೊಂಡಿತು. 2010ರಲ್ಲಿ ಅವರು ಪಾಕಿಸ್ತಾನದ ಕ್ರಿಕೆಟಿಗ ಶೋಯಬ್ ಮಲಿಕ್ ಅವರನ್ನು ವಿವಾಹವಾದಾಗ ಮತ್ತೊಂದು ವಿವಾದ ಎದುರಾಯಿತು. 'ದೇಶ ವಿರೋಧಿ' ಎಂಬ ಟೀಕೆಯನ್ನೂ ಕೇಳಬೇಕಾಯಿತು. ಲಂಡನ್ ಒಲಿಂಪಿಕ್ಸ್‌ನ ವನಿತೆಯರ ಡಬಲ್ಸ್‌ನಲ್ಲಿ ರುಷ್ಮಿ ಚಕ್ರವರ್ತಿ ಜೊತೆಗೂಡಿ 32ರ ಘಟ್ಟ ತಲುಪಿದ್ದರು. ಮಿಶ್ರ ಡಬಲ್ಸ್‌ನಲ್ಲಿ ಲಿಯಾಂಡರ್ ಪೇಸ್ ಜೊತೆಗೆ ಕ್ವಾರ್ಟರ್ ಫೈನಲ್ ತಲುಪಿ ದಾಖಲೆ ಬರೆದರು. ಇದಕ್ಕೂ ಮುನ್ನ ಭಾರತದ ತ್ರಿವರ್ಣ ಧ್ವಜಕ್ಕೆ ಅವಮಾನ ಮಾಡಿದ್ದಾರೆಂಬ ಆರೋಪಕ್ಕೂ ತುತ್ತಾಗಿದ್ದರು.

2015ರಲ್ಲಿ ಸ್ವಿಟ್ಜರ್ಲೆಂಡ್‌ನ ದಿಗ್ಗಜ ಆಟಗಾರ್ತಿ ಮಾರ್ಟಿನಾ ಹಿಂಗಿಸ್ ಅವರೊಂದಿಗೆ ವಿಂಬಲ್ಡನ್ ಡಬಲ್ಸ್ ಕಿರೀಟ ಗೆದ್ದಿದ್ದು ಅವರ ಮಹತ್ಸಾಧನೆ. ಆ ಸಂದರ್ಭದಲ್ಲಿ ಅವರು ವಿಶ್ವದ ಅಗ್ರಶ್ರೇಯಾಂಕದ ಡಬಲ್ಸ್ ಆಟಗಾರ್ತಿಯಾಗಿದ್ದರು. ಇದೇ ಜೋಡಿ ಅಮೆರಿಕ ಓಪನ್‌ನಲ್ಲಿಯೂ ಮಿಂಚಿತು. 2016ರಲ್ಲಿ ಫ್ರೆಂಚ್ ಓಪನ್ ಮಿಶ್ರ ಡಬಲ್ಸ್‌ನಲ್ಲಿ ಇವಾನ್ ಡೊಡಿಗ್ ಜೊತೆಗೆ ರನ್ನರ್ಸ್ ಅಪ್ ಕೂಡ ಆದರು. ರಿಯೊ ಒಲಿಂಪಿಕ್ಸ್‌ಗೆ ತೆರಳುವ ಮುನ್ನ ಅವರನ್ನು ತೆಲಂಗಾಣದ ಪ್ರಚಾರ ರಾಯಭಾರಿಯಾಗಿ ನೇಮಕ ಮಾಡಲಾಯಿತು. ಆ ಸಂದರ್ಭದಲ್ಲಿ ಕೆಲವರು 'ಆಕೆ ಪಾಕಿಸ್ತಾನದ ಸೊಸೆ' ಎಂದು ವ್ಯಂಗ್ಯವಾಡಿದರು. ಅದಕ್ಕೆ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್, 'ಸಾನಿಯಾ ಹೈದರಾಬಾದಿನ ಮಗಳು' ಎಂದು ತಿರುಗೇಟು ಕೊಟ್ಟಿದ್ದರು.

ಹೀಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಟೀಕೆಗಳನ್ನು ಹಿಂದಿಕ್ಕುತ್ತ ಮುಗುಳ್ನಗುತ್ತ ಮುಂದೆ ಸಾಗಿದ ಸಾನಿಯಾ 2018ರಲ್ಲಿ ಗಂಡು ಮಗುವಿನ ತಾಯಿಯಾದರು. ಆದರೆ, 'ತಾಯ್ತನ ಎಂಬುದು ಹೆಣ್ಣಿನ ಜೀವನದ ಅಂತ್ಯವಲ್ಲ. ಹೊಸ ಆರಂಭ' ಎಂದು ಹೇಳಿದರು. 26 ಕೆ.ಜಿ. ತೂಕವನ್ನು ಇಳಿಸಿಕೊಂಡು 2020ರಲ್ಲಿ ಹೋಬರ್ಟ್ ಟೆನಿಸ್ ಅಂಗಣಕ್ಕೆ ಧುಮುಕಿದರು. ನಾದಿಯಾ ಕಿಚೆನೊಕ್ ಜೊತೆಗೂಡಿ ಡಬಲ್ಸ್ ಪ್ರಶಸ್ತಿ ಗೆದ್ದರು. ಅಪಹಾಸ್ಯ ಮಾಡಿದವರಿಗೆ ಪ್ರತಿಬಾರಿ ಸಾಧನೆಯ ಮೂಲಕ ಎದುರುತ್ತರ ಕೊಡುವ ಛಲಗಾತಿ ಈಗ ಅಂಕಣದಿಂದ ಹಿಂದೆ ಸರಿಯುತ್ತಿದ್ದಾರೆ. ಒಂದು ಯುಗಾಂತ್ಯವಾಗುತ್ತಿದೆ. ಆದರೆ ಇದು ಹೊಸ ಯುಗದ ಆರಂಭಕ್ಕೆ ನಾಂದಿಯಾಗಬೇಕು. ಅವರ ಛಲಭರಿತ ಜೀವನ ಪ್ರೇರಣೆಯಾಗಬೇಕು. ಸಾನಿಯಾ ಅವರಂತೆ ಸಾಧನೆ ಮಾಡಿದ ಬಹಳಷ್ಟು ಹೆಣ್ಣು ಮಕ್ಕಳಿಗೆ ಸಾಧನೆ ಮಾಡುವ ದಾರಿ ಶುರುವಾಗುವುದೇ ಅವರ ಮನೆಯಂಗಳದಿಂದ ಎಂಬುದನ್ನು ಸಾನಿಯಾ, ಪಿ.ವಿ. ಸಿಂಧು, ಸೈನಾ ನೆಹ್ವಾಲ್, ಗೀತಾ ಪೋಗಟ್ ಮತ್ತಿತರರ ಜೀವನ ತೋರಿಸಿಕೊಡುತ್ತದೆ. ಅದರೊಂದಿಗೆ ಸಮಾಜ, ಕ್ರೀಡಾ ಆಡಳಿತಗಳು ಕೈಜೋಡಿಸಿದರೆ ಸಾನಿಯಾ ಹಚ್ಚಿದ ದೀಪದಿಂದ ಮತ್ತಷ್ಟು ದೀಪಗಳನ್ನು ಬೆಳಗಿಸಬಹುದು.



ಚುರುಮುರಿ



ಜಿಗಿತ ಶೂರರು

• ಸುಮಂಗಲಾ

'**ಹೂವಿಂದ** ಹೂವಿಗೆ ಹಾರುವ ದುಂಬಿ' ಹಾಡಿನ ಧಾಟಿಯಲ್ಲಿ ಬೆಕ್ಕಣ್ಣ 'ಪಕ್ಷದಿಂದ ಪಕ್ಷಕೆ ಹಾರುವ ರಾಜಕಾರಣಿ' ಎಂದು ರಾಗವಾಗಿ ಹಾಡಿಕೊಳ್ಳುತ್ತಿತ್ತು.

'ಏಷ್ಟ್ ಮಸ್ತ್ ಹಾಡ್ತೀಯಲೇ... ಟೀವಿ ರಿಯಾಲಿಟಿ ಶೋಗೆ ಪ್ರ್ಯಾಕ್ಟೀಸ್ ಮಾಡಾಕೆ ಹತ್ತೀಯೇನ್' ಎಂದೆ ಅಚ್ಚರಿಯಿಂದ.

'ಬಿಡತ್ತ... ಟೀವಿ ರಿಯಾಲಿಟಿ ಶೋ ನಿವಾಳಿಸಿ ವಗಿಯೂ ಹಂಗ ಎಲ್ಲಾ ಕಡಿಗಿ ಇದೇ ರಿಯಾಲಿಟಿ ಶೋ ನಡದೈತಲ್ಲ. ಒಲಂಪಿಕ್ಸಿನಾಗೆ ಪಕ್ಷದಿಂದ ಪಕ್ಷಕ್ಕೆ ಜಿಗಿಯೂ ಸ್ಪರ್ಧೆ ಇಟ್ಟರ ಚಿನ್ನ, ಬೆಳ್ಳಿ, ಕಂಚು ಎಲ್ಲಾ ಪದಕ ನಮ್ಮವ್ರಿಗೇ ಸಿಗತೈತಿ ಬಿಡು' ಎಂದು ಕುಹಕವಾಡಿತು.

'ಯಾವ ಪಕ್ಷದಿಂದ ಯಾವ ಪಕ್ಷಕ್ಕೆ ಎಷ್ಟ್ ಮಂದಿ ಜಿಗಿದಾರೆ ಅಂತ ಲೆಕ್ಕ ಮಾಡಿ ಹೇಳು ನೋಡೂಣು' ಅಂತ ಮರುಪ್ರಶ್ನೆ ಮಾಡಿತು.

'ಇದೇನ್ ಥಟ್ ಅಂತ ಹೇಳಿ ಕಾರ್ಯಕ್ರಮ ಅಂತ ಮಾಡೀಯೇನು... ನಾ ಹೀಂಗ ಬೆರಳು ಮಡಚಿ ಲೆಕ್ಕ ಹಾಕೂದ್ರಾಗೆ ಇನ್ನಾ ನಾಕ್ ಮಂದಿ ಒಂದ್ ಕಡಿಯಿಂದ ಇನ್ನೊಂದ್ ಕಡಿಗಿ ಥಟ್ ಅಂತ ಜಿಗಿದಿರ್ತಾರ. ಜಿಗಿತಕ್ಕೆ ಟಿಕೇಟು ಕೊಡಲಿಲ್ಲ ಅನ್ನೂದೆ ವಂದ್ ಕಾರಣ' ನಾನು ರೇಗಿದೆ.

'ಅದೇ ದೊಡ್ಡ ಕಾರಣ ಅಲ್ಲೇನ್ ಮತ್ತ... ನಿಮಗ ಶ್ರೀಸಾಮಾನ್ಯರಿಗೆ ಸೇವಾ ಮಾಡಾಕೆ ಆಗಲಿಲ್ಲ ಅಂತ ಜಿಗಿಬೇಕೇನ್' ಎಂದು ಜಿಗಿತ-ಶೂರರನ್ನು ಸಮರ್ಥಿಸಿಕೊಂಡ ಬೆಕ್ಕಣ್ಣ ಟಿ.ವಿ. ನೋಡತೊಡಗಿತು.

'ಏ ನೋಡಿಲ್ಲಿ... ಉತ್ತರಪ್ರದೇಶದಾಗೆ ನಮ್ ಯೋಗಿಮಾಮನ ಪ್ರಚಾರದ ಬಸ್ ಹೊಂಟೈತಿ...' ಎಂದು ವದರಿತು.

'ಅದ್ ಇಂಗ್ಲಿಷ್ ಟೀವಿ ವಾಹಿನಿ ಬಸ್ಸು. ಮ್ಯಾಲೆ ನೋಡು... ಆ ಟೀವಿ ವಾಹಿನಿ ಲೋಗೊ ಐತಿ' ನಾನು ಬಸ್ಸಿನ ಮೇಲಿದ್ದ ಫಲಕ, ಲೋಗೊ ತೋರಿಸಿದೆ.

'ಲೋಗೊ ಯಾವುದಿದ್ದರೆ ಏನು? ಅದಕ್ಕೆ ಫ್ಲ್ಯಾಗ್ ತೋರಿಸಿ ಆಶೀರ್ವಾದ ಮಾಡಿದ್ದು ನಮ್ ಯೋಗಿಮಾಮ. ಬಸ್ಸು ಟೀವಿ ವಾಹಿನಿದಾದರೇನಾತು, ಅದು ಹೋಗೂ ರಸ್ತೆ, ಡ್ರೈವರ್ರೂ, ಎಂಜಿನ್ನೂ, ಎಲ್ಲಾ ನಮ್ಮ ಮಾಮನದು' ಬೆಕ್ಕಣ್ಣ ಹೆಮ್ಮೆಯಿಂದ ಉಲಿಯಿತು!

ದಿನದ ಟ್ವೀಟ್



ಶೋಷಣೆಯ ಅಸ್ತ್ರಗಳು

ಶ್ರೀಮಂತ ಮಹಿಳೆಯರೂ ಬಾಡಿಗೆ ತಾಯಂದಿರಾಗುವವರೆಗೆ ಬಾಡಿಗೆ ತಾಯ್ತನವನ್ನು ನಾನು ಒಪ್ಪುವುದಿಲ್ಲ. ಪುರುಷರೂ ಪ್ರೀತಿಯಿಂದ ಬುರ್ಖಾ ಧರಿಸುವವರೆಗೆ ಅದನ್ನೂ ನಾನು ಒಪ್ಪಲಾರೆ. ಪುರುಷ ವೇಶ್ಯಾವಾಟಿಕೆ ಸೃಷ್ಟಿಯಾಗಿ, ಪುರುಷರು ಮಹಿಳಾ ಗ್ರಾಹಕರಿಗಾಗಿ ಕಾಯುವಂತೆ ಆಗುವವರೆಗೆ ವೇಶ್ಯಾವಾಟಿಕೆಯನ್ನು ನಾನು ಸಮ್ಮತಿಸಲಾರೆ. ಇಲ್ಲವಾದಲ್ಲಿ, ಬಾಡಿಗೆ ತಾಯ್ತನ, ಬುರ್ಖಾ ಧರಿಸುವಿಕೆ, ವೇಶ್ಯಾವಾಟಿಕೆ ಎಲ್ಲವೂ ಕೇವಲ ಮಹಿಳೆಯರು ಮತ್ತು ಬಡವರ ಶೋಷಣೆಯ ಅಸ್ತ್ರಗಳಾಗಿಯೇ ಉಳಿಯುತ್ತವೆ.

ತಸ್ಲಿಮಾ ನಸ್ರೀನ್, ಲೇಖಕಿ

ಕಿಡಿನುಡಿ



ಅಗ್ನಿಶಾಮಕ ವ್ಯವಸ್ಥೆ ಕೆಲಸ ಮಾಡುವುದಿಲ್ಲ. ಸೇಫ್ಟಿ ಆಡಿಟ್ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಆದರೂ ಹೇಗೋ ಎದುರಿಸೋಣ ಎಂಬಂತೆಯೇ ಬಹುಶಃ ತಲೆಎತ್ತಿರುತ್ತವೆ ನಮ್ಮ ಶೇ 95ರಷ್ಟು ಬಹುಮಹಡಿ ಕಟ್ಟಡಗಳು. ಅಗ್ನಿಶಾಮಕ ಇಲಾಖೆಯು ಎಷ್ಟರಮಟ್ಟಿಗೆ ಪ್ರಬಲವಾಗಿ ಇರಬೇಕಿತ್ತೋ ಅದರ ಸನಿಹಕ್ಕೂ ಹೋಗಲಾರದಂತೆ ಇರುತ್ತದೆ ಅದರ ವ್ಯವಸ್ಥೆ. ಬಿಲ್ಡಿಂಗ್ ಪ್ಲ್ಯಾನ್ ಅನುಮೋದನೆಯು ಸಂಪೂರ್ಣ ರಾಜಿಗೆ ಒಳಗಾಗಿದೆ. ಅಗ್ನಿ ಅವಘಡಗಳಲ್ಲಿ ಪ್ರಾಣಬಲಿ ಅನಿವಾರ್ಯ ಎಂಬಂತಾಗಿದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಶುಕ್ರವಾರ, 24-1-1997

• **ರಾಜ್ಯ ನಗರಗಳ ಸೌಲಭ್ಯಕ್ಕೆ ನೆರವು: ಉದ್ಯಮಗಳಿಗೆ ಮೊರೆ**

ಬೆಂಗಳೂರು, ಜ. 23– ಬೆಂಗಳೂರಿನ ಹಾಗೂ ರಾಜ್ಯದ ಇತರ ಪ್ರಮುಖ ನಗರಗಳ ರಸ್ತೆ, ವಿದ್ಯುತ್, ನೀರು ಪೂರೈಕೆ ಹಾಗೂ ಇತರ ಮೂಲಸೌಲಭ್ಯಗಳ ಅಭಿವೃದ್ಧಿಯಲ್ಲಿ ಭಾಗವಹಿಸುವಂತೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಅಂತರ ರಾಷ್ಟ್ರೀಯ ಕೈಗಾರಿಕಾ ಕೂಟಗಳಿಗೆ ಮನವಿ ಮಾಡಿದರು.

ಇಲ್ಲಿಗೆ ಸಮೀಪದ ವೈಟ್‌ಫೀಲ್ಡ್‌ನಲ್ಲಿ ಟಾಟಾ ಉದ್ಯಮ ಸಮೂಹ ಹಾಗೂ ಸಿಂಗಪುರ ಉದ್ಯಮಗಳ ಕೂಟವು ನಿರ್ಮಿಸುತ್ತಿರುವ ಅಂತರರಾಷ್ಟ್ರೀಯ ತಂತ್ರಜ್ಞಾನ ಸಂಕೀರ್ಣದ (ಐಟಿಪಿಎಲ್) ಮೊದಲ ಹಂತವು 1995ರ ಸೆಪ್ಟೆಂಬರ್‌ನಲ್ಲಿ ಆರಂಭಗೊಂಡು, 'ನಿಗದಿತ ಅವಧಿಗಿಂತಲೂ ಮೊದಲೇ ಪೂರ್ತಿಗೊಳ್ಳುತ್ತಿರುವುದು ನಮ್ಮ ಅಧಿಕಾರಿಗಳ ಸಮೂಹಕ್ಕೆ 'ಕಣ್ಣು ತೆರೆಸುವ' ವಿಷಯವಾಗಿದೆ' ಎಂದು ಪಟೇಲ್ ಹೇಳಿದರು.

'ಯೋಜನೆಗಳನ್ನು ಸಕಾಲದಲ್ಲಿ ಪೂರ್ತಿಗೊಳಿಸಬೇಕು. ಈ ಮೂಲಕ ವೆಚ್ಚ ಏರಿಕೆಯನ್ನು ತಡೆಯಬಹುದು ಎಂಬ ಪಾಠ ನಮ್ಮ ಅಧಿಕಾರಿಗಳಿಗೆ ಈ ಯೋಜನೆಯಲ್ಲಿ ಅಡಗಿದೆ' ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಸೋಮವಾರ, 24-1-1972

• **'ಸಂಸ್ಕಾರ' ಚಿತ್ರಕ್ಕೆ ರಾಷ್ಟ್ರಪತಿ ಚಿನ್ನದ ಪದಕ ವಿತರಣೆ**

ಮುಂಬಯಿ, ಜ. 23– 1971ನೇ ಸಾಲಿನ ಅತ್ಯುತ್ತಮ ಕನ್ನಡ ಚಲನಚಿತ್ರ 'ಸಂಸ್ಕಾರ' ಇಂದು ರಾಷ್ಟ್ರಪತಿ ಚಿನ್ನದ ಪದಕವನ್ನು ಸ್ವೀಕರಿಸಿತು. ಇದರ ನಿರ್ಮಾಪಕ ನಿರ್ದೇಶಕರು ಶ್ರೀ ಟಿ.ಪಟ್ಟಾಭಿ ರಾಮರೆಡ್ಡಿ ಅವರು. ಈ ಚಿತ್ರವನ್ನು ಇಂಗ್ಲಿಷ್ ಭಾಷೆಗೂ ಅಳವಡಿಸಲಾಗಿದೆ.

• **ರಾಜ್ಯಗಳಿಗೆ ಹೆಚ್ಚಿನ ಅಧಿಕಾರಕ್ಕಾಗಿ ಕೇಂದ್ರಕ್ಕೆ ಸೋಷಲಿಸ್ಟ್‌ರ ಒತ್ತಾಯ**

ಬೆಂಗಳೂರು, ಜ. 23– ಮೊದಲಿನಿಂದಲೂ ಅತಿ ಕೇಂದ್ರೀಕರಣವನ್ನು ವಿರೋಧಿಸುತ್ತ ಬಂದಿರುವ ಸೋಷಲಿಸ್ಟ್ ಪಕ್ಷ, 'ಭಾರತದ ಭದ್ರತೆ, ಸಮಗ್ರತೆ, ರಾಷ್ಟ್ರೀಯತೆ ಮತ್ತು ಆರ್ಥಿಕ ವಿಕಾಸಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ಕರ್ನಾಟಕವು ಸ್ವಾಯತ್ತವಾಗಬೇಕು' ಎಂದು ಪ್ರತಿಪಾದಿಸಿದೆ.

ಕರ್ನಾಟಕ ಸೋಷಲಿಸ್ಟ್ ಪಕ್ಷವು ಚುನಾವಣೆಗೆ ಪೂರಕವಾಗಿ ಹೊರಡಿಸಿರುವ ಘೋಷಣೆಯಲ್ಲಿ, ರಾಜ್ಯದ ಹಲವು ವಿಶಿಷ್ಟವಾದ ಸಮಸ್ಯೆಗಳ ಕುರಿತು ಕೆಲವು ಪರಿಹಾರ ಕ್ರಮಗಳನ್ನು ಸೂಚಿಸಿದೆ.

ಸಂಗತ

ಹೆಣ್ಣು ಮಗುವಿನ 'ನಿಜಮೌಲ್ಯ'

'ಹೆಣ್ಣು ಮಗು'ವಿನ ದಿನ ಆಚರಿಸಲಾಗುತ್ತದೆ ಎಂಬುದೇ ಬಹು ಜನರಿಗೆ ಗೊತ್ತಿಲ್ಲ!

• ಡಾ. ಕೆ.ಎಸ್.ಪವಿತ್ರ

'ರಾಷ್ಟ್ರೀಯ ಹೆಣ್ಣು ಮಗುವಿನ ದಿನ'ವನ್ನಾಗಿ ಜನವರಿ 24 ಅನ್ನು 2009ರಿಂದ ಪ್ರತಿವರ್ಷ ಆಚರಿಸಲಾಗುತ್ತಿದೆ. ಅಮೆರಿಕದಂಥ ಮುಂದುವರಿದ ದೇಶದಲ್ಲಿಯೂ ಈವರೆಗೆ ಸಾಧ್ಯವಾಗಿರದ 'ಮಹಿಳಾ ಪ್ರಧಾನಿ'ಯ ವಾಸ್ತವ, ಭಾರತದಲ್ಲಿ 1966ರ ಜನವರಿ 24ಕ್ಕೆ ಇಂದಿರಾ ಗಾಂಧಿ ಅವರು ಭಾರತದ ಪ್ರಧಾನಿಯಾಗುವುದರೊಂದಿಗೆ ಸಾಧ್ಯವಾದದ್ದು ಈಗ ಇತಿಹಾಸ. ಇದೂ ಮಹಿಳಾ ಸಬಲೀಕರಣದ ಒಂದು ಗುರುತು ಎಂಬ ಕಾರಣಕ್ಕೆ ಈ ದಿನವನ್ನೇ ಹೆಣ್ಣು ಮಗುವಿನ ದಿನವನ್ನಾಗಿ ಭಾರತ ಆರಿಸಿಕೊಂಡಿದೆ.

ಪ್ರತಿವರ್ಷ ಹೊಸತೊಂದು ಧ್ಯೇಯವಾಕ್ಯವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆರಿಸಿಕೊಳ್ಳುತ್ತದೆ. ಆ ಧ್ಯೇಯವನ್ನು ಇಟ್ಟುಕೊಂಡು ಮತ್ತಷ್ಟು ಕೆಲಸಗಳನ್ನು ಮಾಡಬೇಕು, ಅರಿವು ಮೂಡಿಸಬೇಕು ಎನ್ನುವುದು ಅದರ ಉದ್ದೇಶ. ಆದರೆ ದುರಂತವೆಂದರೆ, ಈ ಬಾರಿಯ ಧ್ಯೇಯವಾಕ್ಯಕ್ಕಾಗಿ ಇಲಾಖೆಯ ಅಂತರ್ಜಾಲ ತಾಣವನ್ನು ಕೆದಕಿದರೂ, ಗೂಗಲ್‌ನಲ್ಲಿ ವಿವಿಧ ಶೀರ್ಷಿಕೆಗಳನ್ನು ಹಾಕಿ ತಡಕಾಡಿದರೂ, ಕೇವಲ ಮೂರೇ ದಿನಗಳು ಉಳಿದಿವೆ ಎಂದಾಗಲೂ ಸಾಮಾನ್ಯ ಜನರಿಗೆ 'ಧ್ಯೇಯ' ಲಭ್ಯವಿಲ್ಲ!

ನಿರ್ದಿಷ್ಟ ದಿನದಂದು ಸೂಕ್ತ ಧ್ಯೇಯವನ್ನು ಆರಿಸಿ, ವರ್ಷಪೂರ್ತಿ ಆ ಧ್ಯೇಯಕ್ಕೆ ಅನುಗುಣವಾಗಿ ದುಡಿಯುವುದು, ಹಿಂದಿನ ಧ್ಯೇಯವನ್ನೇ ಮಹತ್ವದ ಅಂಶದಿಂದ 2-3 ವರ್ಷಗಳವರೆಗೆ ಮುಂದುವರಿಸುವುದು, ಧ್ಯೇಯಕ್ಕೆ ಪ್ರಚಾರ ನೀಡುವುದಕ್ಕೆ ವಿಷಯ 'ಗಂಭೀರ'ವಾದದ್ದಲ್ಲ ಎಂಬ ಕಾರಣದಿಂದ ಗಣನೆಗೆ ಬಾರದಿರುವುದು- ಹೀಗೆ 'ಧ್ಯೇಯ' ಹೊರಬೀಳದಿರಲು ಹಲವು ಕಾರಣಗಳಿರುವ ಸಾಧ್ಯತೆಯಿದೆ.

ಕಾರಣ ಯಾವುದೇ ಇರಲಿ ಹೆಣ್ಣು ಮಗುವಿನ 'ನಿಜಮೌಲ್ಯ'ದ ಬಗ್ಗೆ ನಮಗೆ ಅರಿವು ಇದ್ದಂತಿಲ್ಲ! ಇಂಥ ಒಂದು ದಿನ ಅಸ್ತಿತ್ವದಲ್ಲಿ ಇದೆಯೆಂಬುದೇ ಬಹು ಜನರಿಗೆ ಗೊತ್ತಿಲ್ಲ. ಪಾಲಿಸಬೇಕಾದ ಜನರಿಗೆ ಅರಿವಿಲ್ಲದೆ ನಿರರ್ಥಕವಾಗಿರುವ ಕಾನೂನುಗಳು- ದುರುಪಯೋಗವಾಗುವ ಕಾನೂನುಗಳು ಮಹಿಳೆಯರಿಗೆ ಸಂಬಂಧಿಸಿದಂತೆ ಬಹಳಷ್ಟಿವೆ. ಆದರೂ ಮಹಿಳಾ ಸಬಲೀಕರಣ ಎಂಬ ಪರಿಕಲ್ಪನೆಯನ್ನು ನಾವು ಸ್ವಲ್ಪ ಅನುಮಾನದಿಂದ ನೋಡುವುದೇ ಹೆಚ್ಚು!

'ಅದೆಲ್ಲಾ ಭಾಷಣ ಮಾಡಲು, ಇತರರಿಗೆ ಬೋಧಿಸಲು ಪರವಾಗಿಲ್ಲ, ಆದರೆ ನಮ್ಮ ಮನೆಗೆ ಬೇಡ' ಎನ್ನುವ ಧೋರಣೆ ಸಾಮಾನ್ಯ. ಸಬಲೀಕರಣ ಒಳಗೊಳ್ಳುವ ಅಂಶಗಳು ಯಾವುವು? ಸ್ವಂತ ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯ, ಅಂತಹ ನಿರ್ಣಯವನ್ನು ತೆಗೆದುಕೊಳ್ಳಲು ಬೇಕಾದ ಮಾಹಿತಿ-ಸಂಪನ್ಮೂಲ, ಆಯ್ಕೆಗಳಿರುವುದು, ಒಟ್ಟಿಗೆ ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ದನಿಯೆತ್ತಿ ಮಾತನಾಡುವ ಅವಕಾಶ, ತನಗೆ ಬದಲಾವಣೆಯನ್ನು ತರುವ ಶಕ್ತಿಯಿದೆ ಎಂಬ ನಂಬಿಕೆ, ಕೌಶಲಗಳನ್ನು ಕಲಿಯುವ ಸೌಲಭ್ಯ, ಇನ್ನೊಬ್ಬರ ಗ್ರಹಿಕೆಗಳನ್ನು ಬದಲಿಸುವ ಬಲ. ಈ ಪ್ರಕ್ರಿಯೆ ನಿರಂತರ ಮತ್ತು ಸ್ವತಃ ಆರಂಭಿಸಬೇಕಾದದ್ದು ಎನ್ನುವುದು ಗಮನಾರ್ಹ.

ಇಂದಿನ ನಮ್ಮ ಶಿಕ್ಷಣ ಪದ್ಧತಿ ವೃತ್ತಿ ಕೈಗೊಳ್ಳಲು, ಆರ್ಥಿಕವಾಗಿ ಹೊಟ್ಟೆ ಹೊರೆಯಲು ಸಹಾಯಕವೇ ವಿನಾ ಇಂಥ ಸಬಲೀಕರಣವನ್ನಾಗಲೀ ಮತ್ತೊಬ್ಬರ ಸಾಮರ್ಥ್ಯಗಳನ್ನು ಗೌರವಿಸಿ ಪೋಷಿಸುವುದನ್ನಾಗಲೀ ಕಲಿಸುವುದಿಲ್ಲ. ಹಾಗೆಯೇ ಸಾಮಾಜಿಕವಾಗಿಯೂ ಮಹಿಳೆಯ ಮೇಲಿರುವ ಮನ್ನಣೆಯಿರದ ಕೆಲಸದ ಹೊರೆ, ಅನಕ್ಷರತೆ, ಮಹಿಳೆಯರನ್ನೇ ಪ್ರತ್ಯೇಕಿಸುವುದು, ಮಾಧ್ಯಮಗಳು ಮಹಿಳೆಯರನ್ನು ಬಿಂಬಿಸುವ ಮಾದರಿಗಳು ಇವೆಲ್ಲವೂ ಸಬಲೀಕರಣವನ್ನು ದುರ್ಬಲೀಕರಣದತ್ತ ಎಳೆದುಬಿಡುತ್ತವೆ.

ಮಹಿಳಾ ಸಬಲೀಕರಣದ ಪ್ರಶ್ನೆ ಲಿಂಗಪತ್ತೆಯ ಕಾನೂನಿಗಿಂತ ಹೆಚ್ಚು ಚರ್ಚೆಯಾಗುವುದು ಅಗತ್ಯ. ಮೊನ್ನೆ ಮೊನ್ನೆ ಗರ್ಭಪಾತದ ಅವಧಿಯನ್ನು ಸರ್ಕಾರ ಏರಿಸಿದೆ, ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು 21 ವರ್ಷಗಳಿಗೆ ಏರಿಸುವ ಮಸೂದೆ ಮಂಡನೆಯಾಗಿದೆ. ಈ ಕಾನೂನು ಶೀಘ್ರ ಜಾರಿಗೆ ಬರಬಹುದು ಎನ್ನುವ ಅಳುಕಿನಿಂದ ನೂರಾರು ಬಾಲಕಿಯರ ಮದುವೆಯನ್ನು ಅವಸರದಲ್ಲಿ ಹೇಗಾದರೂ ಮಾಡಿ, ಯಾರಿಗಾದರೂ ಕೊಟ್ಟು ಮುಗಿಸಲಾಗಿದೆ!



'ಹೆಣ್ಣು ಮಗು'ವಿನ ದಿನ ವಿಶೇಷವಾಗಿ ತಾಯಂದಿರಿಗೆ ಗಂಡು ಮಕ್ಕಳನ್ನು ಬೆಳೆಸುವ ರೀತಿ ಬದಲಾಗಬೇಕಾದ ಬಗೆಗೂ ಅರಿವು ಮೂಡಿಸಬೇಕು. ಸಾಮಾಜಿಕವಾಗಿ ಗಂಡು ಮಗುವಿನ 'ಮೌಲ್ಯ'ದಿಂದ ಗಂಡು ಮಗುವನ್ನು ಹೆರುವ ತಾಯಿಯ ಅಂತಸ್ತೂ ಏರುತ್ತದೆ. ಇದು ಇಂದು ಬಹಳಷ್ಟು ಮಹಿಳೆಯರನ್ನು ಗಂಡು ಮಗು ಬೇಕು ಎಂದು ಹಂಬಲಿಸುವಂತೆ, 'ಹೆಣ್ಣು ಮಗು' ಎಂದಾಕ್ಷಣ ಅದು ತಮ್ಮ 'ಸೋಲು' ಎಂದು ಭಾವಿಸುವಂತೆ ಪ್ರೇರೇಪಿಸುತ್ತದೆ. ಹೆಣ್ಣು ಮಕ್ಕಳನ್ನು ನಾವು ಸಬಲೀಕರಿಸಲು ಮುಂದಾಗುವಂತೆಯೇ ಗಂಡು ಮಕ್ಕಳಲ್ಲಿ ಸ್ವಾವಲಂಬಿತನವನ್ನು ಬೆಳೆಸುವುದು ಅವಶ್ಯಕ. ಅದು ಮುಂದೆ ತಾಯಿ-ಪತ್ನಿಯರ ಸಂತಸಕ್ಕೆ ಕಾರಣವಾಗುತ್ತದೆಯೋ ಇಲ್ಲವೋ ಸ್ವತಃ ಅವರವರ ಜೀವನಕ್ಕಂತೂ ಸಹಾಯಕವೇ!

ಹೆಣ್ಣು ಮಕ್ಕಳು ತಮ್ಮ ಜೀವನಕ್ಕೆ ಆದರ್ಶ ಮಾದರಿಗಳನ್ನು ಹುಡುಕಲು ದೂರ ಹೋಗಬೇಕಿಲ್ಲ. ಸುತ್ತಲಿರುವ ಸುಖಿ, ಸ್ವಾವಲಂಬಿ, ಆತ್ಮವಿಶ್ವಾಸದ ಮಹಿಳೆಯರನ್ನು ನೋಡಿ ಅವರಿಂದ ಕಲಿಯುವುದೇ ಸೂಕ್ತ. ಹಾಗೆ ಕಲಿಯುವ ಧೈರ್ಯವೇ ನಮ್ಮ 'ಬಂಡವಾಳ' ಎಂಬುದನ್ನು ಅರಿಯಬೇಕು. ಆಗ 'ರಾಷ್ಟ್ರೀಯ ಹೆಣ್ಣು ಮಗುವಿನ ದಿನ'ದ ಅಗತ್ಯ, ಧ್ಯೇಯ ವಾಕ್ಯ ಇನ್ನೂ ಬಿಡುಗಡೆಯಾಗಿಲ್ಲ ಎಂಬ ಪೇಚಾಟ ಇರಲಾರದು ಅಲ್ಲವೇ?!

ವಾಚಕರ ವಾಣಿ

ಭ್ರಷ್ಟರ ಪರ ನಿಲುವು ಖಂಡನೀಯ

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಕೆಪಿಎಸ್‌ಸಿ ಮೂಲಕ ಅಕ್ರಮ ಮಾರ್ಗದಿಂದ ಆಯ್ಕೆಯಾಗಿರುವುದು ಸಾಬೀತಾಗಿರುವುದರಿಂದ, 362 ಅಭ್ಯರ್ಥಿಗಳು ನೇಮಕಾತಿಗೆ ಅರ್ಹರಲ್ಲವೆಂದು ಹೇಳಿರುವ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್, ಇವರ ಆಯ್ಕೆ ಪ್ರಕ್ರಿಯೆ ರದ್ದು ಮಾಡಿದ ಸರ್ಕಾರದ ನಿರ್ಧಾರವನ್ನು ಎತ್ತಿಹಿಡಿದಿವೆ. ಹೀಗಿರುವಾಗ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಈ ಅಭ್ಯರ್ಥಿಗಳ ಪರವಾಗಿ ಬ್ಯಾಟ್ ಬೀಸಿರುವುದನ್ನು (ಪ್ರ.ವಾ., ಜ. 18) ನೋಡಿದರೆ ಸೋಜಿಗವೆನಿಸುತ್ತದೆ. ನ್ಯಾಯಾಲಯಗಳ ಆದೇಶಕ್ಕೆ ವಿರುದ್ಧವಾಗಿ ಮುಖ್ಯಮಂತ್ರಿಗೆ ಈ ಕುರಿತು ಪತ್ರ ಬರೆಯುವುದು ಗೌರವಯುತ ಸ್ಥಾನದಲ್ಲಿರುವವರ ಘನತೆಗೆ ತಕ್ಕುದಲ್ಲ. ಆ ಪತ್ರ ಆಧರಿಸಿ ಕ್ರಮ ತೆಗೆದುಕೊಳ್ಳಲು ಕಡತ ಮಂಡಿಸುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚಿಸುವುದು ನ್ಯಾಯಾಂಗದ ತೀರ್ಪಿಗೆ ಅಗೌರವ ತೋರಿಸಿದಂತೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು 'ದೇವೇಗೌಡರ ಮನವಿಗೆ ಸೊಪ್ಪು ಹಾಕಬೇಡಿ' ಎಂದಿರುವುದು (ಪ್ರ.ವಾ., ಜ. 22) ಸಮಂಜಸವಾಗಿದೆ. ಭ್ರಷ್ಟಾಚಾರ, ಸ್ವಜನಪಕ್ಷಪಾತದ ಮೂಲಕ ಆಯ್ಕೆಯಾದವರ ಪರವಾಗಿ ಮಾಜಿ ಪ್ರಧಾನಿ ನಿಂತುಕೊಳ್ಳುವುದಾದರೆ, ನ್ಯಾಯಮಾರ್ಗದಲ್ಲಿ ಪರೀಕ್ಷೆ ಬರೆದು ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದ ಕಾರಣದಿಂದಾಗಿ ಅವಕಾಶ ವಂಚಿತರಾದ ಸಾವಿರಾರು ಅಭ್ಯರ್ಥಿಗಳ ಪರ ನಿಲ್ಲುವವರು ಯಾರು ಎಂದು ವಿಶ್ವನಾಥ್ ಅವರು ಕೇಳಿರುವುದು ಸರಿಯಾಗಿಯೇ ಇದೆ.

ಈ.ನಂಜಪ್ಪ, ಬೆಂಗಳೂರು

ವಿದ್ಯುತ್ ದರ: ಬಳಕೆದಾರರ ಮೇಲೆ ಹೊರಿಸುವುದು ಸಲ್ಲ

ವಿದ್ಯುತ್ ದರ ಏರಿಕೆ ಅನಿವಾರ್ಯ ಎಂದಿರುವ ರಾಜ್ಯದ ಇಂಧನ ಸಚಿವರು, ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ಕಾರಣ ನೀಡಿದ್ದಾರೆ. ಅದರ ಜೊತೆಗೇ, ಸರ್ಕಾರದ ಅನೇಕ ಇಲಾಖೆಗಳಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ (ಎಸ್ಕಾಂ) ಬರಬೇಕಾದ ಬಾಕಿಯೇ ₹ 12,000 ಕೋಟಿ ಇದೆ ಅಂದಿದ್ದಾರೆ (ಪ್ರ.ವಾ., ಜ. 22). ಸರ್ಕಾರದ ಇಲಾಖೆಗಳೇ ಕಂಪನಿಗಳಿಗೆ ಅಷ್ಟು ಮೊತ್ತವನ್ನು ಬಾಕಿ ಇಟ್ಟು ಅವು ನಷ್ಟ ಅನುಭವಿಸುವಂತೆ ಮಾಡಿ, ಆ ಹೊರೆಯನ್ನು ಸಾಮಾನ್ಯ ಬಳಕೆದಾರರ ಮೇಲೆ ಹೊರಿಸುವುದು ಎಷ್ಟು ನ್ಯಾಯ?

ಇಲ್ಲಿ ಎರಡು ಪ್ರಶ್ನೆಗಳು ಹುಟ್ಟುತ್ತವೆ. ಒಂದು, ಯಾವ ಇಲಾಖೆಗಳಿಂದ ಬಾಕಿ ಇದೆಯೋ ಅವುಗಳ ಸೇವೆಯನ್ನು ಪಡೆಯುವ ನಾಗರಿಕರ ಮೇಲೆ ಆ ಇಲಾಖೆಗಳು- ಉದಾಹರಣೆಗೆ ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಜಲಮಂಡಳಿ- ತಮ್ಮ ಸೇವಾ ಶುಲ್ಕಗಳನ್ನು ಹೆಚ್ಚಿಸುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಇದಾದಲ್ಲಿ ಅಧಿಕ ವಿದ್ಯುತ್ ದರದ ಜೊತೆಗೆ ಇತರ ಶುಲ್ಕಗಳ ಹೊರೆಯೂ ನಾಗರಿಕರ ಮೇಲೆ ಬೀಳಲಿದೆ. ಎರಡು, ಸರಬರಾಜು ಕಂಪನಿಗಳು ನಷ್ಟದಲ್ಲಿವೆ ಎಂಬ ಕಾರಣ ನೀಡಿ ಅವುಗಳನ್ನು ಖಾಸಗಿ ಕ್ಷೇತ್ರಕ್ಕೆ ಮಾರಾಟ ಮಾಡುವ ಹುನ್ನಾರವೂ ಇರಬಹುದು. ಅಗತ್ಯ ವಸ್ತುಗಳ ಬೆಲೆಗಳು ಈಗಾಗಲೇ ನಿರಂತರವಾಗಿ ಏರುತ್ತಿರುವಾಗ ಸರಬರಾಜು ಕಂಪನಿಗಳಿಗೆ ಆಗುವ ನಷ್ಟವನ್ನು ತುಂಬಿಸಲು ದರ ಪರಿಷ್ಕರಣೆ ಮಾಡುವುದು ಮತ್ತೊಂದು ಜನವಿರೋಧಿ ನೀತಿ ಎನ್ನದೆ ನಿರ್ವಾಹವಿಲ್ಲ.

ಟಿ.ಆರ್.ಭಟ್, ಮಂಗಳೂರು

ಒಕ್ಕೂಟ ವ್ಯವಸ್ಥೆ ಅತ್ತೆ– ಸೊಸೆ ಸಂಬಂಧದಂತಾದರೆ!

ಗಣರಾಜ್ಯೋತ್ಸವದ ಪರೇಡ್‌ಗಾಗಿ ಪಶ್ಚಿಮ ಬಂಗಾಳವು ಸಲ್ಲಿಸಿದ್ದ ಸುಭಾಷ್‌ಚಂದ್ರ ಬೋಸ್ ಅವರ ಚಿತ್ರ ಒಳಗೊಂಡ ಸ್ತಬ್ಧಚಿತ್ರದ ಪ್ರಸ್ತಾವವನ್ನು ತಿರಸ್ಕರಿಸಿ, ಈಗ ಇಂಡಿಯಾ ಗೇಟ್ ಬಳಿ ಅವರ ಪ್ರತಿಮೆ ಸ್ಥಾಪನೆಗೆ ನಮ್ಮ ಪ್ರಧಾನಿ ಮುಂದಾಗಿರುವುದು ಒಂದು ನಗೆ ಹನಿಯನ್ನು ನೆನಪಿಗೆ ತರುವಂತಿದೆ:

ಮನೆ ಮುಂದೆ ಭಿಕ್ಷೆ ಬೇಡಲು ಬಂದ ಭಿಕ್ಷುಕನಿಗೆ ಆ ಮನೆಯ ಸೊಸೆ, 'ಏನೂ ಇಲ್ಲ ಮುಂದಕ್ಕೆ ಹೋಗಪ್ಪ' ಎಂದಳಂತೆ. ಇದರಿಂದ ಉರಿದೆದ್ದ ಅತ್ತೆ, 'ನೀನ್ಯಾವೋಳೆ ಭಿಕ್ಷುಕನನ್ನು ವಾಪಸ್ ಕಳಿಸೋಕೆ' ಅಂತ ಹೇಳಿ, ಭಿಕ್ಷುಕನನ್ನು ಕರೆದು 'ಮತ್ತೆ ಬೇಡು' ಎಂದಳಂತೆ. ಭಿಕ್ಷುಕ ಉತ್ಸಾಹದಿಂದ ತನ್ನ ಬೇಡಿಕೆಯನ್ನು ಮತ್ತೆ ಮಂಡಿಸಿದ. ಆಗ ಅತ್ತೆ, 'ಏನೂ ಇಲ್ಲ ಮುಂದಕ್ಕೆ ಹೋಗು' ಎಂದಳಂತೆ! ಪ್ರತಿಮೆಯ ಪ್ರತಿಷ್ಠಾಪನೆ ಮೇಲಿನ ಕಥೆಯ ವಿಲೋಮದ ಹೋಲಿಕೆ ಎನ್ನಬಹುದೇ?! ಒಕ್ಕೂಟ ವ್ಯವಸ್ಥೆಯು ಅತ್ತೆ- ಸೊಸೆಯರ ಸಂಬಂಧದಂತಾದರೆ ರಾಜ್ಯಗಳ ಗತಿ ಏನು?

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಭಾಷಾ ಅಧ್ಯಯನ ಕೇಂದ್ರ ಮುಚ್ಚಬೇಕೆ?

'ಸಂಸ್ಕೃತ ಎಂಬ ಮಾಯಾಮೃಗ' ಎಂಬ ಲೇಖನದಲ್ಲಿ (ಸಂಗತ, ಜ. 22) ಸಿ.ಎನ್.ರಾಮಚಂದ್ರನ್ ಅವರು ಮಂಡಿಸಿರುವ ವಿಚಾರಗಳು ಕೆಳಗಿನ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ:

1. ಭಾಷೆಯ ಕಲಿಕೆಯು ಕೃಷಿ, ಹೋಟೆಲ್, ಪತ್ರಿಕೋದ್ಯಮ, ವೈದ್ಯಕೀಯ, ತಾಂತ್ರಿಕ ಇತ್ಯಾದಿ ಕ್ಷೇತ್ರಗಳಲ್ಲಿ ವೃತ್ತಿ ಅಥವಾ ಉದ್ಯಮ ನಡೆಸಲು ನೆರವಾಗಬೇಕು ಎಂಬುದು ಅವರ ವಾದ. ಇದನ್ನು ಒಪ್ಪಿದರೆ ನಮ್ಮ ರಾಜ್ಯ ಹಾಗೂ ದೇಶದಲ್ಲಿನ ಹಳಗನ್ನಡ ಹಾಗೂ ಇನ್ನೂ ಹಲವಾರು ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಅಧ್ಯಯನ ಕೇಂದ್ರಗಳನ್ನೂ ಮುಚ್ಚಬೇಕಾಗುತ್ತದೆ, ಅಲ್ಲವೇ?

2. ಕರ್ನಾಟಕ ಸರ್ಕಾರ ಇಂಗ್ಲಿಷ್ ಬೋಧನೆಗೆ ಹೆಚ್ಚಿನ ಅನುವು ಮಾಡಿಕೊಡುವ ಪ್ರಬುದ್ಧತೆಯನ್ನು ಪ್ರದರ್ಶಿಸಬಲ್ಲದೇ ಎಂದು ಪ್ರಶ್ನಿಸಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುತ್ತಾ, ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಪ್ರೋತ್ಸಾಹಿಸುತ್ತಾ ಇಂಗ್ಲಿಷ್ ಬೋಧನೆಗೆ ಬಹಳಷ್ಟು ಒತ್ತು ಕೊಡುತ್ತಿರುವ ಸರ್ಕಾರದ ನಡೆ ಇವರಿಗೆ ಕಾಣಿಸುತ್ತಿಲ್ಲವೇ? ಕನ್ನಡ ಭಾಷೆಯ ಹಿತದೃಷ್ಟಿಯಿಂದ ಇದು ಕನ್ನಡಿಗರಲ್ಲಿ ಆತಂಕವನ್ನು ಉಂಟುಮಾಡುವ ವಿಚಾರವಲ್ಲವೇ?

3. ದೇವಭಾಷೆಗೆ ದೇವಲೋಕದಿಂದ ಸುವರ್ಣ ಸೃಷ್ಟಿಯಾಗುವುದೇ ಎಂದು ಕೇಳಿದ್ದಾರೆ! ದೇವಸ್ಥಾನ, ಮಸೀದಿ, ಚರ್ಚ್‌ಗಳಿಗೆ ಸರ್ಕಾರದ ಬೊಕ್ಕಸದಿಂದ ಸಂದಾಯವಾಗುವ ಹಣ ಆಕಾಶದಿಂದ ಉದುರುವುದೇ?

ಡಾ. ಎಂ.ರವೀಂದ್ರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಮವಸ್ತ್ರ: ಸೈನಿಕರ ವಿಶಿಷ್ಟ ಗುರುತು

ಸಮವಸ್ತ್ರಗಳು ಯಾವುದೇ ಸೇನಾಪಡೆಗೆ ಅತ್ಯಂತ ವಿಶಿಷ್ಟವಾದ ಗುರುತಿನ ಲಕ್ಷಣಗಳಲ್ಲಿ ಒಂದಾಗಿರುತ್ತವೆ. ಇವು ಸಿಬ್ಬಂದಿಗಳ ನಡುವೆ ಒಗ್ಗಟ್ಟು ಮತ್ತು ಶಿಸ್ತನ್ನು ಬೆಳೆಸುತ್ತವೆ. ಸಮವಸ್ತ್ರವು ಸೈನಿಕರಿಗೆ ಹೆಮ್ಮೆಯ ಸಂಕೇತ. ಸೈನಿಕರೊಬ್ಬ ಧರಿಸುವ ಬಟ್ಟೆಯು ದೇಶದ ಪ್ರತಿ ನಾಗರಿಕನಲ್ಲೂ ಸೈನಿಕರ ಬಗ್ಗೆ ಗೌರವ ಭಾವ ಮೂಡಿಸುತ್ತದೆ. ಸೇನಾ ಸಿಬ್ಬಂದಿ ಹಾಗೂ ನಾಗರಿಕರ ನಡುವೆ ವ್ಯತ್ಯಾಸವನ್ನು ಗುರುತಿಸುವ ಉದ್ದೇಶದಿಂದ ಮಾತ್ರವೇ ಸಮವಸ್ತ್ರಗಳನ್ನು ವಿನ್ಯಾಸಗೊಳಿಸಿರುವುದಿಲ್ಲ. ಇವು ಸೇನೆಯ ವಿವಿಧ ಪಡೆಗಳ ನಡುವಿನ ಭಿನ್ನತೆಯನ್ನೂ ಪ್ರತಿಬಿಂಬಿಸುತ್ತವೆ.

ಸೈನಿಕರ ದಿರಿಸಿನಲ್ಲಿ ಬದಲಾವಣೆ ತರುವ ಹಿಂದೆ ಹಲವು ಉದ್ದೇಶಗಳಿವೆ. 'ಆರಾಮದಾಯಕ' ವಿಚಾರವನ್ನು ಗಮನದಲ್ಲಿಟ್ಟುಕೊಂಡು ಹೊಸ ಸಮವಸ್ತ್ರವನ್ನು ಜಾರಿಗೆ ತರಲಾಗಿದೆ ಎಂದು ತಜ್ಞರು ಹೇಳಿದ್ದಾರೆ. ಭದ್ರತೆಯ ವಿಚಾರವೂ ಈ ಬದಲಾವಣೆ ಹಿಂದಿರುವ ಮತ್ತೊಂದು ಉದ್ದೇಶ. ಸೈನಿಕರು ಯುದ್ಧಭೂಮಿಯಲ್ಲಿ ಬದುಕುಳಿಯುವಿಕೆಯ ಸಮಯವನ್ನು ಹೆಚ್ಚಿಸಲು ಈ ಆಧುನಿಕ ದಿರಿಸು ಪರಿಚಯಿಸಲಾಗಿದೆ ಎನ್ನಲಾಗುತ್ತಿದೆ. ಸೈನಿಕರು ಬಳಸುವ ರೀತಿಯ ಸಮವಸ್ತ್ರವನ್ನು ಇತರ ಅನಧಿಕೃತ ಪಡೆಗಳು ಧರಿಸುವುದನ್ನು ಸೇನೆ ಆಕ್ಷೇಪಿಸುತ್ತಿತ್ತು. ಅನೇಕ ಬಾರಿ ಈ ಬಗ್ಗೆ ದನಿ ಎತ್ತಲಾಗಿತ್ತು ಎಂದು ಅಧಿಕಾರಿಯೊಬ್ಬರು ಹೇಳುತ್ತಾರೆ. ಈ ದಿಸೆಯಲ್ಲಿ ಬದಲಾವಣೆ ಅಗತ್ಯವಿತ್ತು ಎನ್ನುತ್ತಾರೆ ಅವರು.

ಸೇನಾ ಸಮವಸ್ತ್ರ ಬದಲಾವಣೆ ಸರಿದಂತೆ, ವಿಶ್ವದ ನಾನಾ ದೇಶಗಳ ಸೈನ್ಯವನ್ನು ಆಧುನೀಕರಿಸಲಾಗಿದೆ. ಯುದ್ಧೋಪಕರಣ ಖರೀದಿ, ಮಲ್ಟರ್ಪ್-ಗೇರಿಸುವುದು, ವಿವಿಧ ಸಲಕರಣೆಗಳ ಖರೀದಿ ಪ್ರಕ್ರಿಯೆಯು ತೀವ್ರಗೊಂಡಿದೆ. ಮುಂಬರುವ ದಿನಗಳಲ್ಲಿ ತಂತ್ರಜ್ಞಾನಾಧಾರಿತ ಯುದ್ಧದ ಪ್ರಸಂಗಗಳನ್ನು ಎದುರಿಸಲು ಸಜ್ಜಾಗುತ್ತಿವೆ. ಈ ದಿಸೆಯಲ್ಲಿ ಭಾರತವೂ ಹೆಜ್ಜೆ ಇರಿಸಿದೆ.

ಸೇನಾ ಮುಖ್ಯಸ್ಥ ಎಂ.ಎಂ. ನರವಣೆ ಅವರ ಎದುರು 2020ರ ಜನವರಿಯಲ್ಲಿ ಸಮವಸ್ತ್ರ ಬದಲಿಸುವ ಪ್ರಸ್ತಾವ ಬಂದಿತ್ತು. ಹೊಸ ವಿನ್ಯಾಸವನ್ನು ಜಾರಿಗೊಳಿಸುವ ಮುನ್ನ, ಸಂಬಂಧಪಟ್ಟವರ ಜೊತೆ ಹಲವು ಸುತ್ತಿನ ಮಾತುಕತೆಗಳು ನಡೆದವು. ವಿವಿಧ ದೇಶಗಳ ಸೇನಾ ಸಮವಸ್ತ್ರಗಳ ಬಗ್ಗೆ ಅಧ್ಯಯನವನ್ನೂ ನಡೆಸಲಾಗಿದೆ. ಹೊಸ ಸಮವಸ್ತ್ರವು ಅಮೆರಿಕ ಸೈನ್ಯದ ಸೈನಿಕರ ಡಿಜಿಟಲ್ ಮುದ್ರಣದ ಮಾದರಿಯನ್ನು ಹೋಲುತ್ತದೆ.

ಸೈನಿಕರು ದೇಶದ ವಿಶಿಷ್ಟ ಹವಾಗುಣದ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಯುದ್ಧ, ಪರ್ವತಾರೋಹಣ, ಕಣಿವೆ ಭೂಪ್ರದೇಶಗಳಲ್ಲಿ ಗಸ್ತು, ಶೀತ ವಾತಾವರಣದಲ್ಲಿ ಕರ್ತವ್ಯ, ಶುಷ್ಕ ಎನಿಸುವ ಜಾಗಗಳಲ್ಲಿ ಕೆಲಸ, ಹವಾಮಾನ ವೈಪರೀತ್ಯ ನಿರ್ವಹಣೆಯಂತಹ ಕರ್ತವ್ಯಗಳನ್ನು ನಿಭಾಯಿಸಬೇಕಿರುತ್ತದೆ. ಈ ಎಲ್ಲ ವಿಚಾರಗಳಲ್ಲಿ ಸೈನಿಕರು ಧರಿಸುವ ಸಮವಸ್ತ್ರ ಅತಿಮುಖ್ಯ ಪಾತ್ರ ವಹಿಸುತ್ತದೆ. ಸೈನಿಕರ ಆತ್ಮಸ್ಥೈರ್ಯ ಹೆಚ್ಚಿಸುವಲ್ಲಿ ಆರಾಮದಾಯಕ ಉಡುಗೆಗಳ ಪಾತ್ರ ಮಹತ್ವದ್ದು ಎನ್ನುತ್ತಾರೆ ತಜ್ಞರು.

ಭಾರತದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಅವಧಿಯಲ್ಲಿ ಸಾಂಪ್ರದಾಯಿಕ ಸೇನಾ ಸಮವಸ್ತ್ರವನ್ನು ಪರಿಚಯಿಸಲಾಗಿತ್ತು. ಆಗ, ಬಂಗಾಳ, ಬಾಂಬೆ ಹಾಗೂ ಮದ್ರಾಸ್ ಪ್ರಸಿಡೆನ್ಸಿಗೆ ಪ್ರತ್ಯೇಕ ಸಮವಸ್ತ್ರ ಇದ್ದವು. 1857ರ ಸೇನಾ ದಂಗೆಯ ಬಳಿಕ ಸಮವಸ್ತ್ರ ಬದಲಿಸಲಾಯಿತು. 1947ರಲ್ಲಿ ದೇಶ ವಿಭಜನೆಯಾದ ಬಳಿಕ, ಭಾರತದ ಸೇನೆಗೆ ಹೊಸ ಸಮವಸ್ತ್ರ ಪರಿಚಯಿಸಲಾಯಿತು. 1962ರ ಯುದ್ಧದ ಬಳಿಕ ಮತ್ತೊಮ್ಮೆ ದಿರಿಸು ಬದಲಾಯಿತು. ಲಡಾಖ್‌ನಂತಹ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುವ ಸೈನಿಕರಿಗೆ ವಿಶೇಷ ವಸ್ತ್ರ ವಿನ್ಯಾಸಗೊಳಿಸಲಾಯಿತು. 1980ರಲ್ಲಿ ಕಾಟನ್ ಆಲಿವ್ ಬಟ್ಟೆಗಳನ್ನು ಬದಲಿಸಲಾಗಿತ್ತು.

ಎನ್‌ಐಎಫ್‌ಟಿ ವಿನ್ಯಾಸ

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯ (ಎನ್‌ಐಎಫ್‌ಟಿ) 12 ಜನರ ತಂಡವು ಈ ಸಮವಸ್ತ್ರವನ್ನು ವಿನ್ಯಾಸ ಮಾಡಿದೆ. ಸಂಸ್ಥೆಯ 7 ಪ್ರೊಫೆಸರ್‌ಗಳು, ಮೂವರು ವಿದ್ಯಾರ್ಥಿಗಳು ಮತ್ತು ಇಬ್ಬರು ಹಳೆಯ ವಿದ್ಯಾರ್ಥಿಗಳು ಈ ತಂಡದಲ್ಲಿ ಇದ್ದರು. ವಿವಿಧ ರೀತಿಯ ಬಟ್ಟೆಯ ಸಂಯೋಜನೆ, ವಿನ್ಯಾಸ, ಬಣ್ಣಗಳ ವಿನ್ಯಾಸದ 17 ಮಾದರಿಗಳನ್ನು ಈ ತಂಡವು ಸಿದ್ಧಪಡಿಸಿತ್ತು.

ಸೇನೆಯ ಕಮಾಂಡೆಂಟ್ ರ‍್ಯಾಂಕ್‌ನ ಅಧಿಕಾರಿಗಳು 17ರಲ್ಲಿ ಐದು ಮಾದರಿಗಳನ್ನು ಅಂತಿಮಗೊಳಿಸಿದ್ದರು. ಈ ಐದರಲ್ಲಿ ಒಂದನ್ನು ಸೇನೆಯ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಅವರು ಸಮವಸ್ತ್ರವನ್ನಾಗಿ ಆಯ್ಕೆ ಮಾಡಿದ್ದಾರೆ ಎಂದು ಸೇನೆಯ ಮೂಲಗಳು ಹೇಳಿವೆ.

ಈ ಸಮವಸ್ತ್ರವನ್ನು ವಿನ್ಯಾಸ ಮಾಡುವ ಮುನ್ನ ನಾಲ್ಕು ಪ್ರಮುಖ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ಸೇನೆಯು ಹೇಳಿತ್ತು. ಅವುಗಳನ್ನು '4ಸಿ' ಎಂದು ಕರೆಯಲಾಗಿತ್ತು. ಅವೆಂದರೆ, 1.ಕಂಫರ್ಟ್ (ಆರಾಮ), 2.ಕ್ಲೈಮೇಟ್ (ವಾತಾವರಣ), 3.ಕ್ಯಾಮೊಫ್ಲಾಜ್ (ಛದ್ಮ) ಮತ್ತು 4.ಕಾಂಫಿಡೆನ್ಶಿಯಲಿಟಿ (ಗೌಪ್ಯತೆ). ಈ ಅಂಶಗಳನ್ನು ಗರಿಷ್ಠ ಮಟ್ಟದಲ್ಲಿ ಪೂರೈಸಿದ ಮಾದರಿಯನ್ನು ಸೇನೆಯು ಆಯ್ಕೆ ಮಾಡಿದೆ.

ಈ ಹೊಸ ಸಮವಸ್ತ್ರವನ್ನು 12 ಲಕ್ಷ ಸೈನಿಕರಿಗೆ ಹಂತಹಂತವಾಗಿ ಬಳಕೆಗೆ ತರಲಾಗುತ್ತದೆ.



ಸೇನಾ ದಿನಾಚರಣೆಯಲ್ಲಿ ಹೊಸ ಸಮವಸ್ತ್ರ ತೊಟ್ಟ ಸೈನಿಕರು ಪಥಸಂಚಲನ ನಡೆಸಿದ್ದರು –ಪಿಟಿಐ ಚಿತ್ರ

ಭಾರತದ ಸೈನಿಕರಿಗೆ ಹೊಸ ಸಮರ ದಿರಿಸು

• ಜಯಸಿಂಹ ಆರ್, ಅಮೃತ್ ಕಿರಣ್ ಬಿ.ಎಂ.

15% ಈಗ ಬಳಕೆಯಲ್ಲಿರುವ ಸಮವಸ್ತ್ರಕ್ಕಿಂತ ಹೊಸ ಸಮವಸ್ತ್ರದ ತೂಕದಲ್ಲಿ ಆಗಿರುವ ಇಳಿಕೆ

23% ಈಗ ಬಳಕೆಯಲ್ಲಿರುವ ಸಮವಸ್ತ್ರಕ್ಕಿಂತ ಹೊಸ ಸಮವಸ್ತ್ರದ ಗಡಸುತನದಲ್ಲಿ ಆದ ಏರಿಕೆ

ಭಾರತೀಯ ಸೈನಿಕರಿಗಾಗಿ ಸೇನೆಯು ನೂತನ ಸಮರ ಸಮವಸ್ತ್ರವನ್ನು (ಕಾಂಬ್ಯಾಟ್ ಯೂನಿಫಾರ್ಮ್) ಸಿದ್ಧಪಡಿಸಿದೆ. ಇದೇ ಜನವರಿ 15ರಂದು ನಡೆದ ಸೇನಾ ದಿನಾಚರಣೆಯಲ್ಲಿ ಈ ಸಮವಸ್ತ್ರವನ್ನು ಅನಾವರಣ ಮಾಡಲಾಗಿದೆ. ಸೇನೆಗಳು ತಮ್ಮ ಸಮವಸ್ತ್ರಗಳನ್ನು ಆಗಾಗ್ಗೆ ಬದಲಿಸುವುದು ರೂಢಿಯಲ್ಲಿದೆ. ಭಾರತೀಯ ಸೇನೆಯ ಸಮವಸ್ತ್ರವನ್ನೂ ಹೀಗೆ ಹಲವು ಬಾರಿ ಬದಲಿಸಲಾಗಿದೆ. ಕೊನೆಯ ಬಾರಿ ಸಮವಸ್ತ್ರವನ್ನು ಬದಲಿಸಿದ್ದು 2008ರಲ್ಲಿ. ಈಗ ಮತ್ತೆ ಸಮವಸ್ತ್ರವನ್ನು ಬದಲಿಸಲಾಗಿದೆ.

ಈವರೆಗಿನ ಬದಲಾವಣೆಗಳಲ್ಲಿ ಕೇವಲ ಬಣ್ಣ ಮತ್ತು ಸಮವಸ್ತ್ರಗಳಲ್ಲಿನ ಸವಲತ್ತುಗಳ ಸೇರ್ಪಡೆಯನ್ನು ಮಾತ್ರ ಮಾಡಲಾಗಿತ್ತು. ಆದರೆ ಈಗಿನ ಬದಲಾವಣೆಯಲ್ಲಿ ಸಮವಸ್ತ್ರದ ವಿನ್ಯಾಸವನ್ನೇ ಬದಲಿಸಲಾಗಿದೆ.

ಗಡಿಗಳಲ್ಲಿ, ಸಂಘರ್ಷ ಪೀಡಿತ ಪ್ರದೇಶಗಳಲ್ಲಿ ಇರುವವರಿಗೆ ಮಾತ್ರ ಈ ಸಮವಸ್ತ್ರವನ್ನು ನೀಡಲಾಗುತ್ತದೆ. ಉಳಿದಂತೆ ಒಳನಾಡಿನಲ್ಲಿ ಸೇವೆಯಲ್ಲಿರುವ ಸೈನಿಕರಿಗೆ ಈಗ ಇರುವ ಆಲಿವ್ ಹಸಿರು ಸಮವಸ್ತ್ರವನ್ನೇ ಮುಂದುವರಿಸಲಾಗುತ್ತದೆ. ಇದೇ 26ರ ಗಣರಾಜ್ಯೋತ್ಸವದಲ್ಲಿ ಸೇನೆಯ ಆರಂಭಿಕ ದಿನಗಳಿಂದ ಬಳಕೆಯಲ್ಲಿದ್ದ ಎಲ್ಲಾ ವಿನ್ಯಾಸದ ಸಮವಸ್ತ್ರ ಧರಿಸಿದ ಮತ್ತು ಬಳಕೆಯಲ್ಲಿದ್ದ ರೈಫಲ್‌ಗಳನ್ನು ಹೊತ್ತ ಸೈನಿಕರ ತಂಡಗಳು ಪಥಸಂಚಲನ ನಡೆಸಲಿವೆ.

ಬದಲಾವಣೆಗಳು

- ಈ ಮೊದಲು ಇದ್ದ ಸಮವಸ್ತ್ರದಲ್ಲಿ ಆಲಿವ್ ಹಸಿರು ಮತ್ತು ಮಣ್ಣಿನ ಬಣ್ಣಗಳನ್ನು ಬಳಸಿಕೊಳ್ಳಲಾಗಿದೆ. ಹೊಸ ಸಮವಸ್ತ್ರದಲ್ಲೂ ಇದೇ ಬಣ್ಣಗಳನ್ನು ಉಳಿಸಿಕೊಳ್ಳಲಾಗಿದೆ. ಆದರೆ ವಿನ್ಯಾಸಗಳನ್ನು ಸಂಪೂರ್ಣವಾಗಿ ಬದಲಿಸಲಾಗಿದೆ. ಈ ಮೊದಲು ಕತ್ತರಿಸಿದ ಎಲೆಗಳ ಮಾದರಿಯಲ್ಲಿನ ವಿನ್ಯಾಸವು ಇತ್ತು. ಈಗ ಅವುಗಳನ್ನು ಡಿಜಿಟಲ್ ಪ್ಯಾಟ್ರನ್‌ನಂತೆ ವಿನ್ಯಾಸ ಮಾಡಲಾಗಿದೆ
- ಈ ಮೊದಲು ಇದ್ದ ಸಮವಸ್ತ್ರದಲ್ಲಿ ಅಂಗಿ ಮತ್ತು ಪ್ಯಾಂಟ್ ಮಾತ್ರ ಇತ್ತು. ಅಂಗಿಯನ್ನು ಪ್ಯಾಂಟ್‌ನ ಒಳಗೆ ಹಾಕಬೇಕಿತ್ತು. ಆದರೆ ಹೊಸ ಸಮವಸ್ತ್ರದಲ್ಲಿ ಟಿ-ಶರ್ಟ್ ಮತ್ತು ಪ್ಯಾಂಟ್ ಇದೆ. ಟಿ-ಶರ್ಟ್ ಅನ್ನು ಪ್ಯಾಂಟ್‌ನೊಳಗೆ ಹಾಕಬೇಕು. ಆನಂತರ ಮೇಲೆ ಜಾಕೆಟ್ ಧರಿಸಬೇಕು. ಜಾಕೆಟ್ ಅನ್ನು ಪ್ಯಾಂಟ್‌ನ ಒಳಗೆ ಹಾಕುವುದಕ್ಕೆ ಅವಕಾಶ ಇಲ್ಲ
- ಪ್ಯಾಂಟ್‌ನಲ್ಲಿ ಎಲಾಸ್ಟಿಕ್ ಮತ್ತು ಗುಬ್ಬಿಗಳು ಇವೆ. ಹೀಗಾಗಿ ಇವುಗಳನ್ನು ಸೈನಿಕರು ತಮ್ಮ ಗಾತ್ರಕ್ಕೆ ಸರಿಯಾಗಿ ಹೊಂದಿಸಿಕೊಳ್ಳಲು ಸಾಧ್ಯವಾಗುತ್ತದೆ
- ಇಡೀ ಸಮವಸ್ತ್ರದ ಬಟ್ಟೆಯನ್ನು ಬದಲಿಸಲಾಗಿದೆ. ಶೇ 70ರಷ್ಟು ಹತ್ತಿ ಮತ್ತು ಶೇ 30ರಷ್ಟು ಪಾಲಿಸ್ಟರ್ ಸಂಯೋಜನೆಯ ಬಟ್ಟೆಯನ್ನು ಬಳಸಲಾಗಿದೆ. ಇದರಿಂದ ಸಮವಸ್ತ್ರಗಳನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಒಣಗಿಸಲು ಸಾಧ್ಯವಾಗುತ್ತದೆ
- ದೇಶದ ಎಲ್ಲಾ ಪ್ರದೇಶಗಳಲ್ಲಿನ ವಾತಾವರಣವನ್ನು ಗಮನದಲ್ಲಿ ಇಟ್ಟುಕೊಂಡು, ಅಲ್ಲಿಗೆ ಹೊಂದಿಕೆಯಾಗುವಂತೆ ಸಮವಸ್ತ್ರವನ್ನು ವಿನ್ಯಾಸ ಮಾಡಲಾಗಿದೆ
- ಮಹಿಳಾ ಸೈನಿಕರಿಗಾಗಿಯೇ ಪ್ರತ್ಯೇಕ ಸಮವಸ್ತ್ರವನ್ನು ವಿನ್ಯಾಸ ಮಾಡಲಾಗಿದೆ

ಆಧಾರ: ಪಿಟಿಐ

ಸೇನಾ ಸಮವಸ್ತ್ರ ತಯಾರಿ ಗುತ್ತಿಗೆ ವಿವಾದ

ಸೈನಿಕರಿಗೆ ಯುದ್ಧದ ಹೊಸ ಸಮವಸ್ತ್ರವನ್ನು ಅನಾವರಣಗೊಳಿಸಿದ ನಂತರ, ಅವುಗಳ ತಯಾರಿ ಗುತ್ತಿಗೆ ಕುರಿತು ವಿವಾದ ಎದ್ದಿದೆ. ಸಮವಸ್ತ್ರ ವಿನ್ಯಾಸ ಮಾಡಲು ಹಾಗೂ ತಯಾರಿಸಲು ಖಾಸಗಿಯವರಿಗೆ ಅವಕಾಶ ಮಾಡಿಕೊಟ್ಟಿರುವುದನ್ನು ಸರ್ಕಾರಿ ಸಂಸ್ಥೆಯಾದ ಆರ್ಡಿನನ್ಸ್ ಕ್ಲಾತಿಂಗ್ ಫ್ಯಾಕ್ಟರಿಯ (ಓಸಿಎಫ್) ಉದ್ಯೋಗಿಗಳು ಆಕ್ಷೇಪಿಸಿದ್ದಾರೆ. ಇಂತಹ ಅತಿದೊಡ್ಡ ಗುತ್ತಿಗೆಯು ತಮಗೇ ಸಿಗಬೇಕು ಎಂದು ಅವರು ಪಟ್ಟು ಹಿಡಿದಿದ್ದಾರೆ.

ಖಾಸಗಿಯವರು ವಸ್ತ್ರ ವಿನ್ಯಾಸ ಮಾಡಿದ್ದನ್ನು ಸರ್ಕಾರ ಅಂತಿಮಗೊಳಿಸಿದೆ ಎಂದು ದೇಶದ ವಿವಿಧ ಭಾಗಗಳಲ್ಲಿ ನೆಲೆಗೊಂಡಿರುವ ವಿವಿಧ ಆರ್ಡಿನೆನ್ಸ್ ಬಟ್ಟೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ನೌಕರರು ಆರೋಪಿಸಿದ್ದಾರೆ. ಆದರೆ, ಸೈನಿಕರಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹಾಗೂ ಗುಣಮಟ್ಟದ ವಸ್ತ್ರಗಳನ್ನು ದೊರಕಿಸುವ ಉದ್ದೇಶದಿಂದ ಮುಕ್ತ ಟೆಂಡರ್ ಆಹ್ವಾನಿಸಲಾಗಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ (ಎನ್‌ಐಎಫ್‌ಟಿ) ಜೊತೆ ಸಮಾಲೋಚಿಸಿ ಸಮವಸ್ತ್ರವನ್ನು ವಿನ್ಯಾಸಗೊಳಿಸಲಾಗಿದೆ.

ಸರ್ಕಾರ ಹಾಗೂ ಸೇನೆಯು ಖಾಸಗಿಯವರ ಅಡಿಯಾಳಾಗಿ ಕೆಲಸ ಮಾಡುತ್ತಿದೆ ಎಂದು ತಮಿಳುನಾಡಿನ ಘಟಕದ ಉದ್ಯೋಗಿಗಳು ಆರೋಪಿಸಿದ್ದಾರೆ. ಆರ್ಡಿನನ್ಸ್ ಕಾರ್ಖಾನೆಗಳು ಉಳಿಯಬೇಕಾದರೆ, ಅವುಗಳಿಗೆ ಗುತ್ತಿಗೆ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ. ಸಮವಸ್ತ್ರ ವಿನ್ಯಾಸ ಮಾಡುವ ಹಾಗೂ ಗುಣಮಟ್ಟದ ಬಟ್ಟೆ ತಯಾರಿಸುವ ಸಾಮರ್ಥ್ಯವನ್ನು ಸರ್ಕಾರಿ ಕಾರ್ಖಾನೆಗಳು ಹೊಂದಿವೆ ಎಂದು ಅವರು ಪ್ರತಿಪಾದಿಸಿದ್ದಾರೆ. ಬೃಹತ್ ಆರ್ಡಿನನ್ಸ್ ಫ್ಯಾಕ್ಟರಿ ಬೋರ್ಡ್ ಅನ್ನು ಕಳೆದ ವರ್ಷ ಏಳು ಘಟಕಗಳಾಗಿ ವಿಭಜಿಸಿದ್ದಕ್ಕೂ ಉದ್ಯೋಗಿಗಳು ಬೇಸರ ವ್ಯಕ್ತಪಡಿಸಿದ್ದರು.

ಈ ವಿಚಾರದಲ್ಲಿ ಮಧ್ಯಪ್ರವೇಶಿಸುವಂತೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ನೌಕರರು ಮನವಿ ಮಾಡಿದ್ದಾರೆ. ಸಿಪಿಎಂ ಸೇರಿದಂತೆ ವಿವಿಧ ಪಕ್ಷಗಳೂ ಈ ಬಗ್ಗೆ ದನಿ ಎತ್ತಿವೆ.

ಸರಿಯಾದ ಬೆಲೆ, ಗುಣಮಟ್ಟ ಜೊತೆಗೆ ನಿರಂತರವಾಗಿ ಸರಬರಾಜು ಸಾಮರ್ಥ್ಯ ಇರುವವರಿಗೆ ಈ ಗುತ್ತಿಗೆ ವಹಿಸಿಕೊಡುವುದು ಮುಖ್ಯ ಉದ್ದೇಶ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ. 'ಆತ್ಮನಿರ್ಭರ ಭಾರತ್' ಯೋಜನೆ ಅಡಿಯಲ್ಲಿ, ಎಲ್ಲಾ ಖಾಸಗಿ ಸಂಸ್ಥೆಗಳು ಹಾಗೂ ಸರ್ಕಾರಿ ಆರ್ಡಿನನ್ಸ್ ಘಟಕಗಳು ಮುಕ್ತ ಟೆಂಡರ್ ಮತ್ತು ಪಾರದರ್ಶಕ ಖರೀದಿ ಪ್ರಕ್ರಿಯೆಯಲ್ಲಿ ಭಾವಹಿಸಲು ಅರ್ಹರಾಗಿರುತ್ತವೆ ಎಂದು ಮೂಲಗಳು ತಿಳಿಸಿವೆ.

ಓಸಿಎಫ್‌ಗಳಲ್ಲಿ ಈಗಾಗಲೇ ಗುತ್ತಿಗೆ ಪಡೆದಿರುವ ಸಾಕಷ್ಟು ಕೆಲಸಗಳು ಬಾಕಿ ಇವೆ ಎನ್ನಲಾಗಿದೆ. 2023ರ ಹೊತ್ತಿಗೆ ಸೇನೆಗೆ ಸಮವಸ್ತ್ರ ಪೂರೈಕೆ ಆಗಲಿದೆ. ಸೇನಾ ಬಟ್ಟೆ ಕಾರ್ಖಾನೆಗಳು ಶಾಜಹಾನ್‌ಪುರ, ಹಜರತ್‌ಪುರ ಮತ್ತು ತಮಿಳುನಾಡಿನ ಆವಡಿಯಲ್ಲಿ ನೆಲೆಗೊಂಡಿವೆ. ಇವು ದೀರ್ಘಾವಧಿ ಬಾಳಿಕೆಯ, ಉತ್ತಮ ಗುಣಮಟ್ಟದ ಸಮವಸ್ತ್ರ ತಯಾರಿಕೆಗೆ ಹೆಸರುವಾಸಿಯಾಗಿವೆ.



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 26

ಬ್ರಹ್ಮ-ವಿಷ್ಣು ಯುದ್ಧಕ್ಕೆ ತಲ್ಲಣಿಸಿದ ಜಗತ್ತು

ಪರಮೇಶ್ವರನನ್ನು ಏಕೆ ಲಿಂಗ ಮತ್ತು ಮೂರ್ತಿಗಳ ರೂಪದಲ್ಲಿ ಪೂಜಿಸಬೇಕೆಂಬ ಬಗ್ಗೆ ಸನತ್ಕುಮಾರನಿಗೆ ಮತ್ತಷ್ಟು ವಿವರ ನೀಡುತ್ತಾನೆ ನಂದಿಕೇಶ್ವರ; ಹಿಂದಿನ ಕಲ್ಪದಲ್ಲಿ ನಡೆದ ಕಥೆಯೊಂದನ್ನು ಹೇಳುತ್ತಾನೆ.

ಒಮ್ಮೆ ವಿಷ್ಣು ತನ್ನ ಪತ್ನಿ ಲಕ್ಷ್ಮಿಯೊಂದಿಗೆ ಶೇಷಶಯನದಲ್ಲಿದ್ದಾಗ ಅಕಸ್ಮಾತ್ತಾಗಿ ಬ್ರಹ್ಮದೇವ ಬರುತ್ತಾನೆ. ಆದರೆ ವಿಷ್ಣು ಎದ್ದು ಸ್ವಾಗತಿಸದೆ ಮಲಗಿಯೇ ಇರುತ್ತಾನೆ. ಇದರಿಂದ ಕೋಪಗೊಂಡ ಬ್ರಹ್ಮ 'ನನ್ನನ್ನು ನೋಡಿದರೂ ಗರ್ವಿಷ್ಠನಾಗಿ ಮಲಗಿರುವೆಯಾ? ಪ್ರಾಯಶ್ಚಿತ್ತ ಅನುಭವಿಸಬೇಕಾಗುತ್ತದೆ' ಎಂದು ಎಚ್ಚರಿಸುತ್ತಾನೆ. ಬ್ರಹ್ಮನ ಮಾತಿನಿಂದ ಕೋಪ ಬಂದರೂ ವಿಷ್ಣು ಹೊರಗೆ ತೋರಿಸಿಕೊಳ್ಳದೆ ಶೇಷಸರ್ಪದ ಮೇಲೆ ಮಲಗಿಕೊಂಡೇ ತನ್ನ ಮುಂದೆ ಇದ್ದ ಪೀಠ ತೋರಿಸಿ ಕುಳಿತುಕೊ ಎನ್ನುತ್ತಾನೆ. ಇದರಿಂದ ಮತ್ತಷ್ಟು ಕೋಪಗೊಂಡ ಬ್ರಹ್ಮ 'ಎಲೈ ವಿಷ್ಣು, ಕಾಲಮಹಿಮೆಯಿಂದ ನಿನಗೆ ತುಂಬಾ ಗರ್ವ ಬಂದಿದೆ. ನಾನು ಜಗತ್ತಿಗೆ ಪಿತಾಮಹ. ನಿನ್ನನ್ನು, ಈ ಜಗತ್ತನ್ನೂ ರಕ್ಷಿಸುವವನು ನಾನು. ಇದನ್ನೆಲ್ಲಾ ನೀನು ಮರೆತು, ನನ್ನನ್ನು ಅಗೌರವಿಸುತ್ತಿದ್ದೀಯಾ' ಎಂದು ಆಕ್ರೋಶಿಸುತ್ತಾನೆ.

'ನನ್ನ ನಾಭಿಕಮಲದಿಂದ ಜನಿಸಿದ ಪುತ್ರ ನೀನು. ಜಗತ್ತೆಲ್ಲವೂ ನನ್ನಲ್ಲಿಯೇ ಇದೆ. ಹೀಗಿದ್ದರೂ ನನ್ನ ಬಗ್ಗೆ ಕೇವಲವಾಗಿ ಮಾತನಾಡುತ್ತಿರುವೆಯಲ್ಲಾ?' ಅಂತ ಪ್ರಶ್ನಿಸುತ್ತಾನೆ. ಇದಕ್ಕೆ ಬ್ರಹ್ಮ 'ತಾನು ಜಗತ್ತಿನ ಸೃಷ್ಟಿಕರ್ತ, ನಾನೇ ಶ್ರೇಷ್ಠ' ಅಂದರೆ, ವಿಷ್ಣು ತಾನು ಜಗತ್ತನ್ನು ರಕ್ಷಿಸುವವನು. ನಾನೇ ಶ್ರೇಷ್ಠ' ಅಂತ ವಾದ ಮಾಡುತ್ತಾನೆ. ವಾದ ತಾರಕಕ್ಕೇರಿ ಯುದ್ಧಸನ್ನದ್ಧರಾಗುತ್ತಾರೆ. ಬ್ರಹ್ಮ ಹಂಸವನ್ನೇರಿ, ವಿಷ್ಣು ಗರುಡವನ್ನೇರಿ ಯುದ್ಧ ಮಾಡತೊಡಗುತ್ತಾರೆ. ಇವರೊಂದಿಗೆ ಬ್ರಹ್ಮಗಣಗಳೂ ಮತ್ತು ವೈಷ್ಣವಗಣಗಳೂ ಪರಸ್ಪರ ಯುದ್ಧಕ್ಕಿಳಿಯುತ್ತಾರೆ. ಆಗ ಇಂದ್ರಾದಿ ದೇವತೆಗಳೆಲ್ಲರೂ ಬ್ರಹ್ಮ-ವಿಷ್ಣುವಿನ ಯುದ್ಧ ನೋಡಲು ವಿಮಾನ ಏರಿ ಬರುತ್ತಾರೆ. ಯುದ್ಧದಲ್ಲಿ ವಿಷ್ಣು ಕೋಪೋದ್ರಿಕ್ತನಾಗಿ, ಬ್ರಹ್ಮನ ಎದೆಗೆ ಸಹಿಸಲಸಾಧ್ಯವಾದ ಅಸಂಖ್ಯ ಬಾಣ, ಅನೇಕ ವಿಧದ ಅಸ್ತ್ರಗಳನ್ನು ಪ್ರಯೋಗಿಸುತ್ತಾನೆ. ಇದಕ್ಕೆ ಪ್ರತಿಯಾಗಿ ಬ್ರಹ್ಮ ಸಹ ಸಹಿಸಲಸಾಧ್ಯವಾದಂಥ ಅನೇಕ ಬಗೆಯ ಬಾಣಗಳನ್ನೂ, ಅಗ್ನಿಯಂತೆ ಉರಿಯುತ್ತಲಿರುವ ಅಸ್ತ್ರಗಳನ್ನೂ, ವಿಷ್ಣುವಿನ ಎದೆ ಮೇಲೆ ಪ್ರಯೋಗಿಸುತ್ತಾನೆ.

ಬ್ರಹ್ಮನ ಬಿರುಸಿನ ಬಾಣದ ಹೊಡೆತಗಳಿಂದ ವಿಚಲಿತನಾದ ವಿಷ್ಣುವು ಮಾಹೇಶ್ವರಾಸ್ತ್ರವನ್ನು ಪ್ರಯೋಗಿಸುತ್ತಾನೆ. ಆಗ ಬ್ರಹ್ಮ ಸಹ ಕೋಪಗೊಂಡು, ಜಗತ್ತನ್ನೇ ಕಂಪಿಸುವಂತಹ ಘೋರವಾದ ಪಾಶುಪತವೆಂಬ ಅಸ್ತ್ರವನ್ನು ವಿಷ್ಣುವಿನ ಎದೆಗೆ ಪ್ರಯೋಗಿಸುತ್ತಾನೆ. ಆಗ ಮಾಹೇಶ್ವರಾಸ್ತ್ರ ಮತ್ತು ಪಾಶುಪತಾಸ್ತ್ರಗಳು ಸಹಿಸಲಸಾಧ್ಯವಾದ ಬೆಂಕಿ-ಬಿರುಗಾಳಿಗಳಾಗಿ ಆಕಾಶವನ್ನೆಲ್ಲಾ ವ್ಯಾಪಿಸಿದುವು. ಭಯಂಕರವಾಗಿ ಬ್ರಹ್ಮ-ನಾರಾಯಣರಿಬ್ಬರು ಪರಸ್ಪರ ಯುದ್ಧ ಮಾಡುತ್ತಿರುವುದನ್ನು ಕಂಡ ದೇವತೆಗಳೆಲ್ಲರೂ ಮುಂದೇನಾಗುವುದೋ ಅಂತ ಭಯಭೀತರಾದರು. ಜಗತ್ತನ್ನು ರಕ್ಷಿಸಬೇಕಾದ ಇಬ್ಬರೂ ಕೋಪಕ್ಕೆ ಬುದ್ಧಿ ಕೊಟ್ಟು ಕಾದಾಡುತ್ತಿರುವುದು ದೇವತೆಗಳಿಗೆ ಸರಿ ಕಾಣಲಿಲ್ಲ. ಇವರಿಬ್ಬರ ಕಾದಾಟದಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ. ಇವರಿಬ್ಬರನ್ನು ತಡೆಯುವ ಶಕ್ತಿ ಬ್ರಹ್ಮಸ್ವರೂಪಿಯಾದ ಶಿವನ ಹೊರತು ಬೇರಾರಿಗೂ ಸಾಧ್ಯವಿಲ್ಲ ಅಂತ ಕೈಲಾಸಶಿಖರಕ್ಕೆ ಹೋಗುತ್ತಾರೆ.

ಪರಮೇಶ್ವರನ ವಾಸಸ್ಥಾನವಾದ ಆ ಕೈಲಾಸಶಿಖರದ ಶಿವನ ಮನೆಯನ್ನು ಪ್ರವೇಶಿಸಿದ ದೇವತೆಗಳು, ಓಂಕಾರಸ್ವರೂಪನಾದ ಶಿವನಿಗೆ ನಮಸ್ಕರಿಸುತ್ತಾರೆ. ಶಿವನು ಸಭಾಮಂಟಪದಲ್ಲಿದ್ದ ಮಣಿಮಯವಾದ ಆಸನದಲ್ಲಿ ಪಾರ್ವತಿಯೊಡನೆ ಕುಳಿತಿದ್ದರೆ, ಅವನ ಸುತ್ತಲೂ ಪ್ರಮಥಗಣಗಳು ನೆರೆದಿದ್ದರು. ವಿಶೇಷವಾದ ಜ್ಞಾನವುಳ್ಳ ಸ್ತ್ರೀಯರು ತುಂಬಾ ಭಕ್ತಿಯಿಂದ ಶಿವನಿಗೆ ಬೀಸಣಿಗೆಯಿಂದ ಗಾಳಿಯನ್ನು ಬೀಸುತ್ತಿದ್ದರೆ, ವೇದಪುರುಷರು ಸದಾ ಸ್ತುತಿಸುತ್ತಿದ್ದರು. ಈ ರೀತಿ ಶೋಭಿಸುತ್ತಿದ್ದ ಈಶ್ವನನ್ನು ನೋಡಿ ದೇವತೆಗಳು ದೂರದಲ್ಲಿಯೇ ನಮಸ್ಕರಿಸಿ ಭಕ್ತಿಯಿಂದ ನಿಂತಿದ್ದರು. ಗಣಗಳ ಮೂಲಕ ಇಂದ್ರ ಮತ್ತಿತರ ದೇವತೆಗಳನ್ನು ತನ್ನ ಸಮೀಪಕ್ಕೆ ಕರೆಸಿಕೊಂಡ ಮಹಾಶಿವ ಕುಶಲ ವಿಚಾರಿಸಿದ. ಆಗ ದೇವತೆಗಳು ವಿಷ್ಣು-ಬ್ರಹ್ಮರ ಯುದ್ಧಮಾಡುತ್ತಿರುವ ವಿಷಯ ತಿಳಿಸಿ, ಹೇಗಾದರೂ ಇವರಿಬ್ಬರ ಯುದ್ಧ ನಿಲ್ಲಿಸಿ ಜಗತ್ತನ್ನು ಕಾಪಾಡಬೇಕೆಂದು ಕೋರುತ್ತಾರೆ. ದೇವತೆಗಳ ಕೋರಿಕೆಯನ್ನು ಮನ್ನಿಸಿದ ಶಿವ, ತನ್ನ ಗಣಗಳೊಂದಿಗೆ ಯುದ್ಧಭೂಮಿಗೆ ಬರುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿನ ಸ್ಯಾನ್ ಡಿಯಾಗೋದಲ್ಲಿ ಹಾಲು ಮಾರುವ ವ್ಯಕ್ತಿ 800 ಮಕ್ಕಳ ತಂದೆ ಎಂಬುದು ಗೊತ್ತಾಗಿದೆ. ಈ ಪ್ರದೇಶದಲ್ಲಿ ಹಲವು ಕುಟುಂಬಗಳಲ್ಲಿ ಜನಿಸಿದ ಮಕ್ಕಳಲ್ಲಿ ಪರಸ್ಪರ ಹೋಲಿಕೆಯಿತ್ತು. ಆ ಎಲ್ಲಾ ಮಕ್ಕಳ ಡಿಎನ್‌ಎ ಒಂದೇ ಆಗಿತ್ತು. ಅದೇ ಪ್ರದೇಶದಲ್ಲಿ ಮನೆ ಮನೆಗೆ ಹಾಲು ಹಾಕುತ್ತಿದ್ದ ವ್ಯಕ್ತಿಯ ಡಿಎನ್‌ಎಯನ್ನು ಎಫ್‌ಬಿಐ ಪರಿಶೀಲಿಸಿತು. ಆಗ ಆ ಎಲ್ಲಾ ಮಕ್ಕಳ ತಂದೆ ಆತನೇ ಎಂಬುದು ಗೊತ್ತಾಯಿತು. ಹಾಲು ಮಾರಲು ಮನೆ ಮನೆಗೆ ಹೋಗುತ್ತಿದ್ದ ವ್ಯಕ್ತಿಯು ಅಲ್ಲಿನ ಮಹಿಳೆಯರ ಜತೆ ವಿವಾಹವೇತರ ಸಂಬಂಧ ಇರಿಸಿಕೊಂಡಿದ್ದ ಎಂಬುದು ಗೊತ್ತಾಯಿತು' ಎಂದು ಡೈಲಿ ಮೇಲ್ ವರದಿ ಮಾಡಿದೆ ಎಂಬ ವಿವರಣೆ ಇರುವ ಸುದ್ದಿಗಳನ್ನು ಹಲವು ಮಾಧ್ಯಮಗಳು ಪ್ರಕಟಿಸಿವೆ.

ಆದರೆ ಇದು ಸುಳ್ಳು ಸುದ್ದಿ ಎಂದು ಫ್ಯಾಕ್ಟ್‌ಚೆಕ್ ವೇದಿಕೆ 'ಫ್ಯಾಕ್ಟ್ಲೀ' ಹೇಳಿದೆ. 'ಈ ಸುದ್ದಿ ಪ್ರಕಟಿಸಿರುವ ಸಂಸ್ಥೆ ಡೈಲಿ ಮೇಲ್ ಅಲ್ಲ. ಡೈಲಿ ಮೇಲ್ ರಿಪೋರ್ಟೆಡ್ ಎಂಬ ವಿಡಂಬನಾತ್ಮಕ ಸುದ್ದಿ ಜಾಲತಾಣವು, ಈ ಸುದ್ದಿ ಪ್ರಕಟಿಸಿದೆ. ನಮ್ಮಲ್ಲಿ ಪ್ರಕಟವಾಗುವುದು ವಿಡಂಬನಾತ್ಮಕ ಸುದ್ದಿಗಳು ಎಂದು ಜಾಲತಾಣವೇ ಹೇಳಿಕೊಂಡಿದೆ. ಸುದ್ದಿಯಲ್ಲಿ ಬಳಸಿರುವ ವ್ಯಕ್ತಿಯ ಚಿತ್ರಕ್ಕೂ, ಸುದ್ದಿಗೂ ಸಂಬಂಧವಿಲ್ಲ. ಸ್ಟಾಕ್ ಫೋಟೊ ಜಾಲತಾಣಗಳಲ್ಲಿ ಲಭ್ಯವಿರುವ ಚಿತ್ರವೊಂದನ್ನು ಈ ಸುದ್ದಿಯಲ್ಲಿ ಬಳಸಲಾಗಿದೆ. ಈ ವಿಡಂಬನಾತ್ಮಕ ಸುದ್ದಿಯನ್ನೇ ನೈಜ ಸುದ್ದಿ ಎಂದು ಮಾಧ್ಯಮಗಳು ಪ್ರಕಟಿಸಿವೆ' ಎಂದು ಫ್ಯಾಕ್ಟ್ಲೀ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಮನ-ಬುದ್ಧಿ ಸಂಯೋಗ

ಮತಿ ನಯನದಂತೆ ಮುಂದಿರ್ಪುದನು ನೋಡುವುದು |
ಮಿತವದರ ಕೆಲಸ, ಹೆಳವನ ಚಲನೆಯಂತೆ ||
ಗತಿಶಕ್ತಿಯದಕೆ ಮನವೆಂಬ ಚರಣದ ಬಲದೆ |
ಮತಿಬಿಟ್ಟ ಮನ ಕುರುಡು – ಮಂಕುತಿಮ್ಮ
|| 547 ||

ಪದ-ಅರ್ಥ: ಮತಿ = ಬುದ್ಧಿ, ನಯನ = ಕಣ್ಣು, ಮುಂದಿರ್ಪುದನು = ಮುಂದಿರುವುದನ್ನು, ಹೆಳವ = ಅಂಗವಿಕಲ, ಗತಿಶಕ್ತಿಯದಕೆ = ಗತಿ + ಶಕ್ತಿ + ಅದಕೆ,

ವಾಚ್ಯಾರ್ಥ: ಬುದ್ಧಿ ಕಣ್ಣುಗಳಂತೆ ಮುಂದಿದ್ದನ್ನು ಮಾತ್ರ ಕಾಣುತ್ತದೆ. ಅದರ ಕೆಲಸ ಮಿತವಾದದ್ದು. ಒಂದು ರೀತಿಯಲ್ಲಿ ಹೆಳವನ ನಡಿಗೆಯಂತೆ. ಅದಕ್ಕೆ ವೇಗ ಮತ್ತು ಶಕ್ತಿ ಬರುವುದು ಮನಸ್ಸಿನ ಕಾಲುಗಳಿಂದ. ಆದರೆ ಬುದ್ಧಿಯನ್ನು ತ್ಯಜಿಸಿದ ಮನ ಕುರುಡಾಗಿದ್ದಂತೆ.

ವಿವರಣೆ: ಬುದ್ಧಿ ಎನ್ನುವುದು ಖಾಲೀ ಕ್ಯಾನವಾಸ್ ಇದ್ದ ಹಾಗೆ. ಅದು ತನ್ನಷ್ಟಕ್ಕೆ ತಾನೇ ಚಿತ್ರಗಳನ್ನು ಮೂಡಿಸಿಕೊಳ್ಳುವುದಿಲ್ಲ. ಆಗ ತಾನೇ ಹುಟ್ಟಿದ ಮಗುವಿಗೂ ಬುದ್ಧಿ ಎನ್ನುವುದಿದೆ. ಆದರೆ ಅದು ಏನನ್ನು ಯೋಚಿಸಲಾರದು. ಯಾಕೆಂದರೆ ಅದರಲ್ಲಿ ಏನೂ ಇಲ್ಲ. ವರ್ಷಗಳು ಕಳೆದಂತೆ ಇಂದ್ರಿಯಗಳು ಬಲಿತು ಪ್ರಪಂಚದ ನೂರಾರು ಅನುಭವಗಳನ್ನು ತಂದು ಮನಸ್ಸಿಗೆ ಒಪ್ಪಿಸುತ್ತವೆ. ಅದು ಅವುಗಳನ್ನು ಬುದ್ಧಿಗೆ ಒಪ್ಪಿಸಿ ಸರಿ, ತಪ್ಪುಗಳ ತೀರ್ಮಾನವನ್ನು ಅದಕ್ಕೆ ಬಿಡುತ್ತದೆ. ಖಾಲಿಯಾದ ಕ್ಯಾನವಾಸ್ ಮೇಲೆ ಚಿತ್ರ ಬಿಡಿಸುವುದು ಈ ಮನಸ್ಸು. ಅವೆಲ್ಲ ಅನುಭವಗಳು ಬುದ್ಧಿಯಲ್ಲಿ ಉಳಿದುಬಿಡುತ್ತವೆ. ಬುದ್ಧಿ ತನ್ನ ಗೋದಾಮಿನಲ್ಲಿದ್ದ ಅನುಭವಗಳ ಆಧಾರದ ಮೇಲೆಯೇ ತೀರ್ಮಾನ ತೆಗೆದುಕೊಳ್ಳುವುದು. ತನ್ನ ಸಂಗ್ರಹದಲ್ಲಿಲ್ಲದ ಚಿಂತನೆಯ ಬಗ್ಗೆ ಅದು ಆಲೋಚನೆಯನ್ನು ಮಾಡಲಾರದು. ಕೋಳಿ ಎಂದ ತಕ್ಷಣ, ಬುದ್ಧಿ, ತನ್ನ ಸಂಗ್ರಹದಲ್ಲಿ ಈಗಾಗಲೇ ಇರುವ ಕೋಳಿಯ ಚಿತ್ರವನ್ನು ಗಮನಕ್ಕೆ ತರುತ್ತದೆ. ಆದರೆ 'ಗೆಲ್ಪಾ' ಎನ್ನುವ ಪ್ರಾಣಿ ಹೇಗಿದೆ ಎಂದು ಕೇಳಿದರೆ ಅದು ಏನನ್ನೂ ಹೇಳಲಾರದು. ಯಾಕೆಂದರೆ ಅದರ ಸಂಗ್ರಹದಲ್ಲಿ ಅದರ ಚಿತ್ರ ಇಲ್ಲ. ಅದಕ್ಕೇ ಇಂಗ್ಲೀಷಿನಲ್ಲಿ "You are a product of your experiences" ಎನ್ನುತ್ತಾರೆ. ಅನುಭವದಂತೆ ಚಿಂತನೆ. ಅದಕ್ಕೆ ಕಗ್ಗ ಬುದ್ಧಿಯ ಕೆಲಸ ಮಿತವಾದದ್ದು ಎನ್ನುತ್ತದೆ. ಕಣ್ಣು ಹೇಗೆ ಮುಂದಿದ್ದನ್ನು ಮಾತ್ರ ನೋಡುತ್ತದೋ ಹಾಗೆ ಬುದ್ಧಿ ತನ್ನ ಅನುಭವದ ಸಂಗ್ರಹದಲ್ಲಿರುವುದನ್ನು ಮಾತ್ರ ಯೋಚಿಸುತ್ತದೆ. ಅದೊಂದು ಹೆಳವನ ನಡಿಗೆ.

ನಾನು ಮೊದಲ ಬಾರಿಗೆ ಅಮೆರಿಕಕ್ಕೆ ಹೋಗಿದ್ದಾಗ ಒಂದು ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ಇರಬೇಕಿತ್ತು. ಅಲ್ಲಿಗೆ ಹೋದಾಗ ಸಂಜೆ ಎಂಟು ಗಂಟೆ. ಒಳಗಡೆಗೆ ಬೆಳಕಿರಲಿಲ್ಲ. ಭಾರತದಿಂದ ಹೋದ ನನಗೆ ಕರೆಂಟ್ ಹೋಗುವುದು ವಿಶೇಷವೇನಲ್ಲ. ಹಾಗೆಯೇ ಇಲ್ಲಿಯೂ ಆಗಿರಬೇಕೆಂದು ಅಲ್ಲಿಯ ಅಧಿಕಾರಿಗೆ ಕೇಳಿದೆ. ಆತ ಅಲ್ಲಿಂದಲೇ ಕೂಗಿದ, 'ಸ್ವಿಚ್ ಆನ್ ಮಾಡಿಕೊಳ್ಳಿ'. ನಾನು ನೋಡಿದೆ ಎಲ್ಲ ಸ್ವಿಚ್‌ಗಳು ಆನ್ ಆಗಿಯೇ ಇದ್ದವು. ಅವನಿಗೆ ಹಾಗೆಯೇ ಹೇಳಿದೆ. ಆತ ಧಡಧಡನೆ ಬಂದು ನೋಡಿ ನಕ್ಕ. 'ಎಲ್ಲ ಸ್ವಿಚ್ ಆಫ್ ಆಗಿದ್ದಾವಲ್ಲ' ಎಂದು ಅವುಗಳನ್ನು ಆನ್ ಮಾಡಿದ. ಬೆಳಕು ಬಂತು. ಯಾಕೆ ಹೀಗಾಯ್ತು ಗೊತ್ತೇ? ಅಮೆರಿಕದಲ್ಲಿ ಮೇಲೆ ಒತ್ತಿದರೆ 'ಆನ್'. ಭಾರತದಲ್ಲಿ ಸ್ವಿಚ್‌ನ್ನು ಕೆಳಗೆ ಒತ್ತಿದರೆ 'ಆನ್'. ಇಪ್ಪತ್ತು ವರ್ಷ ಭಾರತದಲ್ಲಿ ಸ್ವಿಚ್ ಕೆಳಗೆ ಒತ್ತಿ 'ಆನ್' ಮಾಡಿದ್ದ ನನಗೆ ಅಮೆರಿಕದಲ್ಲಿ ವಿರುದ್ಧವಾಗಿರುತ್ತೆಂದು ತಿಳಿದಿರಲಿಲ್ಲ. ಅದು ಬುದ್ಧಿಯ ಸಂಗ್ರಹದಲ್ಲಿರಲಿಲ್ಲವಾದ್ದರಿಂದ ಅದು ಕಾರ್ಯಮಾಡಲಿಲ್ಲ. ಅದನ್ನೇ ಕಗ್ಗ ಬುದ್ಧಿಯ ಕೆಲಸ ಮಿತ ಎನ್ನುತ್ತದೆ.

ಬುದ್ಧಿಗೆ ವೇಗ ಮತ್ತು ಶಕ್ತಿ ದೊರಕುವುದು ಮನಸ್ಸಿನಿಂದಲೇ. ಯಾಕೆಂದರೆ ಮನಸ್ಸು ಎಷ್ಟು ವೇಗವಾಗಿ ಇಂದ್ರಿಯಗಳ ಮೂಲಕ ಅನುಭವಗಳನ್ನು ತಂದು ಹಾಕುತ್ತದೋ ಅಷ್ಟು ಬುದ್ಧಿ ಹೆಚ್ಚು ಸಮರ್ಥವಾಗುತ್ತದೆ. ಹೀಗೆ ಮನಸ್ಸು ಬುದ್ಧಿಗಳು ಹೊಂದಾಣಿಕೆಯಿಂದ ಕಾರ್ಯ ಮಾಡಬೇಕು. ಮನಸ್ಸಿನ ವೇಗವಿಲ್ಲದೆ ಬುದ್ಧಿ ಮಿತವಾಗುವಂತೆ, ಬುದ್ಧಿಯನ್ನು ತೊರೆದ ಮನಸ್ಸು ಕುರುಡಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಜನವರಿ 24, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಹೇಮಂತ ಋತು ಮಕರ ಮಾಸದ 10 ನೇ ದಿನ ತಿಥಿ: (ಪೌಷ ಕೃಷ್ಣ) ಷಷ್ಠಿ ಗಂ. 08-44 ನಕ್ಷತ್ರ: ಹಸ್ತ ಗಂ. 11-15 ಯೋಗ: ಸುಕರ್ಮ ಗಂ. 11-11, ಕರಣ: ವಣಿಜ ಗಂ. 08-44. ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 07-01 ಸೂರ್ಯಾಸ್ತ : 06-24 ಮುಸ್ಲಿಂ ದಿನಾಂಕ : 20 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ: 3, 4

ಮೇಷ: ಮನೆಯ ಜವಾಬ್ದಾರಿಗಳು ಹೆಚ್ಚಲಿವೆ. ಆದ್ದರಿಂದ ನಿಮ್ಮ ಕೆಲಸ ಹಾಗೂ ವೃತ್ತಿ ಜೀವನದ ಬಗ್ಗೆ ಗಂಭೀರ ಆಲೋಚನೆ ಮಾಡುವುದು ಬಹಳ ಮುಖ್ಯ. ರಿಯಾಯಿತಿ ಮಾರಾಟಗಳಿಂದ ಮೋಸ ಹೋಗುವ ಸಾಧ್ಯತೆ.

ವೃಷಭ: ನಿಮ್ಮ ಅನ್ವೇಷಣೆಯ ಹಾದಿಯಲ್ಲಿ ಮತ್ತಷ್ಟು ದೂರ ಸಾಗಿದಲ್ಲಿ ಯಶಸ್ಸಿನ ಛಾಯೆ ಕಾಣಲಿದೆ. ಸಂತಸದ ಕ್ಷಣಗಳನ್ನು ತಂದುಕೊಳ್ಳುವ ಪ್ರಯತ್ನ ಮಾಡಿ. ಕರಕುಶಲ ವಸ್ತು ತಯಾರಿಕರಿಗೆ ಆದಾಯದಲ್ಲಿ ಹೆಚ್ಚಳ.

ಮಿಥುನ: ನಿಮ್ಮ ಮೆಚ್ಚಿನ ಹವ್ಯಾಸಕ್ಕೆ ಬಿಡುವು ಮಾಡಿಕೊಳ್ಳುವಿರಿ. ಆರ್ಥಿಕ ಅಡಚಣೆಗಳು ಇರುವುದಿಲ್ಲ. ಮಡದಿ, ಮಕ್ಕಳೊಂದಿಗಿನ ಸಂತಸ ಈ ದಿನ ನಿಮ್ಮದಾಗಲಿದೆ. ಒಪ್ಪಂದದ ಬಗ್ಗೆ ದೃಢ ನಿರ್ಧಾರ ಮಾಡಿ ಯಶಸ್ಸು ಸಾಧಿಸುವಿರಿ.

ಕರ್ಕಾಟಕ: ನಿಮ್ಮ ಪರಿಶ್ರಮ ಹಾಗೂ ಪರೋಪಕಾರದ ವ್ಯಕ್ತಿತ್ವಕ್ಕೆ ಈಗ ನೀವು ತಕ್ಕ ಪ್ರತಿಫಲ ಹೊಂದುವಿರಿ. ನಿಮ್ಮ ಯೋಜನೆಗಳು ಸರಾಗವಾಗಿ ಮತ್ತು ನಿರಾತಂಕವಾಗಿ ಸಾಗುವುದು. ನಿಶ್ಚಿಂತೆಯಿಂದ ಕಾಲ ಕಳೆಯುವಿರಿ.

ಸಿಂಹ: ಸಂತೋಷವನ್ನು ಆಸ್ವಾದಿಸಿ ಹಾಗೂ ಪ್ರೀತಿ ಪಾತ್ರರೊಂದಿಗೆ ಉತ್ತಮ ಹೊಂದಾಣಿಕೆಯಿಂದ ಇರುವಂತಾಗಲಿದೆ. ಸಾಮಾಜಿಕ ವಿಷಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ. ಸುಖ ಜೀವನಕ್ಕೆ ಅಡ್ಡಿಯಾಗದಂತೆ ಎಚ್ಚರವಹಿಸಿ.

ಕನ್ಯಾ: ಆಫೀಸಿನ ಕೆಲಸದ ಒತ್ತಡದಲ್ಲಿ ಮನೆಯ ಕೆಲಸಗಳತ್ತ ಗಮನ ಕಡಿಮೆಯಾಗುವುದು. ಗೆಳೆತನಕ್ಕೆ ಸಂಬಂಧಿಸಿದ ವಿಷಯಗಳಿಗೆ ಇಂದು ಬಹಳಷ್ಟು ಪ್ರೋತ್ಸಾಹ ಸಿಗುವುದು.

ತುಲಾ: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ನಿಮ್ಮ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು. ಇಷ್ಟ ಮಿತ್ರರಿಂದ ಸಕಾಲದಲ್ಲಿ ಸಹಕಾರ ಒದಗಿ ಬರಲಿದೆ.

ವೃಶ್ಚಿಕ: ಆರ್ಥಿಕ ವಿಚಾರದಲ್ಲಿ ಉದಾರತೆ ತೋರಿ ಸಮಸ್ಯೆಯನ್ನು ಸೃಷ್ಟಿಸಿಕೊಳ್ಳಬೇಡಿ. ಬಹಳ ಬೇಗ ಗುರಿ ತಲುಪಬೇಕೆಂಬ ಹಂಬಲ ಈಡೇರುವುದು. ಮರದ ವ್ಯಾಪಾರಿಗಳಿಗೆ ಉತ್ತಮ ಲಾಭ.

ಧನು: ನಿಮ್ಮ ಸುತ್ತಮುತ್ತಲ ಜನರೊಂದಿಗಿನ ಬಾಂಧವ್ಯವು ಈ ದಿನ ಉತ್ತಮಗೊಳ್ಳುವುದು. ಸೌಂದರ್ಯ ಆಸ್ವಾದಿಸುವ ಆಕಾಂಕ್ಷೆಯು ಪ್ರಬಲವಾಗುವುದು. ಕೋರ್ಟು ವ್ಯವಹಾರಗಳ ಓಡಾಟ ತಪ್ಪಲಿದೆ.

ಮಕರ: ಅನ್ಯರ ಭಾವನೆಗಳಿಗೆ ಬೆಲೆ ಕೊಡುವ ಗುಣ ಅಭ್ಯಾಸ ಮಾಡಿಕೊಳ್ಳಿ. ಬೆಂಕಿಯಿಂದ ಅನಾಹುತ ಸಂಭವಿಸಬಹುದು. ಕೆಲಸಗಳು ಎಷ್ಟೇ ಕಷ್ಟವಾದರೂ, ಸ್ವತಃ ನೀವೇ ಸೋಲನ್ನು ಘೋಷಿಸಿಕೊಳ್ಳಬೇಡಿ.


ಕುಂಭ: ಜಾಣ್ಮೆಯಿಂದ ವ್ಯವಹರಿಸಿದರೆ ಪರಿಸ್ಥಿತಿಯ ಲಾಭ ಪಡೆಯುವಿರಿ. ಜೊತೆಗೆ ಜನರ ಮೆಚ್ಚುಗೆಗೆ ಪಾತ್ರರಾಗುವಿರಿ. ಅಪರಿಚಿತರೂ ಕೂಡ ನಿಮ್ಮನ್ನು ಪ್ರಶಂಸಿಸುವಂತೆ ಆಗುವುದು. ಅನಗತ್ಯವಾಗಿ ಹಣವನ್ನು ವ್ಯರ್ಥ ಮಾಡದಿರಿ.

ಮೀನ: ಲೇವಾದೇವಿ ವ್ಯವಹಾರ ನಡೆಸುವವರಿಗೆ ಸಂಕಷ್ಟದ ಪರಿಸ್ಥಿತಿ. ಮುಂದಾಲೋಚನೆಯಿಂದ ಬಹು ಸಮಯದಿಂದ ಉಳಿದಿದ್ದ ಹೆಚ್ಚಿನ ಕೆಲಸಗಳು ಕಾರ್ಯಗತಗೊಳ್ಳುವುದು.

ಪದಬಂಧ 4848 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಲಗ್ನಮುಹೂರ್ತದಲ್ಲಿ ವಧೂವರರ ನಡುವೆ ಹಿಡಿವ ವಸ್ತ್ರ (4)
3.ಕಾಡಿನ ಹೂವಿದು (4)
5.ಈತ ಚರ್ಮದ ಕೆಲಸಗಾರ (3)
6.ಮನ್ಮಥನ ಇನ್ನೊಂದು ಹೆಸರು ಉಲ್ಟಾ ಆಗಿಬಿಟ್ಟಿದೆ (3)
8.ಹೊಟ್ಟೆ ಇಲ್ಲಿದೆ (3)
9.ಜಗಳಕ್ಕೊಂದು ಪರ್ಯಾಯ ಪದ (3)
10.ಒಣಗಿದ ವಸ್ತು (3)
12.ದಾನ ನೀಡುತ್ತಿರುವ ರಾಕ್ಷಸ (3)
14.ಮಲಗುವ ಕೋಣೆಯಿದು (4)
15.ದೃಷ್ಟಾಂತವಿಲ್ಲಿ ತಿರುವು ಮುರುವಾಗಿದೆ (4)

ಮೇಲಿಂದ ಕೆಳಕ್ಕೆ
1.ಮೊಟ್ಟೆಯೊಡೆದು ಹುಟ್ಟುವ ಪ್ರಾಣಿ (3)
2.ಚಾಳಿಯಿಲ್ಲಿ ತಿರುವು ಮುರುವಾಗಿದೆ (2)
3.ವಠಾರದಲ್ಲಿರುವ ಮದುಮಗ! (2)
4.ಹೊಟ್ಟೆಕಿಚ್ಚನ್ನು ಹೀಗೆನ್ನಿ (3)
7.ಒಳಜಗಳವಿದು (5)
8.ಈತ ಜನ್ಮವನ್ನು ನೀಡಿದವನು (5)
9.ಬಿರುಸಾದುದು ಅಥವಾ ನಿಷ್ಠುರವಾದುದು (3)
11.ಮಾನಿನಿಯ ಮೇಲೆ ಈ ಅನುಮಾನವೇ? (3)
12.ಉದಾಹರಣೆ ನೀಡುವಾಗ ಆದ ನೀರಡಿಕೆ (2)
13.ಮಾನವನಿರುವ ಕಾಡು! (2)



4847ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಂಗಾರಕ 3.ಮನ್ವಂತರ 5.ಣಮರ 7.ಮಂದಿ 8.ಗವಿ 11.ತಿಮ 13.ಸಕ 14.ನನಸು 16.ನವರಂಗ 17.ಮರಕತ
ಮೇಲಿಂದ ಕೆಳಕ್ಕೆ: 1.ಅಂತರಂಗ 2.ಕಣ 3.ಮರ 4.ರಸೀದಿ 6.ಮಹಾತ್ಮ 7.ಮಂಜೂರಾತಿ 9.ವಿರೇಚಕ 10.ಪ್ರಧಾನ 12.ಮಡಿವಂತ 13.ಸನ್ಮಾನ 14.ನಗ 15.ಸುಮ

ಸುಡೊಕು 5234

3	2			8		9		1
	9	8						4
	4		9			3		8
6								9
	5		7	6	9		8	
8						6		
			2			7		6
				9	7			
						4		5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5233 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಕೋವಿಡ್: ಆಸ್ಪತ್ರೆ ದಾಖಲಾತಿ ಶೇ 5 ರಷ್ಟು



ಬೆಂಗಳೂರು: ರಾಜ್ಯದಲ್ಲಿ ಇದೇ ತಿಂಗಳು ಕಾಣಿಸಿಕೊಂಡಿರುವ ಕೋವಿಡ್ ಮೂರನೇ ಅಲೆಯಲ್ಲಿ ಸೋಂಕಿನ ತೀವ್ರತೆ ಕಡಿಮೆಯಿದ್ದು, ಕೋವಿಡ್ ಪೀಡಿತರಲ್ಲಿ ಶೇ 5ರಷ್ಟು ಮಂದಿ ಮಾತ್ರ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಈ ಪ್ರಮಾಣ ಎರಡನೇ ಅಲೆಯಲ್ಲಿ ಶೇ 21ಕ್ಕೆ ಏರಿಕೆಯಾಗಿತ್ತು.

ರಾಜ್ಯದಲ್ಲಿ ವರದಿಯಾದ ಕೋವಿಡ್ ಪ್ರಕರಣಗಳನ್ನು ಆಧರಿಸಿ ಕೋವಿಡ್ ವಾರ್ ರೂಮ್ ವಿಶ್ಲೇಷಣೆ ಮಾಡಿದೆ. 2020ರ ಮಾರ್ಚ್‌ನಲ್ಲಿ ಕಾಣಿಸಿಕೊಂಡಿದ್ದ ಕೋವಿಡ್ ಮೊದಲ ಅಲೆಯಲ್ಲಿ 9.51 ಲಕ್ಷಕ್ಕೂ ಅಧಿಕ ಪ್ರಕರಣಗಳು ವರದಿಯಾಗಿದ್ದವು. 2020ರ ಅ.10ರ ವೇಳೆಗೆ ರಾಜ್ಯದಲ್ಲಿ 1.20 ಲಕ್ಷ ಸಕ್ರಿಯ ಪ್ರಕರಣಗಳಿದ್ದವು. ಸೋಂಕಿತರಲ್ಲಿ ಶೇ 16ರಷ್ಟು ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದರು. ಇನ್ನುಳಿದವರು ಮನೆ ಆರೈಕೆಯಲ್ಲಿಯೇ ಚೇತರಿಸಿಕೊಂಡಿದ್ದರು. ಮೊದಲ ಅಲೆಯಲ್ಲಿ 12 ಸಾವಿರಕ್ಕೂ ಅಧಿಕ ಮಂದಿ ಮೃತಪಟ್ಟಿದ್ದರು.

2021ರ ಮಾರ್ಚ್‌ನಲ್ಲಿ ಕಾಣಿಸಿಕೊಂಡ ಎರಡನೇ ಅಲೆಯಲ್ಲಿ 20.53 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. 2021ರ ಮೇ 15ರ ವೇಳೆಗೆ ರಾಜ್ಯದಲ್ಲಿ 6.05 ಲಕ್ಷಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿದ್ದವು.

ಸೋಂಕಿನ ತೀವ್ರತೆ ಹೆಚ್ಚಿದ್ದರಿಂದ ಕೋವಿಡ್ ಪೀಡಿತರಲ್ಲಿ ಶೇ 21 ರಷ್ಟು ಮಂದಿ ಆಸ್ಪತ್ರೆ ಚಿಕಿತ್ಸೆ ಪಡೆದುಕೊಂಡಿದ್ದರು. 25 ಸಾವಿರಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದರು.,

ಮೂರನೇ ಅಲೆಯಲ್ಲಿ 2022ರ ಜ.20 ರ ವೇಳೆಗೆ 31.53 ಲಕ್ಷ ಮಂದಿ ಸೋಂಕಿತರಾಗಿದ್ದಾರೆ.

ಅವರಲ್ಲಿ ಶೇ 94 ರಷ್ಟು ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. ಕೋವಿಡ್ ಪೀಡಿತರಲ್ಲಿ 204 ಮಂದಿ ಮೃತಪಟ್ಟಿದ್ದಾರೆ.

ನಿಯಮ ಉಲ್ಲಂಘನೆ: ಅಧ್ಯಾಪಕನ ವಿರುದ್ಧ ದೂರು ದಾಖಲು

ಪ್ರಜಾವಾಣಿ ವಾರ್ತೆ

ಅಂಕೋಲಾ (ಉತ್ತರ ಕನ್ನಡ): ಕ್ವಾರಂಟೈನ್ ನಿಯಮ ಉಲ್ಲಂಘಿಸಿ ಕಾಲೇಜಿಗೆ ಹಾಜರಾಗಿ ವಿದ್ಯಾರ್ಥಿಗಳಲ್ಲಿ ಕೋವಿಡ್ ಹರಡಲು ಕಾರಣವಾದ ಆರೋಪದ ಮೇಲೆ ಪಟ್ಟಣದ ಜಿ.ಸಿ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದ ಅಧ್ಯಾಪಕ ಎಸ್.ಆರ್. ಶಿರೋಡ್ಕರ್ ವಿರುದ್ಧ ಅಂಕೋಲಾ ಪೊಲೀಸ್ ಠಾಣೆಯಲ್ಲಿ ಶನಿವಾರ ದೂರು ದಾಖಲಾಗಿದೆ.

ಪುರಸಭೆಯ ಮುಖ್ಯಾಧಿಕಾರಿ ಶ್ರುತಿ ಗಾಯಕವಾಡ ದೂರು ದಾಖಲಿಸಿದ್ದಾರೆ.

ಕೋವಿಡ್ ದೃಢಪಟ್ಟಿದ್ದರೂ 14 ದಿನ ಕ್ವಾರೆಂಟೈನ್ ನಿಯಮ ಪಾಲಿಸದೆ ಕಾಲೇಜಿಗೆ ಬಂದಿದ್ದಾರೆ. ಸೋಂಕು ಹರಡುವಿಕೆ ಬಗ್ಗೆ ತಿಳಿದಿದ್ದರೂ ನಿರ್ಲಕ್ಷ್ಯದಿಂದ ಉದ್ದೇಶಪೂರ್ವಕವಾಗಿ ಈ ಅಧ್ಯಾಪಕರು ಜನವರಿ 19 ರಂದು ಕಾಲೇಜಿನ ವಿದ್ಯಾರ್ಥಿಗಳಿಗೆ ಪಾಠ ಮಾಡಿದ್ದಾರೆ. ಇದು 13 ವಿದ್ಯಾರ್ಥಿಗಳಿಗೆ ಸೋಂಕು ಹರಡಲು ಕಾರಣವಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕೋವಿಡ್: 50 ಸಾವಿರ ದಾಟಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಭಾನುವಾರ ಸೋಂಕು ದೃಢಪಟ್ಟವರ ಸಂಖ್ಯೆ 50 ಸಾವಿರದ ಗಡಿ (50,210) ದಾಟಿದೆ. ಕೋವಿಡ್ ಕಾಣಿಸಿಕೊಂಡಾಗಿನಿಂದ ಈವರೆಗೆ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 3.57 ಲಕ್ಷಕ್ಕೆ ಏರಿಕೆಯಾಗಿದೆ. ಕೋವಿಡ್ ಎರಡನೇ ಅಲೆಯಲ್ಲಿ 2021ರ ಮೇ 5 ರಂದು ರಾಜ್ಯದಲ್ಲಿ ಹೊಸ ಪ್ರಕರಣಗಳು 50 ಸಾವಿರದ ಗಡಿ (50,112) ದಾಟಿತ್ತು. ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿತ್ತು. ಈಗ ಮತ್ತೆ ಏರುಗತಿ ಪಡೆದುಕೊಂಡಿದೆ.

ಒಂದು ದಿನದ ಅವಧಿಯಲ್ಲಿ 2.20 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 22.77 ರಷ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 35.17 ಲಕ್ಷಕ್ಕೆ ಏರಿಕೆಯಾಗಿದೆ.

ಐದು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 24 ಜಿಲ್ಲೆಗಳಲ್ಲಿ ಮೂರು ಅಂಕಿಯಲ್ಲಿದೆ. ಬೆಂಗಳೂರಿನಲ್ಲಿ ಹೊಸದಾಗಿ 26,299 ಪ್ರಕರಣಗಳು ದೃಢಪಟ್ಟಿವೆ. ಮೈಸೂರಿನಲ್ಲಿ 4,359, ತುಮಕೂರಿನಲ್ಲಿ 1,963, ಹಾಸನದಲ್ಲಿ 1,922, ಮಂಡ್ಯದಲ್ಲಿ 1,455 ಹಾಗೂ ಕೊಡಗಿನಲ್ಲಿ 1,139 ಮಂದಿ ಹೊಸದಾಗಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಸಾವಿರಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ 22,842 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 31.21 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳಲ್ಲಿ ಬೆಂಗಳೂರಿನಲ್ಲಿಯೇ 2.31 ಲಕ್ಷ ಮಂದಿ ಸೋಂಕಿತರಿದ್ದಾರೆ.

ಕೊರೊನಾ ಸೋಂಕಿತರಲ್ಲಿ 19 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಎಂಟು ಮಂದಿ, ಶಿವಮೊಗ್ಗ ಹಾಗೂ ತುಮಕೂರಿನಲ್ಲಿ ತಲಾ ಇಬ್ಬರು, ಬಳ್ಳಾರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಗದಗ, ಮೈಸೂರು ಹಾಗೂ ರಾಯಚೂರಿನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.03 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,582ಕ್ಕೆ ಏರಿಕೆಯಾಗಿದೆ.

163 ಓಮೈಕ್ರಾನ್ ಪ್ರಕರಣ ಪತ್ತೆ

ರಾಜ್ಯದಲ್ಲಿ ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ 163 ಮಂದಿಯಲ್ಲಿ ಹೊಸದಾಗಿ ದೃಢಪಟ್ಟಿದೆ. ಈ ಮಾದರಿಯ ಪ್ರಕರಣಗಳ ಒಟ್ಟು ಸಂಖ್ಯೆ 931ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಈವರೆಗೆ 2,956 ಡೆಲ್ಟಾ ಪ್ರಕರಣಗಳು ಹಾಗೂ ಡೆಲ್ಟಾ ಉಪತಳಿಯ 1,372 ಪ್ರಕರಣಗಳು ವರದಿಯಾಗಿವೆ.

ಕೋವಿಡ್:15 ದಿನದಲ್ಲಿ ಗರಿಷ್ಠ ಮಟ್ಟ ಸಂಭವ

ನವದೆಹಲಿ (ಪಿಟಿಐ): ಕೊರೊನಾ ಸೋಂಕು ಹರಡುವ ವೇಗದ ಪ್ರಮಾಣವನ್ನು ಬಿಂಬಿಸುವ 'ಆರ್' ಅಂಶವು ದೇಶದಲ್ಲಿ ಜನವರಿ 14–21ರ ವಾರದಲ್ಲಿ ಶೇ 1.57ಕ್ಕೆ ಕುಸಿದಿದೆ. ಅಲ್ಲದೆ, ಕೋವಿಡ್ ಸೋಂಕು ಹರಡುವಿಕೆ ಮುಂದಿನ ಪಾಕ್ಷಿಕದಲ್ಲಿ ಗರಿಷ್ಠ ಮಟ್ಟ ತಲುಪುವ ಸಂಭವವಿದೆ ಎಂದು ಐಐಟಿ ಮದ್ರಾಸ್‌ನ ಪ್ರಾಥಮಿಕ ವಿಶ್ಲೇಷಣೆ ತಿಳಿಸಿದೆ.

ಸೋಂಕು ಹರಡುವ ವೇಗವನ್ನು 'ಆರ್' ಅಂಶವು ಬಿಂಬಿಸಲಿದೆ. ಈ ಪ್ರಮಾಣವು ಶೇ 1ಕ್ಕೂ ಕಡಿಮೆಯಾದಾಗ ಸೋಂಕು ಪರಿಸ್ಥಿತಿ ಅಂತ್ಯಗೊಂಡಿದೆ ಎಂದು ವ್ಯಾಖ್ಯಾನಿಸಲಾಗುತ್ತದೆ.

ಐಐಟಿ ಮದ್ರಾಸ್‌ನ ವಿಶ್ಲೇಷಣೆ ಅನುಸಾರ, 'ಆರ್' ಅಂಶವು ಜನವರಿ 14–21ರ ಅವಧಿಯಲ್ಲಿ 1.57ರಷ್ಟಿತ್ತು. ಇದು, ಜನವರಿ 7–13ರ ಮಧ್ಯೆ 2.2, ಜನವರಿ 1–6ರ ಅವಧಿಯಲ್ಲಿ 4 ಮತ್ತು ಡಿ. 25–31ರ ನಡುವೆ 2.9 ಇತ್ತು.

ಪ್ರೊ.ನೀಲೇಶ್ ಎಸ್.ಉಪಾಧ್ಯೆ ಮತ್ತು ಪ್ರೊ.ಎಸ್. ಸುಂದರ್ ನೇತೃತ್ವದಲ್ಲಿ ಗಣಕೀಕೃತ ಮಾದರಿಯಲ್ಲಿ ಐಐಟಿ ಮದ್ರಾಸ್‌ನ ಗಣಿತ ಉನ್ನತ ಅಧ್ಯಯನ ಕೇಂದ್ರ ಈ ವಿಶ್ಲೇಷಣೆ ನಡೆಸಿದೆ. ಅಂಕಿ–ಅಂಶಗಳ ಪ್ರಕಾರ, ಆರ್ ಅಂಶವು ಮುಂಬೈನಲ್ಲಿ 0.57ರಷ್ಟಿದ್ದರೆ, ದೆಹಲಿಯಲ್ಲಿ 0.98, ಚೆನ್ನೈನಲ್ಲಿ 1.2 ಮತ್ತು ಕೋಲ್ಕೊತ್ತಾದಲ್ಲಿ 0.56ರಷ್ಟಿದೆ.

ವಿಶ್ಲೇಷಣೆ ಕುರಿತಂತೆ ಮಾಹಿತಿಯನ್ನು ಒದಗಿಸಿದ ಗಣಿತ ವಿಭಾಗದ ಸಹಾಯಕ ಪ್ರೊಫೆಸರ್ ಡಾ.ಜಯಂತ್ ಝಾ ಅವರು, ಮುಂಬೈ ಮತ್ತು ಕೋಲ್ಕೊತ್ತಾದಲ್ಲಿನ ಆರ್ ಅಂಶದ ಪ್ರಕಾರ, ಅಲ್ಲಿ ಈಗಾಗಲೇ ಸೋಂಕಿನ ಗರಿಷ್ಠ ಮಟ್ಟ ತಲುಪಿದ್ದು, ಇಳಿಮುಖವಾಗುತ್ತಿದೆ. ದೆಹಲಿ ಮತ್ತು ಚೆನ್ನೈನಲ್ಲಿ ಸೋಂಕಿನ ಪ್ರಮಾಣ 1ರ ಸಮೀಪದಲ್ಲಿದೆ.

ಐಸಿಎಂಆರ್ ನೂತನ ಮಾರ್ಗಸೂಚಿಯಲ್ಲಿ ಸಂಪರ್ಕ ಗುರುತಿಸುವ ಮಾನದಂಡವನ್ನು ಪರಿಷ್ಕರಿಸಿದೆ. ಅದರಂತೆ ಗಂಭೀರ ಪರಿಣಾಮ ಇಲ್ಲದಿದ್ದಲ್ಲಿ ಪರೀಕ್ಷೆ ಅನಗತ್ಯ. ಇದು, ಕೂಡಾ ಪರಿಸ್ಥಿತಿ ಬದಲಾಗಲು ಕಾರಣವಿರಬಹುದು ಎಂದರು. ವಿಶ್ಲೇಷಣೆ ಅನುಸಾರ ಫೆಬ್ರುವರಿ 6ರ ವೇಳೆಗೆ ಅಂದರೆ ಮುಂದಿನ 14 ದಿನದಲ್ಲಿ ಸೋಂಕು ಗರಿಷ್ಠ ಮಟ್ಟ ತಲುಪಬಹುದು. ಈ ಮೊದಲು ಫೆಬ್ರುವರಿ1–15ರ ನಡುವೆ ಗರಿಷ್ಠ ಮಟ್ಟ ತಲುಪಬಹುದು ಎಂದು ಅಂದಾಜಿಸಲಾಗಿತ್ತು.

ನ್ಯೂಜಿಲೆಂಡ್ ಪ್ರಧಾನಿ ಜೆಸಿಂದಾ ಮದುವೆ ರದ್ದು

ವೆಲ್ಲಿಂಗ್ಟನ್: ಓಮೈಕ್ರಾನ್ ಪ್ರಕರಣಗಳು ಹೆಚ್ಚಿದಂತೆ ಕೋವಿಡ್ ನಿಯಮಗಳನ್ನು ಕಠಿಣಗೊಳಿಸಿರುವ ನ್ಯೂಜಿಲೆಂಡ್‌ನ ಪ್ರಧಾನಿ ಜೆಸಿಂದಾ ಆರ್ಡೆನ್ ಅವರು ತಮ್ಮ ಮದುವೆಯನ್ನೇ ರದ್ದುಗೊಳಿಸಿದ್ದಾರೆ.

'ನನ್ನ ಮದುವೆ ಸದ್ಯ ನಡೆಯುವುದಿಲ್ಲ' ಎಂದು ಜೆಸಿಂದಾ ಭಾನುವಾರ ಸ್ಪಷ್ಟಪಡಿಸಿದ್ದಾರೆ. ನ್ಯೂಜಿಲೆಂಡ್‌ನಲ್ಲಿ ಕೋವಿಡ್ ನಿಯಮಗಳನ್ನು ಮತ್ತಷ್ಟು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದ್ದು, ವಿವಾಹ ಸಮಾರಂಭಕ್ಕೆ ಪೂರ್ಣವಾಗಿ ಲಸಿಕೆ ಪಡೆದ 100 ಮಂದಿಗೆ ಭಾಗವಹಿಸಲು ಮಾತ್ರ ಅವಕಾಶ ನೀಡಲಾಗಿದೆ.

ದೀರ್ಘಕಾಲದ ಜೊತೆಗಾರ ಕ್ಲಾರ್ಕ್ ಗೆಫಾರ್ಡ್ ಅವರ ಜೊತೆ ಆರ್ಡೆನ್ ಅವರ ವಿವಾಹ ಸದ್ಯದಲ್ಲೇ ನಡೆಯುತ್ತದೆ ಎಂದು ಈ ಹಿಂದೆ ಹೇಳಲಾಗಿತ್ತು. ಆದರೆ ದಿನಾಂಕ ಘೋಷಿಸಿರಲಿಲ್ಲ.

ರಾಜ್ಯ ಕೋವಿಡ್ ಅಂಕಿ–ಅಂಶ

35,17,682 ▲	ಒಟ್ಟು ಸೋಂಕಿತರು (34,67,472 ನಿನ್ನೆಯ ವಿವರ)
3,57,796 ▲	ಸಕ್ರಿಯ ಪ್ರಕರಣಗಳು
31,21,274 ▲	ಗುಣಮುಖರಾದವರು
38,582 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	50,210	▲
ಗುಣಮುಖ	22,842	▼
ಸಾವು	19	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡುಗೆ ಕೋವಿಡ್



ಎಂ.ವೆಂಕಯ್ಯ ನಾಯ್ಡು

ನವದೆಹಲಿ: ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರಿಗೆ ಕೋವಿಡ್–19 ತಗುಲಿರುವುದು ದೃಢಪಟ್ಟಿದೆ. ಅವರಿಗೆ ಸೋಂಕು ತಗುಲಿರುವುದು ಇದು ಎರಡನೇ ಬಾರಿ. ವೆಂಕಯ್ಯ ನಾಯ್ಡು ಸದ್ಯ ಹೈದರಾಬಾದ್‌ನಲ್ಲಿದ್ದಾರೆ. ಒಂದು ವಾರದವರೆಗೆ ಪ್ರತ್ಯೇಕವಾಸದಲ್ಲಿ ಇರಲು ಅವರು ನಿರ್ಧರಿಸಿದ್ದಾರೆ. ತಮ್ಮ ನಿಕಟ ಸಂಪರ್ಕಕ್ಕೆ ಬಂದವರು ಪ್ರತ್ಯೇಕವಾಸಕ್ಕೆ ಒಳಗಾಗುವಂತೆ ಅವರು ಸಲಹೆ ನೀಡಿದ್ದಾರೆ ಎಂದು ಉಪರಾಷ್ಟ್ರಪತಿಯವರ ಕಾರ್ಯಾಲಯ ಭಾನುವಾರ ಟ್ವೀಟ್ ಮಾಡಿದೆ. ಕೋವಿಡ್ ದೃಢಪಟ್ಟಿರುವುದರಿಂದ ಅವರು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ಮೊದಲ ಡೋಸ್: ಶೇ 100ರಷ್ಟು ಗುರಿ ತಲುಪಿದ ಸರ್ಕಾರ

ಎರಡನೇ ಡೋಸ್ ಶೇ 85 ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 18 ವರ್ಷಗಳು ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಶೇ 100 ರಷ್ಟು ಗುರಿ ಸಾಧನೆಯಾಗಿದೆ. ಮೊದಲ ಡೋಸ್ ಪಡೆದವರಲ್ಲಿ ಶೇ 85ರಷ್ಟು ಮಂದಿ ಎರಡನೆ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

2021ರ ಜ.16 ರಿಂದ ರಾಜ್ಯದಲ್ಲಿ ಕೋವಿಡ್ ಲಸಿಕೆ ವಿತರಿಸಲಾಗುತ್ತಿದೆ. 4.89 ಕೋಟಿ ಮಂದಿ 18 ವರ್ಷಗಳು ಮೇಲ್ಪಟ್ಟವರೆಂದು ಲೆಕ್ಕ ಹಾಕಲಾಗಿತ್ತು. ಅಷ್ಟು ಮಂದಿಗೆ ಈಗ ಮೊದಲ ಡೋಸ್ ಲಸಿಕೆಯನ್ನು ನೀಡಲಾಗಿದೆ. ಅವರಲ್ಲಿ 4.17 ಕೋಟಿ ಮಂದಿ ಎರಡನೇ ಡೋಸ್ ಲಸಿಕೆಯನ್ನು ಹಾಕಿಸಿಕೊಂಡಿದ್ದಾರೆ.

'ಒಂದು ವರ್ಷದ ಏಳು ದಿನಗಳಲ್ಲಿ ಮೊದಲ ಡೋಸ್ ವಿತರಣೆಯ ಶೇ 100 ರಷ್ಟು ಸಾಧನೆ ಮಾಡಲಾಗಿದೆ. ಈ ಸಾಧನೆ ಮಾಡಿದ ದೇಶದ ಮೊದಲ ರಾಜ್ಯ ಕರ್ನಾಟಕವಾಗಿದೆ.

ಈ ಅದ್ಭುತ ಸಾಧನೆಗಾಗಿ ಎಲ್ಲ ವೈದ್ಯರು, ಆರೋಗ್ಯ ಕಾರ್ಯಕರ್ತರು ಮತ್ತು ಜಿಲ್ಲಾಡಳಿತಕ್ಕೆ ಅಭಿನಂದನೆಗಳು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

'ಎಲ್ಲ ಮಕ್ಕಳಿಗೆ ಲಸಿಕೆ ಒದಗಿಸುವುದು ನಮ್ಮ ಆದ್ಯತೆಯಾಗಿದೆ. ಆದಷ್ಟು ಬೇಗ ಎಲ್ಲ 15ರಿಂದ 18 ವರ್ಷದೊಳಗಿನವರಿಗೂ ಲಸಿಕೆ ನೀಡಲಾಗುವುದು. ಕೋವಿಡ್ ತಡೆಗೆ ಲಸಿಕೆ ಸಹಕಾರಿ' ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಜನವರಿಯಲ್ಲಿ ಲಸಿಕೆ ವಿತರಣೆ ಪ್ರಾರಂಭವಾದರೂ, ದೈನಂದಿನ ಸರಾಸರಿ ಮಾರ್ಚ್ ತಿಂಗಳ ನಂತರ ಲಕ್ಷದ ಗಡಿ ದಾಟಿತ್ತು. ಬಳಿಕ ಲಸಿಕೆ ವಿತರಣೆ ಏರುಗತಿ ಪಡೆದುಕೊಂಡಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ಪ್ರತಿನಿತ್ಯ ಸರಾಸರಿ 4.83 ಲಕ್ಷ ಡೋಸ್‌ಗಳಷ್ಟು ಲಸಿಕೆಯನ್ನು ವಿತರಿಸಲಾಗಿತ್ತು. ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ 7 ಸಾವಿರಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ. ಈ ತಿಂಗಳು ಪ್ರತಿನಿತ್ಯ ಸರಾಸರಿ 3.17 ಲಕ್ಷದಷ್ಟು ಡೋಸ್‌ಗಳನ್ನು ವಿತರಿಸಲಾಗಿದೆ.

17 ಜಿಲ್ಲೆಗಳು ಉತ್ತಮ ಸಾಧನೆ

ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ 18 ಜಿಲ್ಲೆಗಳು ಶೇ 100 ಹಾಗೂ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಾಧನೆ ಮಾಡಿವೆ. ಗದಗ, ಬೀದರ್ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ನಿಗದಿಪಡಿಸಿದ ಗುರಿಗಿಂತ ಹೆಚ್ಚಿನ ಜನರಿಗೆ ಲಸಿಕೆ ನೀಡಲಾಗಿದೆ. ಮಂಡ್ಯ, ಬೆಂಗಳೂರು ಗ್ರಾಮಾಂತರ, ಉಡುಪಿ, ದಕ್ಷಿಣ ಕನ್ನಡ, ರಾಯಚೂರು, ಬೆಂಗಳೂರು, ಕಲಬುರಗಿ, ಯಾದಗಿರಿ, ಶಿವಮೊಗ್ಗ, ಹಾವೇರಿ, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆ ಶೇ 100 ರಷ್ಟು ಗುರಿ ಸಾಧಿಸಿಲ್ಲ.

ಎರಡನೇ ಡೋಸ್ ವಿತರಣೆಯಲ್ಲಿ ಕೊಡಗು, ವಿಜಯಪುರ ಸೇರಿದಂತೆ 17 ಜಿಲ್ಲೆಗಳು ರಾಜ್ಯದ ಸರಾಸರಿಗಿಂತ (ಶೇ 85) ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ವಿತರಿಸಿವೆ. ಕಲಬುರಗಿ, ರಾಯಚೂರು, ಯಾದಗಿರಿ, ಚಿತ್ರದುರ್ಗ, ದಕ್ಷಿಣ ಕನ್ನಡ ಸೇರಿದಂತೆ 10 ಜಿಲ್ಲೆಗಳಲ್ಲಿ ಈ ಪ್ರಮಾಣ ಶೇ 85ಕ್ಕಿಂತ ಕಡಿಮೆಯಿದೆ.



ಶಿಮ್ಲಾ ಮೇಲೆ ಹಿಮ...

ಹಿಮಾಚಲಪ್ರದೇಶದ ರಾಜಧಾನಿ ಶಿಮ್ಲಾದಲ್ಲಿ ಹೆಚ್ಚು ಹಿಮ ಸುರಿಯುತ್ತಿದ್ದು ನಗರದ ಜನವಸತಿ ಪ್ರದೇಶವೊಂದರ ಕಟ್ಟಡಗಳು ಭಾನುವಾರ ಕಂಡಿದ್ದು ಹೀಗೆ...
–ಪಿಟಿಐ ಚಿತ್ರ

ರಾಜ್ಯದಲ್ಲಿ ನಿತ್ಯ ಶೇ 61.5ರಷ್ಟು ಘನತ್ಯಾಜ್ಯ ಸಂಸ್ಕರಣೆ –ಸಿಪಿಸಿಬಿ

ಪ್ರಜಾವಾಣಿ ವಾರ್ತೆ



ನವದೆಹಲಿ: ಕರ್ನಾಟಕದಲ್ಲಿ ಪ್ರತಿನಿತ್ಯ ಸರಾಸರಿ 11,085 ಟನ್‌ನಷ್ಟು ಘನತ್ಯಾಜ್ಯ ಉತ್ಪಾದನೆಯಾಗಲಿದ್ದು, ಈ ಪೈಕಿ 6,817 ಟನ್ ಅಂದರೆ ಶೇ 61.5ರಷ್ಟನ್ನು ಸಂಸ್ಕರಿಸಲಾಗುತ್ತದೆ.

ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು (ಸಿಪಿಸಿಬಿ) ಈ ಸಂಬಂಧ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ದಕ್ಷಿಣ ವಲಯದ ಪೀಠಕ್ಕೆ ಮಾಹಿತಿ ನೀಡಿದೆ.

ಬೆಂಗಳೂರಿನ ಹಲಸೂರು ಕೆರೆ ಮಾಲಿನ್ಯಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆಯನ್ನು ಈ ಪೀಠ ನಡೆಸುತ್ತಿದೆ. ಘನತ್ಯಾಜ್ಯ ನಿರ್ವಹಣೆ ಕುರಿತಂತೆ ಈ ಮೊದಲು ನ್ಯಾಯಮಂಡಳಿ ನೀಡಿದ್ದ ಆದೇಶವನ್ನು ರಾಜ್ಯ ಸರ್ಕಾರ ಜಾರಿಗೊಳಿಸಿರುವ ಕುರಿತು ವಸ್ತುಸ್ಥಿತಿ ವರದಿ ಸಲ್ಲಿಸಬೇಕು ಎಂದೂ ಪೀಠ ಇದೇ ಸಂದರ್ಭದಲ್ಲಿ ಸಿಪಿಸಿಬಿಗೆ ತಿಳಿಸಿತು.

ಕರ್ನಾಟಕದಲ್ಲಿ 316 ನಗರ ಸ್ಥಳೀಯ ಸಂಸ್ಥೆಗಳು, 286 ಸ್ಥಳೀಯ ಸಂಸ್ಥೆಗಳು ಈಗಾಗಲೇ ಮನೆಯಿಂದ ಕಸ ಸಂಗ್ರಹಿಸುತ್ತಿರುವ ಕ್ರಮ ಜಾರಿಗಳಿಸಿವೆ. ಉಳಿದ ಸಂಸ್ಥೆಗಳು ಇದನ್ನು ಜಾರಿಗೊಳಿಸುವ ಪ್ರಕ್ರಿಯೆಯಲ್ಲಿವೆ.

ರಾಜ್ಯದಲ್ಲಿ 217 ಪ್ಲಾಸ್ಟಿಕ್ ತ್ಯಾಜ್ಯ ಸಂಸ್ಕರಣ ಘಟಕಗಳಿವೆ. ಇವುಗಳ ಒಟ್ಟು ಸಾಮರ್ಥ್ಯ 310 ಟನ್‌ಗಳು. ಅಲ್ಲದೆ, 216 ಕಾಂಪೋಸ್ಟ್ ಘಟಕಗಳಿದ್ದು, ಇವುಗಳ ಒಟ್ಟು ಸಾಮರ್ಥ್ಯ ನಿತ್ಯ 5,834 ಟನ್‌ಗಳು ಎಂದು ತಿಳಿಸಲಾಗಿದೆ.

ಗಣರಾಜ್ಯೋತ್ಸವ: ಭದ್ರತೆಗೆ 27 ಸಾವಿರ ಪೊಲೀಸರು



ರಾಕೇಶ್ ಆಸ್ಥಾನ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮದ ಭದ್ರತೆಗಾಗಿ ಸುಮಾರು 27 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇಲ್ಲಿ ಭಯೋತ್ಪಾದನಾ ನಿಗ್ರಹ ಕ್ರಮಗಳನ್ನೂ ಕೈಗೊಳ್ಳಲಾಗಿದೆ ಎಂದು ದೆಹಲಿ ಪೊಲೀಸ್ ಆಯುಕ್ತ ರಾಕೇಶ್ ಆಸ್ಥಾನ ಭಾನುವಾರ ಹೇಳಿದ್ದಾರೆ.

ಇದರಲ್ಲಿ ಉಪ ಪೊಲೀಸ್ ಆಯುಕ್ತರು, ಪೊಲೀಸ್ ಸಹಾಯಕ ಆಯುಕ್ತರು, ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್‌ಗಳು, ಸಶಸ್ತ್ರ ಪೊಲೀಸ್ ಪಡೆಯ ಸಿಬ್ಬಂದಿ,ಕಮಾಂಡರ್‌ಗಳು, ಅಧಿಕಾರಿಗಳು ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) ಯೋಧರು ಇರಲಿದ್ದಾರೆ ಎಂದು ಹೇಳಿದರು.

ಹೆಣ್ಣುಮಕ್ಕಳ ಮದುವೆ ವಯಸ್ಸು: ಸಲಹೆ ಆಹ್ವಾನಿಸಿದ ಸಂಸದೀಯ ಸಮಿತಿ

ಪ್ರಜಾವಾಣಿ ವಾರ್ತೆ



ನವದೆಹಲಿ: ವಿವಾಹವಾಗಲು ವಧುವಿನ ಕನಿಷ್ಠ ವಯಸ್ಸನ್ನು 18ರಿಂದ 21ಕ್ಕೆ ಏರಿಸುವ ಸಂಬಂಧ ಮಸೂದೆ ಕುರಿತ ರಚನೆಯಾಗಿರುವ ಸಂಸತ್ತಿನ ಸ್ಥಾಯಿ ಸಮಿತಿಯು ಸಾರ್ವಜನಿಕರು ಹಾಗೂ ಭಾಗಿದಾರರಿಂದ ಅಭಿಪ್ರಾಯಗಳು, ಸಲಹೆಗಳನ್ನು ಆಹ್ವಾನಿಸಿದೆ.

ಬಾಲ್ಯವಿವಾಹ ನಿಯಂತ್ರಣ (ತಿದ್ದುಪಡಿ) ಮಸೂದೆ 2021 ಕುರಿತಂತೆ ಆಕ್ಷೇಪಣೆ, ಸಲಹೆಯನ್ನು 15ದಿನದಲ್ಲಿ ಲಿಖಿತವಾಗಿ ಅಥವಾ ಮೌಖಿಕವಾಗಿ ಸಲ್ಲಿಸಬಹುದು ಎಂದು ತಿಳಿಸಿದೆ. ಈ ಕುರಿತ ಹೆಚ್ಚಿನ ಮಾಹಿತಿಗೆ ರಾಜ್ಯಸಭೆಯ ವೆಬ್‌ಸೈಟ್ ವೀಕ್ಷಿಸಬಹುದು ಎಂದು ತಿಳಿಸಿದೆ. ಉದ್ದೇಶಿತ ಮಸೂದೆಯನ್ನು ಲೋಕಸಭೆಯಲ್ಲಿ ಚಳಿಗಾಲದ ಅಧಿವೇಶನದಲ್ಲಿ ಡಿಸೆಂಬರ್‌ನಲ್ಲಿ ಮಂಡಿಸಲಾಗಿತ್ತು. ಸಮಾಜದ ಕೆಲವರ್ಗದಿಂದ ಟೀಕೆ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಮಸೂದೆಯನ್ನು ಬಿಜೆಪಿ ಸಂಸದ ವಿನಯ್ ಸಹಸ್ರಬುದ್ಧೆ ನೇತೃತ್ವದ ಸ್ಥಾಯಿ ಸಮಿತಿಯ ಪರಾಮರ್ಶೆಗೆ ಒಪ್ಪಿಸಲಾಗಿತ್ತು.

ಶ್ರದ್ಧಾಂಜಲಿ



ಶ್ರೀ ಆರ್. ವೆಂಕಟರತ್ನ ಶೆಟ್ಟಿ
ನಿವೃತ್ತ ಸಹಾಯಕ ಆಯುಕ್ತರು ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು
ಅಧ್ಯಕ್ಷರು ಶ್ರೀ ಆದಿನಾರಾಯಣ ಸ್ವಾಮಿ ದೇವಾಲಯ ಸೇವಾ ಟ್ರಸ್ಟ್
ಅಧ್ಯಕ್ಷರು ನಾಮಧಾರಿ ನಗರ್ತಜನಾಂಗ ಕಲ್ಯಾಣ ಸಂಘ
ನಗರ್ತರ ಪೇಟೆ, ಬೆಂಗಳೂರು

ದಿನಾಂಕ 10-01-2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದಿನಾಂಕ 25-01-2022 ಪುಣ್ಯತಿಥಿಯನ್ನು ಸ್ವಗೃಹದಲ್ಲಿ ನೆರವೇರಿಸಲಾಗುವುದು. ದಿನಾಂಕ 26-01-2022 ರಂದು ವೈಕುಂಠ ಸಮಾರಾಧನೆಯನ್ನು ಬೆಳಿಗ್ಗೆ 11:00 ಗಂಟೆಗೆ "ಗಂಜಾಂ ಮಂಟಪ" ಬುಲ್ ಟೆಂಪಲ್ ರಸ್ತೆ, ಬಸವನಗುಡಿ, ಬೆಂಗಳೂರು ಇಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು: ಪತ್ನಿ, ಮಕ್ಕಳು, ಕುಟುಂಬಸ್ಥರು ಮತ್ತು ಸ್ನೇಹಿತರು.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ. ಟಿ. ರಾಮೇಗೌಡ
KMAS, ನಿವೃತ್ತ ರೆವೆನ್ಯೂ ಆಫೀಸರ್
27.10.1948 – 18.01.2022
ಇವರ ಉತ್ತರಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ: 28.01.2022 ಶುಕ್ರವಾರ ಬೆಳಿಗ್ಗೆ 6.30ಕ್ಕೆ ಹಮ್ಮಿಕೊಳ್ಳಲಾಗಿದೆ
ದುಃಖತಪ್ತರು: ಮಡದಿ ಮತ್ತು ಮಕ್ಕಳು

7ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಲಿಂಗಪ್ಪ. ಎಲ್.
ಮರಣ : 24–01–2015
ಸದಾ ನಿಮ್ಮ ಸ್ಮರಣೆಯಲ್ಲಿ:
ಪತ್ನಿ, ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.



ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಅವರ ಆಟದ ಭಂಗಿ –ರಾಯಿಟರ್ಸ್ ಚಿತ್ರ

ಎಂಟರ ಘಟ್ಟಕ್ಕೆ ನಡಾಲ್, ಬಾರ್ಟಿ

ಆಸ್ಟ್ರೇಲಿಯನ್ ಓಪನ್ ಟೆನಿಸ್: ಬಾರ್ಬರಾಗೆ ಗೆಲುವು

ಮೆಲ್ಬರ್ನ್ (ಎಪಿ/ಎಎಫ್‌ಪಿ): ದಾಖಲೆ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಸ್ಪೇನ್‌ನ ರಫೆಲ್ ನಡಾಲ್ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಮಹಿಳಾ ವಿಭಾಗದಲ್ಲಿ ಸ್ಥಳೀಯ ಆಟಗಾರ್ತಿ ಆ್ಯಶ್ಲಿ ಬಾರ್ಟಿ ಎಂಟರ ಘಟ್ಟ ಪ್ರವೇಶಿಸಿದ್ದಾರೆ.

ರಾಡ್ ಲೇವರ್ ಅರೆನಾದಲ್ಲಿ ನಡೆದ ಹಣಾಹಣಿಯಲ್ಲಿ ಫ್ರಾನ್ಸ್‌ನ ಅಡ್ರಿಯನ್ ಮನಾರಿನೊ ಮೊದಲ ಸೆಟ್‌ನಲ್ಲಿ ನಡಾಲ್ ಅವರಿಗೆ ಪ್ರಬಲ ಪೈಪೋಟಿ ನೀಡಿದರು. ಟೈಬ್ರೇಕರ್‌ನಲ್ಲಿ ಸೆಟ್ ಗೆದ್ದ ನಡಾಲ್ ಸುಲಭವಾಗಿ ಮುನ್ನಡೆದರು. 7-6 (14), 6-2, 6-2ರಲ್ಲಿ ಜಯ ಗಳಿಸಿ ಟೂರ್ನಿಯಲ್ಲಿ 14ನೇ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಸಾಧನೆ ಮಾಡಿದರು. ಎಡಗೈ ಆಟಗಾರ ಮನಾರಿನೊ ಅವರ ಸವಾಲನ್ನು ತಾಳ್ಮೆಯಿಂದ ದಿಟ್ಟವಾಗಿ ಎದುರಿಸಿದ ನಡಾಲ್ ಮೊದಲ ಸೆಟ್‌ನ ಟೈಬ್ರೇಕರ್‌ನಲ್ಲಿ ಜಯ ಗಳಿಸಲು 28 ನಿಮಿಷ ಹಾಗೂ 40 ಸೆಕೆಂಡುಗಳನ್ನು ತೆಗೆದುಕೊಂಡಿದ್ದರು.

ಈ ಗೆಲುವಿನೊಂದಿಗೆ, 21ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆಲ್ಲುವ ಅವರ ಹಾದಿ ಇನ್ನಷ್ಟು ಸುಲಭವಾಗಿದೆ. ಮುಂದಿನ ಪಂದ್ಯದಲ್ಲಿ ಅವರು ಕೆನಡಾದ ಡೆನಿಸ್ ಶಪವಲೊವ್ ಎದುರು ಸೆಣಸುವರು. ಶಪ ವಲೊವ್ ಅವರು ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರನ್ನು 6-3, 7-6 (5), 6-3ರಲ್ಲಿ ಮಣಿಸಿದರು.

ಬಾರ್ಟಿ, ಕ್ರೆಜಿಕೋವಾಗೆ ಗೆಲುವು: ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ ಅವರನ್ನು 6-2, 6-2ರಲ್ಲಿ ಮಣಿಸಿದ ಜೆಕ್ ಗಣರಾಜ್ಯದ ಬಾರ್ಬರಾ ಕ್ರೆಜಿಕೋವಾ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಪೌಲಾ ಬಡೋಸಾ ಎದುರು 6-3, 6-1ರಲ್ಲಿ ಗೆದ್ದ ಅಮೆರಿಕದ ಮ್ಯಾಡಿಸನ್ ಕೀ ಅವರನ್ನು ಅಜರೆಂಕಾ ಮುಂದಿನ ಪಂದ್ಯದಲ್ಲಿ ಎದುರಿಸುವರು.

ಅಮಾಂಡ ಅನಿಸಿಮೋವ ವಿರುದ್ಧ ಆ್ಯಶ್ಲಿ ಬಾರ್ಟಿ 6-4, 6-3ರಲ್ಲಿ ಜಯ ಗಳಿಸಿದರು. ಅಮೆರಿಕದ ಜೆಸ್ಸಿಕಾ ಪೆಗುಲಾ ಅವರನ್ನು ಬಾರ್ಟಿ ಮುಂದಿನ ಹಂತದಲ್ಲಿ ಎದುರಿಸುವರು.

ದಾಖಲೆಯಲ್ಲಿ ನಡಾಲ್‌ಗೆ 2ನೇ ಸ್ಥಾನ

ರಫೆಲ್ ನಡಾಲ್, ಆಸ್ಟ್ರೇಲಿಯನ್ ಓಪನ್‌ನಲ್ಲಿ ಅತಿ ಹೆಚ್ಚು ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದವರ ಪಟ್ಟಿಯಲ್ಲಿ ಎರಡನೇ ಸ್ಥಾನ ಹಂಚಿಕೊಂಡರು. ಆಸ್ಟ್ರೇಲಿಯಾದ ಜಾನ್ ನ್ಯೂಕಾಂಬ್ ಕೂಡ 14 ಬಾರಿ ಈ ಸಾಧನೆ ಮಾಡಿದ್ದಾರೆ. 15 ಬಾರಿ ಎಂಟರ ಘಟ್ಟ ತಲುಪಿರುವ ರೋಜರ್ ಫೆಡರರ್ ಮೊದಲ ಸ್ಥಾನದಲ್ಲಿದ್ದಾರೆ. ಒಟ್ಟಾರೆ ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ ಅತಿ ಹೆಚ್ಚು ಕ್ವಾರ್ಟರ್ ಫೈನಲ್ ಪ್ರವೇಶಿಸಿದವರ ಸಾಲಿನಲ್ಲಿ ನಡಾಲ್ ಮೂರನೇ ಸ್ಥಾನದಲ್ಲಿದ್ದಾರೆ. ರೋಜರ್ ಫೆಡರರ್ ಒಟ್ಟು 58 ಬಾರಿ ಈ ಸಾಧನೆ ಮಾಡಿದ್ದರೆ, ನೊವಾಕ್ ಜೊಕೊವಿಚ್ 51 ಬಾರಿ ಮಾಡಿದ್ದಾರೆ. ನಡಾಲ್‌ಗೆ ಇದು 45ನೇ ಕ್ವಾರ್ಟರ್ ಫೈನಲ್. ಅತಿ ಹೆಚ್ಚು, 20 ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಗೆದ್ದಿರುವ ದಾಖಲೆಯನ್ನು ಫೆಡರರ್ ಮತ್ತು ಜೊಕೊವಿಚ್ ಜೊತೆ ನಡಾಲ್ ಹಂಚಿಕೊಂಡಿದ್ದಾರೆ.

ಸಾನಿಯಾ–ರಾಜೀವ್ ಕ್ವಾರ್ಟರ್ ಫೈನಲ್‌ಗೆ

ಭಾರತದ ಸಾನಿಯಾ ಮಿರ್ಜಾ ಮತ್ತು ಅಮೆರಿಕದ ರಾಜೀವ್ ರಾಮ್ ಜೋಡಿ ಮಿಶ್ರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅಲೆನ್ ಪೆರೆಜ್ ಮತ್ತು ಮ್ಯಾಟ್ವ ಮಿಡೆಲ್‌ಕೂಪ್ ಎದುರಿನ ಪಂದ್ಯದಲ್ಲಿ ಈ ಜೋಡಿ 7-6 (8/6),6-4ರಲ್ಲಿ ಜಯ ಗಳಿಸಿತು.

ಶ್ರೇಯಾಂಕರಹಿತ ಭಾರತ–ಅಮೆರಿಕ ಜೋಡಿಗೆ ಎರಡನೇ ಸುತ್ತಿನ ಈ ಪಂದ್ಯ ಗೆಲ್ಲಲು ಒಂದು ತಾಸು 27 ನಿಮಿಷ ಸಾಕಾಯಿತು. ಮೊದಲ ಸುತ್ತಿನ ಪಂದ್ಯದಲ್ಲಿ ಸರ್ಬಿಯಾದ ಅಲೆಕ್ಸಾಂಡ್ರ ಕ್ರೂನಿಕ್ ಮತ್ತು ನಿಕೋಲ ಕಾಸಿಕ್ ಎದುರು ಈ ಜೋಡಿ ಗೆಲುವು ಸಾಧಿಸಿತ್ತು.

ಆರು ಬಾರಿಯ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ವಿಜೇತೆ ಸಾನಿಯಾ ಮಿರ್ಜಾ ಈ ಋತುವಿನ ನಂತರ ಟೆನಿಸ್‌ಗೆ ವಿದಾಯ ಹೇಳುವುದಾಗಿ ಮಹಿಳೆಯರ ಡಬಲ್ಸ್ ಪಂದ್ಯದಲ್ಲಿ ಸೋತ ನಂತರ ಘೋಷಿಸಿದ್ದರು. ಸದ್ಯ ಯಾವುದೇ ವಿಭಾಗದಲ್ಲಿ ಕಣದಲ್ಲಿ ಉಳಿದಿರುವ ಭಾರತದ ಏಕೈಕ ಟೆನಿಸ್ ಪಟು ಆಗಿದ್ದಾರೆ ಅವರು.

ಭಾರತದ ವಿರುದ್ಧ ಏಕದಿನ ಕ್ರಿಕೆಟ್ ಸರಣಿ: ದಕ್ಷಿಣ ಆಫ್ರಿಕಾಕ್ಕೆ 3–0 ಯಿಂದ ಜಯ; ಕ್ವಿಂಟನ್ ಶತಕ

ದೀಪಕ್ ವೀರೋಚಿತ ಆಟ ವ್ಯರ್ಥ

ಕೇಪ್‌ಟೌನ್ (ಪಿಟಿಐ/ಎಎಫ್‌ಪಿ): ದೀಪಕ್ ಚಾಹರ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರ ದಿಟ್ಟೆದೆಯ ಬ್ಯಾಟಿಂಗ್‌ಗೆ ಗೆಲುವು ಒಲಿಯಲಿಲ್ಲ.

ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ನಡೆದ ಮೂರನೇ ಮತ್ತು ಕೊನೆಯ ಏಕದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 4 ರನ್‌ಗಳ ರೋಚಕ ಜಯ ಸಾಧಿಸಿತು. ಸರಣಿಯನ್ನು 3–0ಯಿಂದ ಕ್ಲೀನ್ ಸ್ವೀಪ್ ಮಾಡಿತು. ಸುಂದರ ಶತಕ ದಾಖಲಿಸಿದ ಕ್ವಿಂಟನ್ ಡಿ ಕಾಕ್ ಆಟಕ್ಕೆ ಜಯ ಒಲಿಯಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡವು ಆರಂಭದಲ್ಲಿ ಯಶಸ್ಸು ಗಳಿಸಿತು. ದಕ್ಷಿಣ ಆಫ್ರಿಕಾ ತಂಡವು 70 ರನ್‌ಗಳಾಗುಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡಿತು.

ಆದರೆ ಆರಂಭಿಕ ಬ್ಯಾಟರ್ ಕ್ವಿಂಟನ್ (124; 130ಎ, 4X12, 6X2) ಮತ್ತು ರಸಿ ವ್ಯಾನ್ ಡರ್ ಡಸೆನ್ (52; 59ಎ, 4X4, 6X1) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 144 ರನ್ ಸೇರಿಸಿದರು. ಇದರಿಂದಾಗಿ ತಂಡವು 49.5 ಓವರ್‌ಗಳಲ್ಲಿ 287 ರನ್ ಗಳಿಸಿ ಆಲೌಟ್ ಆಯಿತು. ಕನ್ನಡಿಗ ಪ್ರಸಿದ್ಧ ಕೃಷ್ಣ ಮೂರು ವಿಕೆಟ್‌ಗಳನ್ನು ಗಳಿಸಿದರು.

ಅದಕ್ಕುತ್ತರವಾಗಿ ಭಾರತ ತಂಡವು 49.2 ಓವರ್‌ಗಳಲ್ಲಿ 283 ರನ್ ಗಳಿಸಿ ಆಲೌಟ್ ಆಯಿತು. ತಂಡವು 223 ರನ್‌ಗಳಿಗೆ ಏಳು ವಿಕೆಟ್ ಕಳೆದುಕೊಂಡ ಹಂತದಲ್ಲಿ ದೀಪಕ್ (54; 34ಎಸೆತ) ಅಮೋಘ ಅರ್ಧಶತಕ ಗಳಿಸಿ, ತಂಡದಲ್ಲಿ ಜಯದ ಆಸೆ ಚಿಗುರಿಸಿದರು. ಅವರಿಗೆ ಜಸ್‌ಪ್ರೀತ್ ಬೂಮ್ರಾ (12; 15ಎ) ಉತ್ತಮ ಜೊತೆ ನೀಡಿದರು.



ಡಿ ಕಾಕ್ –ರಾಯಿಟರ್ಸ್ ಚಿತ್ರ

ಆದರೆ ಲುಂಗಿ ಗಿಡಿ ಮತ್ತು ಪಿಶುವಾಯೊ ಅವರ ಬೌಲಿಂಗ್ ಮುಂದೆ ಕೊನೆಯ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಗೆಲುವಿನ ದಡ ಸೇರಲು ಸಾಧ್ಯವಾಗಲಿಲ್ಲ. **ಶಿಖರ್, ಕೊಹ್ಲಿ ಅರ್ಧಶತಕ:** ಈ ಪಂದ್ಯದಲ್ಲಿ ಭಾರತಕ್ಕೆ ತುಸು ಸಮಾಧಾನ ತಂದ ಅಂಶವೆಂದರೆ ಶಿಖರ್ ಧವನ್ ಮತ್ತು ವಿರಾಟ್ ಕೊಹ್ಲಿಯವರ ಅರ್ಧಶತಕಗಳು. ಎರಡನೇ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದ್ದ ದೆಹಲಿಯ ಜೋಡಿಯು ಇಲ್ಲಿ ಭರವಸೆಯ ಆಟವಾಡಿತು. ಸವಾಲಿನ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಬೇಗನೆ ಆಘಾತವಾಯಿತು. ಲುಂಗಿ ಗಿಡಿ ಬೌಲಿಂಗ್‌ನಲ್ಲಿ ಕೆ.ಎಲ್. ರಾಹುಲ್ (9 ರನ್) ಔಟಾದರು.

ಈ ಹಂತದಲ್ಲಿ ಜೊತೆಗೂಡಿದ ಶಿಖರ್ ಮತ್ತು ಕೊಹ್ಲಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 98 ರನ್‌ಗಳನ್ನು ಸೇರಿಸಿದರು. ಶಿಖರ್ 58 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಆದರೆ, 23ನೇ ಓವರ್‌ನಲ್ಲಿ ಶಿಖರ್ ವಿಕೆಟ್ ಪಡೆದ ಪಿಶುವಾಯೊ, ಅದೇ ಓವರ್‌ನಲ್ಲಿ ರಿಷಭ್ ಪಂತ್ ವಿಕೆಟ್ ಕೂಡ ಕಬಳಿಸಿದರು.



ದೀಪಕ್ ಚಾಹರ್ ಅವರ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಆಗ ವಿರಾಟ್ ತಮ್ಮ ಆಟಕ್ಕೆ ವೇಗ ನೀಡಲು ಯತ್ನಿಸಿದರು. 63 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಅವರ ಆಟವನ್ನು ಗಣ್ಯರ ಗ್ಯಾಲರಿಯಲ್ಲಿದ್ದ ಪತ್ನಿ ಅನುಷ್ಕಾ ಶರ್ಮಾ ಅವರು ತಮ್ಮ ಮಗಳು ವೊಮಿಕಾಳೊಂದಿಗೆ ನೋಡಿದರು. ಅರ್ಧಶತಕ ಪೂರೈಸಿದ ಕೊಹ್ಲಿ ತಮ್ಮ ಬ್ಯಾಟ್‌ನ್ನೇ ಮಗುವಿನಂತೆ ಮಡಿಲಲ್ಲಿಟ್ಟು ಆಡಿಸಿ ಸಂಭ್ರಮಿಸಿದರು.

ಆದರೆ, ಅವರು ಎರಡು ವರ್ಷಗಳ ನಂತರ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಶತಕ ದಾಖಲಿಸುವ ನಿರೀಕ್ಷೆ ಹುಸಿಯಾಯಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 49.5 ಓವರ್‌ಗಳಲ್ಲಿ 287 (ಕ್ವಿಂಟನ್ ಡಿ ಕಾಕ್ 124, ರಸಿ ವ್ಯಾನ್ ಡರ್ ಡಸೆನ್ 52, ಡೇವಿಡ್ ಮಿಲ್ಲರ್ 39, ಡ್ವೇನ್ ಪ್ರಿಟೋರಿಯಸ್ 20, ದೀಪಕ್ ಚಾಹರ್ 53ಕ್ಕೆ2, ಜಸ್‌ಪ್ರೀತ್ ಬೂಮ್ರಾ 52ಕ್ಕೆ2, ಪ್ರಸಿದ್ಧ ಕೃಷ್ಣ 59ಕ್ಕೆ3, ಯಜುವೇಂದ್ರ ಚಾಹಲ್ 47ಕ್ಕೆ1), ಭಾರತ: 49.2 ಓವರ್‌ಗಳಲ್ಲಿ 283 (ಶಿಖರ್ ಧವನ್ 61, ವಿರಾಟ್ ಕೊಹ್ಲಿ 65, ಶ್ರೇಯಸ್ ಅಯ್ಯರ್ 26, ಸೂರ್ಯಕುಮಾರ್ ಯಾದವ್ 39, ದೀಪಕ್ ಚಾಹರ್ 54, ಜಸ್‌ಪ್ರೀತ್ ಬೂಮ್ರಾ 12). **ಫಲಿತಾಂಶ:** ದಕ್ಷಿಣ ಆಫ್ರಿಕಾಕ್ಕೆ 4 ರನ್‌ಗಳ ಜಯ; 3 ಪಂದ್ಯಗಳ ಸರಣಿ 3–0ಯಿಂದ ಕೈವಶ. **ಪಂದ್ಯ ಮತ್ತು ಸರಣಿಯ ಉತ್ತಮ ಆಟಗಾರ:** ಕ್ವಿಂಟನ್ ಡಿಕಾಕ್.

ದಾಖಲೆ ಸಮಗಟ್ಟಿದ ಸುನಿಲ್ ಚೆಟ್ರಿ

ಐಎಸ್‌ಎಲ್ ಟೂರ್ನಿ: ಬೆಂಗಳೂರು–ಗೋವಾ ಪಂದ್ಯ ಡ್ರಾ

ಬ್ಯಾಂಬೊಲಿಮ್ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಎಂಟನೇ ಆವೃತ್ತಿಯಲ್ಲಿ ಮೊದಲ ಗೋಲು ದಾಖಲಿಸಿದ ನಾಯಕ ಸುನಿಲ್ ಚೆಟ್ರಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡದ ಸೋಲನ್ನು ತಪ್ಪಿಸಿದರು. ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಬಿಎಫ್‌ಸಿ ಮತ್ತು ಎಫ್‌ಸಿ ಗೋವಾ ನಡುವಿನ ಪಂದ್ಯ 1–1ರಲ್ಲಿ ಡ್ರಾ ಆಯಿತು.

ಜಿದ್ದಾಜಿದ್ದಿಯ ಹಣಾಹಣಿಯ 41ನೇ ನಿಮಿಷದಲ್ಲಿ ಡೈಲನ್ ಫಾಕ್ಸ್ ಗಳಿಸಿದ ಗೋಲಿನೊಂದಿಗೆ ಗೋವಾ ಮುನ್ನಡೆ ಸಾಧಿಸಿತ್ತು. 61ನೇ ನಿಮಿಷದಲ್ಲಿ ಚೆಟ್ರಿ ಚೆಂಡನ್ನು ಗುರಿ ಸೇರಿಸಿ ಸಮಬಲದ ಗೋಲು ತಂದುಕೊಟ್ಟರು. ಇದು ಐಎಸ್‌ಎಲ್‌ನಲ್ಲಿ ಅವರ 48ನೇ ಗೋಲು. ಈ ಮೂಲಕ ಲೀಗ್‌ನಲ್ಲಿ ಅತಿ ಹೆಚ್ಚು ಗೋಲು ಗಳಿಸಿದ ಫೆರಾನ್ ಕೊರೊಮಿನಾಸ್ ದಾಖಲೆಯ ಸಮಗಟ್ಟಿದರು.



ಸುನಿಲ್ ಚೆಟ್ರಿ ಅವರನ್ನು ಸಹ ಆಟಗಾರರು ಅಭಿನಂದಿಸಿದರು

ಬಲಬದಿಯಲ್ಲಿ ಪ್ರಿನ್ಸ್ ಇಬಾರ ಮೋಹಕ ಆಟವಾಡಿ ಸುನಿಲ್ ಚೆಟ್ರಿಯ ಕಡೆಗೆ ಚೆಂಡನ್ನು ಕ್ರಾಸ್ ಮಾಡಿದರು. ಚೆಟ್ರಿ ಬಲಶಾಲಿಯಾಗಿ ಹೆಡ್ ಮಾಡಿ ಗುರಿ ಮುಟ್ಟಿಸಿದರು.

ಫತೋರ್ಡದಲ್ಲಿ ರಾತ್ರಿ ನಡೆದ ಎಟಿಕೆ ಮೋಹನ್ ಬಾಗನ್ ಮತ್ತು ಒಡಿಶಾ ಎಫ್‌ಸಿ ನಡುವಿನ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು.

ಇಂದಿನ ಪಂದ್ಯ

ಈಸ್ಟ್ ಬೆಂಗಾಲ್–ಹೈದರಾಬಾದ್ ಎಫ್‌ಸಿ

ಸ್ಥಳ: ತಿಲಕ್ ಮೈದಾನ್

ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮಣಿಪುರದಲ್ಲಿ ಮೇರಿ ಅಭ್ಯಾಸ

ನವದೆಹಲಿ (ಪಿಟಿಐ): ಕೋವಿಡ್–19 ಪ್ರಕರಣಗಳ ಹೆಚ್ಚಳ ಮತ್ತು ಅತಿಯಾದ ಚಳಿಯಿಂದಾಗಿ ದೆಹಲಿಯಲ್ಲಿ ಅಭ್ಯಾಸ ನಡೆಸದೇ ಇರಲು ನಿರ್ಧರಿಸಿರುವ ಬಾಕ್ಸರ್ ಮೇರಿ ಕೋಮ್ ತವರೂರು ಮಣಿಪುರಕ್ಕೆ ಸ್ಥಳಾಂತರಗೊಂಡಿದ್ದಾರೆ.

ಆರು ಬಾರಿಯ ವಿಶ್ವ ಚಾಂಪಿಯನ್ ಮತ್ತು ಒಲಿಂಪಿಕ್ಸ್ ಪದಕ ವಿಜೇತೆ ಮೇರಿ ಕೋಮ್ ಮೇ ತಿಂಗಳಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್, ಜುಲೈನಿಂದ ಆಗಸ್ಟ್ ವರೆಗೆ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್ ಮತ್ತು ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಸಿದ್ಧರಾಗುತ್ತಿದ್ದಾರೆ.

‘ಕೆಲವು ದಿನಗಳಿಂದ ಮಣಿಪುರದಲ್ಲಿ ಅಭ್ಯಾಸ ಮಾಡುತ್ತಿದ್ದೇನೆ. ಭಾರತ ಬಾಕ್ಸಿಂಗ್ ಫೆಡರೇಷನ್ ಮತ್ತು ಕ್ರೀಡಾ ಪ್ರಾಧಿಕಾರದಿಂದ ಅನುಮತಿ ಪಡೆದುಕೊಂಡು ಇಲ್ಲಿಗೆ ಬಂದಿದ್ದೇನೆ. ದೆಹಲಿಯಲ್ಲಿ ಈಚೆಗೆ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ. ಸೂರ್ಯ ಗೋಚರಿಸುವುದೇ ಅಪರೂಪವಾಗಿದೆ’ ಎಂದು ಮೇರಿ ಕೋಮ್ ಹೇಳಿದರು.

ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ನಲ್ಲಿ 51 ಕೆಜಿ ವಿಭಾಗದಲ್ಲಿ ಸ್ಪರ್ಧಿಸಲು ಬಯಸಿರುವ ಮೇರಿ ಕೋಮ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 48 ಕೆಜಿ ವಿಭಾಗದಲ್ಲಿ ಸ್ಪರ್ಧಿಸುವ ನಿರೀಕ್ಷೆಯಲ್ಲಿದ್ದಾರೆ. ಕೋಚ್ ಚೋಟೆ ಲಾಲ್ ಯಾದವ್ ಮತ್ತು ನೆರವು ಸಿಬ್ಬಂದಿ ಜೊತೆ ಈಗ ತಮ್ಮದೇ ಅಕಾಡೆಮಿಯಲ್ಲಿದ್ದಾರೆ. ಅಕಾಡೆಮಿಗೆ ಸಾಯ್ ಮಾನ್ಯತೆ ನೀಡಿದೆ.

ದೆಹಲಿಯಲ್ಲಿ ಮಹಿಳೆಯರ ರಾಷ್ಟ್ರೀಯ ಬಾಕ್ಸಿಂಗ್ ಶಿಬಿರ ಆರಂಭವಾಗಿದ್ದು 42 ಮಂದಿ ಅಭ್ಯಾಸ ಮಾಡುತ್ತಿದ್ದಾರೆ. ಲವ್ಲಿನಾ ಬೋರ್ಗೊಹೈನ್ ಈ ವಾರಾಂತ್ಯದಲ್ಲಿ ಶಿಬಿರವನ್ನು ಸೇರಿಕೊಳ್ಳಲಿದ್ದಾರೆ. ಅವರು 69 ಕೆಜಿ ವಿಭಾಗದಲ್ಲಿ ಅಭ್ಯಾಸ ಮಾಡಲಿದ್ದಾರೆ.

ಹೊಗೇನಕಲ್–2 ಯೋಜನೆ: ಕರ್ನಾಟಕದ ಧೋರಣೆ ಟೀಕಿಸಿದ ಎಐಎಡಿಎಂಕೆ

ಚೆನ್ನೈ (ಪಿಟಿಐ): ಹೊಗೇನಕಲ್ ಕುಡಿಯುವ ನೀರಿನ ಯೋಜನೆಯ ಎರಡನೇ ಹಂತವನ್ನು ವಿರೋಧಿಸುತ್ತಿರುವ ಕರ್ನಾಟಕ ಸರ್ಕಾರವನ್ನು ತಮಿಳುನಾಡಿನ ಪ್ರಮುಖ ವಿರೋಧ ಪಕ್ಷವಾದ ಎಐಎಡಿಎಂಕೆ ಭಾನುವಾರ ಕಟುವಾಗಿ ಟೀಕಿಸಿದೆ. ಈ ಯೋಜನೆ ಬಗ್ಗೆ ಪ್ರಶ್ನಿಸಲು ಕರ್ನಾಟಕಕ್ಕೆ ಯಾವುದೇ ನೈತಿಕ ಅಥವಾ ಕಾನೂನು ಹಕ್ಕಿಲ್ಲ ಎಂದು ಹೇಳಿದೆ.

ದಿವಂಗತ ಎಂ. ಕರುಣಾನಿಧಿ ಅವರು ಮುಖ್ಯಮಂತ್ರಿಯಾಗಿದ್ದಾಗ, 2008 ರಲ್ಲಿ ಡಿಎಂಕೆ ಆಡಳಿತದಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ತಮಿಳುನಾಡಿನ ಧರ್ಮಪುರಿ ಮತ್ತು ಕೃಷ್ಣಗಿರಿ ಜಿಲ್ಲೆಗಳ ಜನರ ಬಹುಕಾಲದ ಕನಸಾದ ಹೊಗೇನಕಲ್ ಕುಡಿಯುವ ನೀರಿನ ಯೋಜನೆಯನ್ನು ದಿವಂಗತ ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರು ಈಡೇರಿಸಿದ್ದಾರೆ ಎಂದು ಪಕ್ಷದ ಮುಖಂಡ ಓ. ಪನ್ನೀರಸೆಲ್ವಂ ಹೇಳಿದ್ದಾರೆ.

ಹೊಗೇನಕಲ್ ಯೋಜನೆಯನ್ನು (ಮೊದಲ ಹಂತ) ಜಾರಿಗೆ ತಂದಿರುವುದು ಎಐಎಡಿಎಂಕೆ ಎಂದು ಹೇಳಿಕೊಂಡಿರುವ ಪನ್ನೀರಸೆಲ್ವಂ, ‘ಈ ಎರಡನೇ ಹಂತದ ಯೋಜನೆಯನ್ನು ಜಾರಿಗೊಳಿಸಲು ತಮಿಳುನಾಡಿಗೆ ಎಲ್ಲಾ ಹಕ್ಕುಗಳಿವೆ. ಡಿಎಂಕೆ ಸರ್ಕಾರ ಇದನ್ನು ಜಾರಿಗೊಳಿಸಬೇಕು. ಈ ಯೋಜನೆ ಅನುಷ್ಠಾನಕ್ಕೆ ಎಐಎಡಿಎಂಕೆ ಸರ್ಕಾರಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತದೆ’ ಎಂದು ಹೇಳಿದ್ದಾರೆ.

ಜಿಡಿಪಿ ಶೇ 9 ಬೆಳವಣಿಗೆ ನಿರೀಕ್ಷೆ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವಾಲಯವು 2021–22ನೇ ಸಾಲಿಗೆ ಒಂದೇ ಸಂಪುಟದ ಆರ್ಥಿಕ ಸಮೀಕ್ಷೆ ವರದಿಯನ್ನು ಹೊರತರುವ ಸಾಧ್ಯತೆ ಇದೆ. ಮುಂದಿನ ಹಣಕಾಸು ವರ್ಷದಲ್ಲಿ (2022–23) ದೇಶದ ಆರ್ಥಿಕತೆಯು (ಜಿಡಿಪಿ) ಶೇಕಡ 9ರಷ್ಟು ಬೆಳವಣಿಗೆ ಕಾಣಲಿದೆ ಎಂದು ಸಮೀಕ್ಷೆಯು ಅಂದಾಜು ಮಾಡಬಹುದು ಎಂದು ತಜ್ಞರು ಹೇಳಿದ್ದಾರೆ.

ಮುಂದಿನ ಹಣಕಾಸು ವರ್ಷದಲ್ಲಿ ಭಾರತದ ಜಿಡಿಪಿಯು ಶೇ 7.6ರಷ್ಟು ಬೆಳವಣಿಗೆ ಕಾಣಲಿದೆ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಹೇಳಿದೆ. ಐಸಿಆರ್‌ಎ ವರದಿಯ ಪ್ರಕಾರ, ಜಿಡಿಪಿಯು ಪ್ರಸಕ್ತ ಮತ್ತು ಮುಂದಿನ ಹಣಕಾಸು ವರ್ಷದಲ್ಲಿಯೂ ಶೇ 9ರಷ್ಟ ಬೆಳವಣಿಗೆ ದರವನ್ನು ಕಾಯ್ದುಕೊಳ್ಳಲಿದೆ.



ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಮುಂಗಡ ಅಂದಾಜಿನ ಪ್ರಕಾರ, ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್ಥಿಕತೆಯು ಶೇ 9.2ರಷ್ಟು ಬೆಳವಣಿಗೆ ಕಾಣಲಿದೆ. ಇದು ಆರ್‌ಬಿಐ ಮಾಡಿರುವ ಶೇ 9.5ಕ್ಕಿಂತಲೂ ಕಡಿಮೆ.

ದೇಶದ ಆರ್ಥಿಕತೆಯು 2022ರ ಮಾರ್ಚ್‌ಗೆ ಅಂತ್ಯವಾಗುವ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 11ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹಿಂದಿನ ವರ್ಷದ ಜನವರಿಯಲ್ಲಿ ಬಿಡುಗಡೆ ಮಾಡಿದ್ದ 2020–21ರ ಆರ್ಥಿಕ ಸಮೀಕ್ಷೆಯಲ್ಲಿ ಹೇಳಲಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ರಾಮನಗರ ರೇಷ್ಮೆ

ಮಿಶ್ರತಳಿ	₹400-642
ದ್ವಿತಳಿ	₹115-815

ಆರ್‌ಬಿಐ ಮಾಜಿ ಗವರ್ನರ್ ರಾಜನ್ ಅಭಿಪ್ರಾಯ

ಆರ್ಥಿಕ ಪುನಶ್ಚೇತನಕ್ಕೆ ಬೇಕಿದೆ ಇನ್ನಷ್ಟು ಕ್ರಮ

ಮುಖ್ಯಾಂಶಗಳು

- ಉತ್ತಮ ಬೆಳವಣಿಗೆ ಕಾಣುತ್ತಿರುವ ದೊಡ್ಡ ಕಂಪನಿ, ಐ.ಟಿ. ವಲಯ
- ಕೆಳ ಮಧ್ಯಮ ವರ್ಗದಲ್ಲಿ ಕೊಳ್ಳುವ ಶಕ್ತಿ ಕಡಿಮೆ
- ಬಜೆಟ್ ಸಂಪನ್ಮೂಲ ಹೆಚ್ಚಿಸಿಕೊಳ್ಳಲು ರಾಜನ್ ಸಲಹೆ

ನವದೆಹಲಿ (ಪಿಟಿಐ): ಸಾಂಕ್ರಾಮಿಕದಿಂದಾಗಿ ಏಟು ತಿಂದಿರುವ ದೇಶದ ಅರ್ಥವ್ಯವಸ್ಥೆಯ ಕೆಲವು ವಲಯಗಳು ಮಾತ್ರ ಚೇತರಿಕೆ ಕಾಣುವ, ಇನ್ನು ಕೆಲವು ವಲಯಗಳು ಕುಸಿತ ಕಾಣುವ ಸ್ಥಿತಿ ಉಂಟಾಗುವುದನ್ನು ತಡೆಯಲು ಕೇಂದ್ರ ಸರ್ಕಾರವು ಇನ್ನಷ್ಟು ಕೆಲಸ ಮಾಡಬೇಕಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾಜಿ ಗವರ್ನರ್ ರಘುರಾಂ ರಾಜನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತಂತ್ರಜ್ಞಾನ ವಲಯದ ಕಂಪನಿಗಳು ಹಾಗೂ ಬೃಹತ್ ಪ್ರಮಾಣದ ಉದ್ದಿಮೆಗಳು ಬೇಗನೆ ಆರ್ಥಿಕವಾಗಿ ಚೇತರಿಕೆ ಕಾಣುವುದು, ಸಣ್ಣ ಉದ್ದಿಮೆಗಳು ಹಾಗೂ ಕೈಗಾರಿಕೆಗಳು ಆರ್ಥಿಕವಾಗಿ ಸುಧಾರಿಸಿಕೊಳ್ಳುವ ವೇಗವು ಕಡಿಮೆ ಇರುವುದನ್ನು ಇಂಗ್ಲಿಷ್‌ನ ‘ಕೆ’ ಅಕ್ಷರದ ಮಾದರಿಯ ಆರ್ಥಿಕ ಪುನಶ್ಚೇತನ ಎಂದು ಕರೆಯಲಾಗುತ್ತಿದೆ.



ರಾಜನ್

‘ದೊಡ್ಡ ಕಂಪನಿಗಳು, ಐ.ಟಿ. ಮತ್ತು ಐ.ಟಿ. ಆಧಾರಿತ ವಲಯಗಳು ಒಳ್ಳೆಯ ಬೆಳವಣಿಗೆ ಕಾಣುತ್ತಿವೆ. ಇದು ಅರ್ಥ ವ್ಯವಸ್ಥೆಯಲ್ಲಿನ ಆಶಾದಾಯಕ ಚಿತ್ರಣ. ಆದರೆ, ನಿರುದ್ಯೋಗ ಇರುವುದು, ಕೊಳ್ಳುವ ಶಕ್ತಿ ಕಡಿಮೆ ಆಗಿರುವುದು, ಅದರಲ್ಲೂ ಮುಖ್ಯವಾಗಿ ಕೆಳ ಮಧ್ಯಮ ವರ್ಗದವರಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಗಿರುವುದು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಆರ್ಥಿಕ ಒತ್ತಡ ಎದುರಿಸುತ್ತಿರುವುದು ಅರ್ಥ ವ್ಯವಸ್ಥೆಯ ಮೇಲಿನ ಕಪ್ಪು ಕಲೆಗಳಂತೆ ಇವೆ’ ಎಂದು ರಾಜನ್ ಹೇಳಿದ್ದಾರೆ.

‘ಕೆ ಅಕ್ಷರದ ಮಾದರಿಯ ಆರ್ಥಿಕ ಪುನಶ್ಚೇತನ ಉಂಟಾಗದಂತೆ ನೋಡಿಕೊಳ್ಳಲು ನಾವು ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಅವರು ಹೇಳಿದ್ದಾರೆ. ಸರ್ಕಾರದ ಕೆಲವು ಉದ್ಯಮಗಳು ಸೇರಿದಂತೆ ಇತರ ಆಸ್ತಿಗಳ ಮಾರಾಟ, ಸರ್ಕಾರದ ಹೆಚ್ಚುವರಿ ಜಮೀನು ಮಾರಾಟದ ಮೂಲಕ ಬಜೆಟ್ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬಹುದು ಎಂದು ಅವರು ಸಲಹೆ ನೀಡಿದ್ದಾರೆ.

ಮಾರುಕಟ್ಟೆ ಸ್ಥಿರವಾದರೆ ಐಪಿಒಗೆ: ಮೊಬಿಕ್ವಿಕ್

ನವದೆಹಲಿ (ಪಿಟಿಐ): ‘ಆರಂಭಿಕ ಸಾರ್ವಜನಿಕ ಕೊಡುಗೆಯು (ಐಪಿಒ) ಕಂಪನಿಗೆ ಒಂದು ಅವಿಸ್ಮರಣೀಯ ಅವಕಾಶ. ಹಾಗಾಗಿ, ಬಂಡವಾಳ ಮಾರುಕಟ್ಟೆ ಸ್ಥಿತಿಯು ಸ್ಥಿರವಾಗುವವರೆಗೂ ಐಪಿಒಗೆ ಬರುವುದಿಲ್ಲ’ ಎಂದು ಮೊಬಿಕ್ವಿಕ್ ಅಧ್ಯಕ್ಷೆ ಉಪಾಸನಾ ತಕು ತಿಳಿಸಿದ್ದಾರೆ.

2022ರ ನವೆಂಬರ್‌ವರೆಗೂ ಐಪಿಒಗೆ ಅವಕಾಶ ಇದೆ. ಸದ್ಯ, ಮಾರುಕಟ್ಟೆ ವರ್ತನೆಯು ಏರಿಳಿತಗಳಿಂದ ಕೂಡಿದೆ. ಇಂತಹ ಸಂದರ್ಭದಲ್ಲಿ ಅಪಾಯಕ್ಕೆ ಒಡ್ಡಿಕೊಳ್ಳಲು ಬಯಸುವುದಿಲ್ಲ ಎಂದು ಹೇಳಿದ್ದಾರೆ. ಕಂಪನಿಯು ಐಪಿಒ ಮೂಲಕ ₹ 1,500 ಕೋಟಿ ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದೆ.

ಐಪಿಒಗೆ ಸಲ್ಲಿಸಿರುವ ಕರಡು ದಾಖಲೆ ಪತ್ರಗಳಲ್ಲಿ ಇರುವ ಮಾಹಿತಿಯ ಪ್ರಕಾರ, ಕೋವಿಡ್ ಸಾಂಕ್ರಾಮಿಕದಿಂದಾಗಿ ವಹಿವಾಟಿನ ಮೇಲೆ ಪರಿಣಾಮ ಉಂಟಾಗಿದೆ. ಬೈ ನೌ ಪೆ ಲೇಟರ್ (ಬಿಎನ್‌ಪಿಎಲ್) ವಹಿವಾಟಿನ ಮೌಲ್ಯವು 2020–21ರಲ್ಲಿ ₹ 299.94 ಕೋಟಿಯಷ್ಟಾಗಿದೆ. 2019–20ರಲ್ಲಿ ಇದ್ದ ₹ 485.49 ಕೋಟಿಗೆ ಹೋಲಿಸಿದರೆ ಶೇ 38.22ರಷ್ಟು ಇಳಿಕೆ ಆಗಿದೆ.

ಸದ್ಯದ ವಹಿವಾಟು ಕೋವಿಡ್‌ಗೂ ಮುಂಚಿನ ಮಟ್ಟವನ್ನು ದಾಟಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಬಿಎನ್‌ಪಿಎಲ್ ವಹಿವಾಟು 22 ಪಟ್ಟು ಹೆಚ್ಚಾಗಿದೆ. ಪಾವತಿ ವಹಿವಾಟು ಮೂರು ಪಟ್ಟು ಬೆಳವಣಿಗೆ ಕಂಡಿದೆ ಎಂದು ಹೇಳಿದ್ದಾರೆ.

ಗೃಹಸಾಲದ ಹೊರೆ ಇಳಿಕೆಗೆ 2 ಆಯ್ಕೆಗಳು



ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಗೃಹ ಸಾಲದ ಕುರಿತು ಮಾತು ಬಂದಾಗಲೆಲ್ಲ, ‘ಸಾಲದ ಹೊರೆ ಇಳಿಸುವುದು ಹೇಗೆ? ಬ್ಯಾಂಕಿನವರು ಬಡ್ಡಿ ಜಾಸ್ತಿ ಮಾಡಿದ್ದಾರೆ, ಏನು ಮಾಡುವುದು?’ ಎಂಬ ಪ್ರಶ್ನೆಗಳು ಬಹುತೇಕ ಗ್ರಾಹಕರಲ್ಲಿ ಮೂಡುತ್ತವೆ. ಈ ಎರಡೂ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಯತ್ನ ನಡೆಸೋಣ.

ಅವಧಿಗೆ ಮುನ್ನ ಮರುಪಾವತಿ ಮಾಡಿ, ಸಾಲದ ಹೊರೆ ಇಳಿಸಿ: ಅವಧಿಗೆ ಮುನ್ನವೇ ಸಾಲವನ್ನು ಮರುಪಾವತಿ ಮಾಡುವುದರಿಂದ ನಿಜಕ್ಕೂ ಲಾಭವಿದೆಯೇ ಎಂದು ಅನೇಕರು ಲೆಕ್ಕಾಚಾರ ಮಾಡುತ್ತಿರುತ್ತಾರೆ. ವಾಸ್ತವದಲ್ಲಿ, ಹೆಚ್ಚುವರಿ ಹಣ ಸಿಕ್ಕಾಗಲೆಲ್ಲ ಗೃಹ ಸಾಲದ ಅಸಲು ಮೊತ್ತವನ್ನು ಪಾವತಿ ಮಾಡುತ್ತಾ ಬಂದರೆ ಬಡ್ಡಿ ಹೊರೆ ತಗ್ಗಿಸಿಕೊಳ್ಳಲು ಸಾಧ್ಯವಿದೆ. ನವೀನ್ (ಹೆಸರು ಬದಲಾಯಿಸಲಾಗಿದೆ) ಎನ್ನುವವರು ವರ್ಷದ ಹಿಂದೆ ಒಂದು ಬ್ಯಾಂಕಿನಿಂದ ಶೇ 8.45ರ ಬಡ್ಡಿ ದರದಲ್ಲಿ ₹ 35 ಲಕ್ಷ ಗೃಹ ಸಾಲ ಪಡೆದುಕೊಂಡಿದ್ದರು. 17 ವರ್ಷಗಳ ಅವಧಿಗೆ ಸಾಲ ಪಡೆದಿದ್ದಕ್ಕೆ ಪ್ರತಿಯಾಗಿ ಪ್ರತಿ ತಿಂಗಳು ₹ 32,384ನ್ನು ಇಎಂಐ ರೂಪದಲ್ಲಿ ಪಾವತಿ ಮಾಡುತ್ತಿದ್ದರು.

ವರ್ಷದ ಬಳಿಕ ನವೀನ್ ಅವರಿಗೆ ಎಲ್‌ಐಸಿ ಪಾಲಿಸಿಯೊಂದರಿಂದ ಸುಮಾರು ₹ 2.5 ಲಕ್ಷ ಸಿಕ್ಕಿತು. ಹಣ ಸಿಕ್ಕಿದ ತಕ್ಷಣ ಅವರು ಗೃಹ ಸಾಲದ ಒಂದಿಷ್ಟು ಭಾಗವನ್ನು ಮರುಪಾವತಿ ಮಾಡುವ ಬಗ್ಗೆ ಯೋಚಿಸಿದರು. ಬ್ಯಾಂಕಿನಲ್ಲಿ ವಿಚಾರಿಸಿದಾಗ ₹ 34,15,074 ಗೃಹ ಸಾಲ ಬಾಕಿ ಇರುವುದಾಗಿ ತಿಳಿದುಬಂತು. ಅಲ್ಲದೆ ಬ್ಯಾಂಕಿನ ಅಧಿಕಾರಿಗಳು, ‘ಇನ್ನು 193 ಕಂತುಗಳ ಪಾವತಿ (ಒಂದು ಕಂತಿನ ಇಎಂಐ ₹ 32,384) ಬಾಕಿ ಇದೆ. ₹ 2.5 ಲಕ್ಷ ಪಾವತಿಸಿದರೆ ಕಂತುಗಳ ಸಂಖ್ಯೆ 169ಕ್ಕೆ ಇಳಿಯುತ್ತದೆ’ ಎಂದು ತಿಳಿಸಿದರು.

ನವೀನ್ ಪ್ರತಿ ತಿಂಗಳು ₹ 32,384ರ ಇಎಂಐ ಆಧಾರದಲ್ಲೇ 17 ವರ್ಷ ಸಾಲ ಮರುಪಾವತಿ ಮಾಡುತ್ತಾ ಬಂದಿದ್ದರೆ ಬಡ್ಡಿ ಹೊರೆ ಹೆಚ್ಚುವ ಜತೆಗೆ ಸಾಲ ಮರುಪಾವತಿ ಅವಧಿಯೂ ಹೆಚ್ಚಾಗುತ್ತಿತ್ತು. ನವೀನ್ ತಮಗೆ ಸಿಕ್ಕಿದ ₹ 2.5 ಲಕ್ಷವನ್ನು ಸಾಲ ಮರುಪಾವತಿಗೆ ಬಳಸಿದ್ದರಿಂದ ಮಾಸಿಕ ಕಂತುಗಳ ಸಂಖ್ಯೆ 193ರಿಂದ ಒಂದೇ ಬಾರಿ 169ಕ್ಕೆ ಬಂತು. ಅಂದರೆ ಸಾಲದ ಹೆಚ್ಚುವರಿ ಕಂತುಗಳನ್ನು ಅವಧಿಗೂ ಮುನ್ನವೇ ಪಾವತಿ ಮಾಡಿದ ಪರಿಣಾಮ ನವೀನ್‌ಗೆ ಬರೋಬ್ಬರಿ ₹ 5,27,216 ಲಕ್ಷ ಬಡ್ಡಿ ಉಳಿತಾಯವಾಯಿತು. (ಸ್ಪಷ್ಟತೆಗೆ ಪಟ್ಟಿ ಗಮನಿಸಿ)

ಗೃಹ ಸಾಲದ ಮೇಲೆ ₹ 5.27 ಲಕ್ಷ ಬಡ್ಡಿ ಉಳಿಸಿದ ನವೀನ್!

ಪಡೆದಿದ್ದ ಒಟ್ಟು ಸಾಲ	₹ 35 ಲಕ್ಷ
ಸಾಲ ಪಡೆದಾಗ ಇದ್ದ ಬಡ್ಡಿ ದರ	ಶೇ 8.45
ಮಾಸಿಕ ಕಂತು (ಇಎಂಐ)	₹ 32,384
ಸಾಲ ಪಡೆದಿರುವ ಅವಧಿ	17 ವರ್ಷ
ಒಂದು ವರ್ಷದಲ್ಲಿ ಪಾವತಿಸಿದ್ದ ಅಸಲು	₹ 84,926
ಒಂದು ವರ್ಷದಲ್ಲಿ ಪಾವತಿಸಿದ್ದ ಬಡ್ಡಿ	₹ 3,03,682
ವರ್ಷದ ಬಳಿಕ ಬಾಕಿ ಉಳಿದಿದ್ದ ಇಎಂಐ	193
ವರ್ಷದ ಬಳಿಕ ಒಂದೇ ಬಾರಿಗೆ ಪಾವತಿಸಿದ, ಗೃಹಸಾಲದ ಅವಧಿಪೂರ್ವ ಮೊತ್ತ	₹ 2.5 ಲಕ್ಷ
₹ 2.5 ಲಕ್ಷ ಪಾವತಿಸಿದ ಬಳಿಕ ಉಳಿದ ಇಎಂಐ ಸಂಖ್ಯೆ	169
₹ 2.5 ಲಕ್ಷ ಪಾವತಿಸಿದ್ದರಿಂದ ಉಳಿತಾಯವಾದ ಬಡ್ಡಿ ಹಣ	₹ 5,27,216

ಬಡ್ಡಿ ಹೆಚ್ಚಿಸಿದರೆ ಬಳಸಿ ವರ್ಗಾವಣೆ ಅಸ್ತ್ರ: ನೀವು ಗೃಹ ಸಾಲ ಪಡೆದಿರುವ ಬ್ಯಾಂಕಿನಲ್ಲಿ ಬಡ್ಡಿ ದರ ಹೆಚ್ಚಿದ್ದು, ಮತ್ತೊಂದು ಬ್ಯಾಂಕಿನಲ್ಲಿ ಬಡ್ಡಿ ದರ ಕಡಿಮೆ ಇದ್ದರೆ ಆ ಬ್ಯಾಂಕಿಗೆ ಒಂದಿಷ್ಟು ಶುಲ್ಕ ನೀಡುವ ಮೂಲಕ ನೀವು ಗೃಹ ಸಾಲವನ್ನು ವರ್ಗಾಯಿಸಬಹುದು. ಇದನ್ನು ಬ್ಯಾಂಕಿಂಗ್ ಪರಿಭಾಷೆಯಲ್ಲಿ, ಹೋಂ ಲೋನ್ ಬ್ಯಾಲೆನ್ಸ್ ಟ್ರಾನ್ಸ್‌ಫರ್ ಎಂದು ಕರೆಯುತ್ತಾರೆ. ಖಾಸಗಿ ಬ್ಯಾಂಕಿನಲ್ಲಿನ ಸಾಲವನ್ನು ರಾಷ್ಟ್ರೀಕೃತ ಬ್ಯಾಂಕಿಗೆ ಮತ್ತು ರಾಷ್ಟ್ರೀಕೃತ ಬ್ಯಾಂಕಿನಲ್ಲಿನ ಸಾಲವನ್ನು ಖಾಸಗಿ ಬ್ಯಾಂಕಿಗೆ ವರ್ಗಾಯಿಸುವುದು ಕೂಡ ಇದರಲ್ಲಿ ಸಾಧ್ಯವಿದೆ.

ಉದಾಹರಣೆ: ಒಬ್ಬ ವ್ಯಕ್ತಿ ಬ್ಯಾಂಕ್ ಒಂದರಿಂದ ₹ 40 ಲಕ್ಷ ಗೃಹ ಸಾಲ ಪಡೆದುಕೊಂಡಿದ್ದಾನೆ ಎಂದಿಟ್ಟುಕೊಳ್ಳಿ. ಬ್ಯಾಂಕ್ ಆತನಿಗೆ ಶೇಕಡ 9.8ರ ವಾರ್ಷಿಕ ಬಡ್ಡಿ ದರ ವಿಧಿಸಿದರೆ, 20 ವರ್ಷಗಳ ಕಾಲಾವಧಿಯ ಈ ಸಾಲದ ಮಾಸಿಕ ಕಂತು (ಇಎಂಐ) ₹ 38,072 ಆಗಿರುತ್ತದೆ. ಆದರೆ, ಮತ್ತೊಂದು ಬ್ಯಾಂಕ್ ಇಷ್ಟೇ ಮೊತ್ತದ ಸಾಲವನ್ನು ಶೇ 8.3ರ ಬಡ್ಡಿದರದಲ್ಲಿ ನೀಡಿದರೆ, ಮಾಸಿಕ ಕಂತು ₹ 34,208 ಆಗುತ್ತದೆ. ಅಂದರೆ ಈ ಲೆಕ್ಕಾಚಾರದಂತೆ ತಿಂಗಳಿಗೆ ₹ 3,864 ಉಳಿತಾಯವಾಗುತ್ತದೆ. ಒಂದು ವರ್ಷಕ್ಕೆ ಬರೋಬ್ಬರಿ ₹ 46,368 ಬಡ್ಡಿ ಹಣ ಉಳಿತಾಯವಾಗುತ್ತದೆ.

ಒಂದು ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕ್‌ಗೆ ಸಾಲ ವರ್ಗಾವಣೆ ಮಾಡುವಾಗ ಸಾಕಷ್ಟು ಮಾಹಿತಿ ಕಲೆ ಹಾಕಬೇಕು. ಬಡ್ಡಿ ದರದಲ್ಲಿ ಹೆಚ್ಚು ವ್ಯತ್ಯಾಸ ಇಲ್ಲದಿದ್ದರೆ ಗೃಹ ಸಾಲ ವರ್ಗಾವಣೆ ಲಾಭದಾಯಕ ಆಗುವುದಿಲ್ಲ. ಇನ್ನು, ಸಮಯಕ್ಕೆ ಸರಿಯಾಗಿ ಸಾಲದ ಕಂತುಗಳನ್ನು ಪಾವತಿಸಿದ್ದರೆ ಮಾತ್ರ ಸಾಲ ವರ್ಗಾವಣೆ ಸಾಧ್ಯವಾಗುತ್ತದೆ.

(ಲೇಖಕ ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಬಡ್ಡಿದರ ಹೆಚ್ಚಳದ ಆತಂಕಕ್ಕೆ ಕುಸಿದ ಪೇಟೆ



ಸತತ ನಾಲ್ಕು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಜನವರಿ 21ರಂದು ಕೊನೆಗೊಂಡ ವಾರದಲ್ಲಿ ಕುಸಿತ ಕಂಡಿವೆ. 59,037 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 3.57ರಷ್ಟು ಕುಸಿದಿದೆ. 17,617 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 3.49ರಷ್ಟು ಇಳಿಕೆಯಾಗಿದೆ.

ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕುಗಳು ಬಡ್ಡಿ ದರ ಹೆಚ್ಚಳ ಮಾಡುವ ಮುನ್ಸೂಚನೆ ನೀಡಿದ ಹಿನ್ನೆಲೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದಾರೆ. ಹೀಗಾಗಿ ಷೇರುಪೇಟೆ ಸೂಚ್ಯಂಕಗಳು ಗಣನೀಯ ಕುಸಿತ ಕಂಡಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 12,643.61 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 5,804 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ವಲಯವಾರು ಪ್ರಗತಿಯಲ್ಲಿ, ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 6.5ರಷ್ಟು, ಟೆಲಿಕಾಂ ಸೂಚ್ಯಂಕ ಶೇ 5.8ರಷ್ಟು, ಫಾರ್ಮಾ ಸೂಚ್ಯಂಕ ಶೇ 5.2ರಷ್ಟು ಕುಸಿದಿವೆ. ಬಿಎಸ್‌ಇ ಪವರ್ ಸೂಚ್ಯಂಕ ಶೇ 2.6ರಷ್ಟು ಹೆಚ್ಚಳವಾಗಿದೆ. ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 3.3ರಷ್ಟು ಕುಸಿದಿದ್ದು ಎಚ್‌ಸಿಎಲ್ ಟೆಕ್ನಾಲಜೀಸ್, ಬಜಾಜ್ ಫಿನ್‌ಸರ್ವ್, ಲಾರ್ಸನ್ ಆ್ಯಂಡ್ ಟ್ಯೂಬ್ರೋ ಇನ್ಫೊಟೆಕ್, ಡಿವೀಸ್ ಲ್ಯಾಬ್ಸ್, ಅಂಬುಜಾ ಸಿಮೆಂಟ್ ಇಳಿಕೆ ಕಂಡಿವೆ. ಅದಾನಿ ಗ್ರೀನ್ ಎನರ್ಜಿ, ಹೀರೊ ಮೋಟೊಕಾರ್ಪ್, ಪವರ್ ಗ್ರಿಡ್, ಅದಾನಿ ಟ್ರಾನ್ಸ್‌ಮಿಷನ್ ಕಂಪನಿಗಳು ಗಳಿಕೆ ದಾಖಲಿಸಿವೆ.

ಮುನ್ನೋಟ: ಈ ವಾರ ಎಕ್ಸಿಸ್ ಬ್ಯಾಂಕ್, ಸೆರಾ, ಬರ್ಗರ್ ಕಿಂಗ್, ಇಂಡಿಯಾ ಮಾರ್ಟ್, ಕ್ರಾಫ್ಟ್ಸ್‌ಮೆನ್, ಎಸ್‌ಬಿಐ ಕಾರ್ಡ್ಸ್ ಆ್ಯಂಡ್ ಪೇಮೆಂಟ್ಸ್, ಸಿಪ್ಲಾ, ಫೆಡರಲ್ ಬ್ಯಾಂಕ್, ಮಾರುತಿ, ಪಿಡಿಲೈಟ್ ಇಂಡಸ್ಟ್ರೀಸ್, ಬಿಎಚ್‌ಇಎಲ್, ಕೆಇಐ ಇಂಡಸ್ಟ್ರೀಸ್, ಆರ್‌ಬಿಎಲ್ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಬಜೆಟ್ ಬೆಳವಣಿಗೆಗಳು ಮತ್ತು ಜಾಗತಿಕ ವಿದ್ಯಮಾನಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

‘ಉತ್ತಮ ಸಾಮರ್ಥ್ಯ ತೋರದಿದ್ದರೆ ಅವಕಾಶವಿಲ್ಲ’


ರಮೇಶ್ ಪೊವಾರ್

ಮುಂಬೈ (ಪಿಟಿಐ): ‘ಉತ್ತಮ ಸಾಮರ್ಥ್ಯ ತೋರದಿದ್ದರೆ ಅವಕಾಶ ಪಡೆಯಲು ಸಾಧ್ಯವಿಲ್ಲ’ ಎಂದಿರುವ ಭಾರತ ಮಹಿಳಾ ತಂಡದ ಕೋಚ್ ರಮೇಶ್ ಪೊವಾರ್ ಅವರು, ಏಕದಿನ ವಿಶ್ವಕಪ್ ಟೂರ್ನಿಗೆ ಜೆಮಿಮಾ ರಾಡ್ರಿಗಸ್ ಮತ್ತು ಶಿಖಾ ಪಾಂಡೆ ಅವರನ್ನು ಆಯ್ಕೆ ಮಾಡದಿರುವುದನ್ನು ಸಮರ್ಥಿಸಿಕೊಂಡಿದ್ದಾರೆ.

ನ್ಯೂಜಿಲೆಂಡ್‌ನಲ್ಲಿ ಏಕದಿನ ಸರಣಿ ಮತ್ತು ಅದರ ಬಳಿಕ ನಡೆಯುವ ವಿಶ್ವಕಪ್ ಟೂರ್ನಿಗೆ ತೆರಳುವ ಮೊದಲು ವರ್ಚುವಲ್ ಮಾಧ್ಯಮ ಸಂವಾದದಲ್ಲಿ ಪೊವಾರ್ ಮತ್ತು ತಂಡದ ನಾಯಕಿ ಮಿಥಾಲಿ ರಾಜ್ ಮಾತನಾಡಿದರು.

‘ಪ್ರತಿಯೊಬ್ಬ ಆಟಗಾರ್ತಿಗೂ ತಮ್ಮ ಸಾಮರ್ಥ್ಯದ ಬಗ್ಗೆ ಅರಿವಿರುತ್ತದೆ. ನಾವು ಅವರೊಂದಿಗೆ ಪ್ರತ್ಯೇಕ ಸಂವಹನ ನಡೆಸಬೇಕಾಗಿಲ್ಲ. ಏಕೆಂದರೆ ಐದು ಮಂದಿ ಆಯ್ಕೆದಾರರು, ನಾಯಕ ಮತ್ತು ಕೋಚ್ ಎಲ್ಲಾ ಆಟಗಾರ್ತಿರೊಂದಿಗೆ ಚರ್ಚಿಸಿ 18 ಮಂದಿಯ ತಂಡವನ್ನು ಆಯ್ಕೆ ಮಾಡಿದ್ದೇವೆ’ ಎಂದು ಪೊವಾರ್ ಹೇಳಿದರು.

ಸೈಯದ್ ಮೋದಿ ಬ್ಯಾಡ್ಮಿಂಟನ್ ಟೂರ್ನಿ: ಇಶಾನ್–ತನಿಶಾಗೆ ಮಿಶ್ರ ಡಬಲ್ಸ್ ಗರಿ

ಸಿಂಧುಗೆ ಚಾಂಪಿಯನ್ ಪಟ್ಟ


ಪಿ.ವಿ.ಸಿಂಧು – ಪಿಟಿಐ ಚಿತ್ರ

ಲಖನೌ (ಪಿಟಿಐ): ಒಲಿಂಪಿಯನ್ ಪಿ.ವಿ. ಸಿಂಧು, ಯುವ ತಾರೆ ಮಾಳವಿಕಾ ಬನ್ಸೊಡ ಅವರ ಸವಾಲನ್ನು ಸುಲಭವಾಗಿ ಮೀರಿ ನಿಂತರು. ಅದರೊಂದಿಗೆ ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತದ ಸಿಂಧು ತಮ್ಮದೇ ದೇಶದ ಎದುರಾಳಿಯನ್ನು 21-13, 21-16ರಲ್ಲಿ ಮಣಿಸಿದರು. ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದುಕೊಂಡಿರುವ ಹಾಗೂ ಮಾಜಿ ವಿಶ್ವ ಚಾಂಪಿಯನ್ ಸಿಂಧು ಕೇವಲ 35 ನಿಮಿಷಗಳಲ್ಲಿ ಜಯ ಸಾಧಿಸಿದರು. ಬಿಡಬ್ಲ್ಯುಎಫ್ ವಿಶ್ವ ಟೂರ್‌ನ ಸೂಪರ್ 300 ಟೂರ್ನಿ ಇದಾಗಿದ್ದು 2017ರಲ್ಲೂ ಸಿಂಧು ಚಾಂಪಿಯನ್ ಆಗಿದ್ದರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಇಶಾನ್ ಭಟ್ನಾಗರ್ ಮತ್ತು ತನಿಶಾ ಕ್ರಾಸ್ಟೊ 21-16, 21-12ರಲ್ಲಿ ಟಿ.ಹೇಮಾ ನಾಗೇಂದ್ರಬಾಬು ಮತ್ತು ಶ್ರೀವೇದ್ಯ ಗುರಜಡಾ ಎದುರು ಜಯ ಗಳಿಸಿ ಪ್ರಶಸ್ತಿ ಗೆದ್ದುಕೊಂಡರು. ಈ ಪಂದ್ಯ ಕೇವಲ 29 ನಿಮಿಷಗಳಲ್ಲಿ ಮುಕ್ತಾಯ ಕಂಡಿತ್ತು. ಮಹಿಳೆಯರ ಡಬಲ್ಸ್ ಪ್ರಶಸ್ತಿ ಮಲೇಷ್ಯಾದ ಅನಾ ಚಿಂಗ್ ಯಿಕ್ ಚಿಯಾಂಗ್ ಮತ್ತು ಟಿಯೊ ಮೀ ಕ್ಸಿಂಗ್ ಅವರ ಪಾಲಾಯಿತು. ಭಾರತದ ಟ್ರೀಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಅವರನ್ನು ಮಲೇಷ್ಯಾ ಆಟಗಾರ್ತಿಯರು 21-12, 21-13ರಲ್ಲಿ ಮಣಿಸಿದರು.

ಪುರುಷರ ಡಬಲ್ಸ್‌ನಲ್ಲಿ ಭಾರತದ ಕೃಷ್ಣ ಪ್ರಸಾದ್ ಗರಗ ಮತ್ತು ಪಾಂಜಲ ವಿಷ್ಣುವರ್ಧನ್ ಅವರನ್ನು 21-18, 21-15ರಲ್ಲಿ ಮಣಿಸಿ ಮಲೇಷ್ಯಾದ ಮ್ಯಾನ್ ವೀ ಚಾಂಗ್ ಮತ್ತು ಕಾಯ್ ವುನ್ ಟೀ ಪ್ರಶಸ್ತಿಯನ್ನು ಗೆದ್ದುಕೊಂಡರು.

ಪುರುಷರ ಫೈನಲ್ ಪಂದ್ಯ ರದ್ದು: ಟೂರ್ನಿಯ ಪುರುಷರ ವಿಭಾಗದ ಫೈನಲ್ ಪಂದ್ಯವನ್ನು ಕೋವಿಡ್‌ನಿಂದಾಗಿ ರದ್ದು ಮಾಡಲಾಯಿತು. ಫ್ರಾನ್ಸ್‌ನ ಅರ್ನಾದ್ ಮೆರ್ಕಲ್ ಮತ್ತು ಲೂಕಾಸ್ ಕ್ಲೇರ್‌ಬೌಟ್ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಮುಖಾಮುಖಿಯಾಗಬೇಕಾಗಿತ್ತು. ಆದರೆ ಇವರ ಪೈಕಿ ಒಬ್ಬರಿಗೆ ಕೋವಿಡ್ ಸೋಂಕು ಇರುವುದು ದೃಢಪಟ್ಟ ಕಾರಣ ಪಂದ್ಯವನ್ನು ನಡೆಸದೇ ಇರಲು ನಿರ್ಧರಿಸಲಾಯಿತು.

ಜೆಕ್ ಗಣರಾಜ್ಯ ಚೆಸ್: ಲಲಿತ್ ಬಾಬುಗೆ ಪ್ರಶಸ್ತಿ

ಮರಿನಾಸ್ಕ್ ಲಾಜ್ನೆ, ಜೆಕ್ ಗಣರಾಜ್ಯ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಎಂ.ಆರ್. ಲಲಿತ್ ಬಾಬು ಅವರು ಇಲ್ಲಿ ನಡೆದ ಮರಿಯನ್‌ಬಾದ್ ಓಪನ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದಾರೆ.

ಟೂರ್ನಿಯ ಒಂಬತ್ತು ಸುತ್ತುಗಳಲ್ಲಿ ಅಜೇಯವಾಗುಳಿದ ಲಲಿತ್, 6.5 ಪಾಯಿಂಟ್ಸ್ ಗಳಿಸಿದರು. ರನ್ನರ್ ಅಪ್ ಸ್ಥಾನ ಪಡೆದ ಐಲ್ಯಾಂಡ್ ಗ್ರ್ಯಾಂಡ್‌ಮಾಸ್ಟರ್ ಹ್ಯಾನೆಸ್ ಸ್ಟೆಫಾನ್ಸನ್ ಆರು ಪಾಯಿಂಟ್ಸ್ ಕಲೆಹಾಕಿದರು.

ಲಲಿತ್ ಅವರು ನಾಲ್ಕು ಪಂದ್ಯಗಳಲ್ಲಿ ಜಯ ಸಾಧಿಸಿದರೆ ಇನ್ನುಳಿದ ಐದು ಪಂದ್ಯಗಳನ್ನು ಡ್ರಾ ಮಾಡಿಕೊಂಡು ಅಗ್ರಸ್ಥಾನ ಪಡೆದರು. 29 ವರ್ಷದ ಆಟಗಾರ, ಶನಿವಾರ ರಾತ್ರಿ ನಡೆದ ಕೊನೆಯ ಸುತ್ತಿನ ಪಂದ್ಯದಲ್ಲಿ ಸ್ಟೆಫಾನ್ಸನ್ ಎದುರು ಡ್ರಾ ಮಾಡಿಕೊಂಡಿದ್ದರು.

ಲಲಿತ್ ಅವರಿಗೆ ಒಲಿದ ಸತತ ಮೂರನೇ ಪ್ರಶಸ್ತಿ ಇದು.


ಲಲಿತ್ ಬಾಬು– ಟ್ವಿಟರ್ ಚಿತ್ರ

ರಿಜ್ವಾನ್ ವರ್ಷದ ಟಿ20 ಕ್ರಿಕೆಟಿಗ

ದುಬೈ (ಪಿಟಿಐ): ಪಾಕಿಸ್ತಾನದ ವಿಕೆಟ್‌ಕೀಪರ್ ಬ್ಯಾಟರ್ ಮೊಹಮ್ಮದ್ ರಿಜ್ವಾನ್ ಮತ್ತು ಇಂಗ್ಲೆಂಡ್‌ನ ಟಾಮಿ ಬೆಮೊಂಟ್ ಅವರು ಕ್ರಮವಾಗಿ ಐಸಿಸಿ 2021ರ ಟಿ20 ಆಟಗಾರ ಮತ್ತು ಆಟಗಾರ್ತಿಯಾಗಿ ಆಯ್ಕೆಯಾಗಿದ್ದಾರೆ.

2021ರಲ್ಲಿ ಉತ್ತಮ ಲಯದಲ್ಲಿದ್ದ ರಿಜ್ವಾನ್ ಅವರು 29 ಪಂದ್ಯಗಳನ್ನು ಆಡಿ 73.66ರ ಸರಾಸರಿಯಲ್ಲಿ 1,326 ರನ್ ಕಲೆಹಾಕಿದ್ದರು. ಅವರ ಸ್ಟ್ರೈಕ್ ರೇಟ್ 134.89 ಆಗಿತ್ತು.

ಬ್ಯಾಟಿಂಗ್‌ನಲ್ಲಿ ಅಷ್ಟೇ ಅಲ್ಲದೆ ವಿಕೆಟ್ ಕೀಪಿಂಗ್‌ನಲ್ಲೂ ಮಿಂಚಿದ್ದ ರಿಜ್ವಾನ್, ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡವನ್ನು ಸೆಮಿಫೈನಲ್‌ವರೆಗೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಟಾಮಿ ಬೆಮೊಂಟ್ ಅವರು ಕಳೆದ ವರ್ಷ ಟಿ20 ಪಂದ್ಯಗಳಲ್ಲಿ ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದರು.

ಕ್ರಿಕೆಟ್: ಭಾರತಕ್ಕೆ ಭರ್ಜರಿ ಜಯ

ರಾಜ್ ಬಾವಾ, ರಘುವಂಶಿ ಅಬ್ಬರ


ರಾಜ್ ಬಾವಾ ಮತ್ತು ಅಂಗಕ್ರಿಷ್ ರಘುವಂಶಿ –ಬಿಸಿಸಿಐ ಟ್ವಿಟರ್ ಚಿತ್ರ

ತರೌಬಾ, ಟ್ರಿನಿಡಾಡ್(ಪಿಟಿಐ): ರಾಜ್ ಬಾವಾ ಮತ್ತು ಅಂಗಕ್ರಿಷ್ ರಘುವಂಶಿ ಅವರ ಅಬ್ಬರದ ಶತಕದ ಬಲದಿಂದ ಭಾರತ ತಂಡವು 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಉಗಾಂಡ ಎದುರು ಭರ್ಜರಿ ಜಯ ಗಳಿಸಿತು.


ಬಿ ಗುಂಪಿನ ಕೊನೆಯ ಪಂದ್ಯದಲ್ಲಿ ಭಾರತ ತಂಡವು 326 ರನ್‌ಗಳ ಅಂತರದಿಂದ ಇದೀಗ ಕ್ರಿಕೆಟ್ ಜಗತ್ತಿನಲ್ಲಿ ಅಂಬೆಗಾಲಿಕ್ಕುತ್ತಿರುವ ಉಗಾಂಡವನ್ನು ಸೋಲಿಸಿತು. ಶನಿವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು ರಾಜ್ (ಅಜೇಯ 162; 108ಎ) ಮತ್ತು ರಘುವಂಶಿ (144; 120ಎ) ಅವರ ಶತಕಗಳ ಬಲದಿಂದ 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 405 ರನ್ ಗಳಿಸಿತು. ಅದಕ್ಕುತ್ತರವಾಗಿ ಉಗಾಂಡ ತಂಡವು 19.4 ಓವರ್‌ಗಳಲ್ಲಿ 79 ರನ್‌ಗಳಿಸಲಷ್ಟೇ ಶಕ್ತವಾಯಿತು.

ಇದೇ 29ರಂದು ನಡೆಲಿರುವ ಎಂಟರ ಘಟ್ಟದ ಪಂದ್ಯದಲ್ಲಿ ಭಾರತ , ಬಾಂಗ್ಲಾದೇಶದ ಎದುರು ಆಡಲಿದೆ.

ಈಚೆಗೆ ಕೋವಿಡ್‌ನಿಂದಾಗಿ ಐಸೊಲೇಷನ್‌ಗೊಳಗಾಗಿರುವ ನಾಯಕ ಯಶ್ ಧುಳ ಮತ್ತು ಇನ್ನೂ ನಾಲ್ವರು ಆಟಗಾರರು ಕ್ವಾರ್ಟರ್‌ಫೈನಲ್ ಪಂದ್ಯಕ್ಕೆ ಮರಳುವ ನಿರೀಕ್ಷೆ ಇದೆ.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 5ಕ್ಕೆ 405 (ರಾಜ್ ಬಾವಾ ಔಟಾಗದೆ 162, ಅಂಗಕ್ರಿಷ್ ರಘುವಂಶಿ 144, ಪಾಸ್ಕಲ್ ಮುರುಂಗಿ 72ಕ್ಕೆ3), ಉಗಾಂಡ: 19.4 ಓವರ್‌ಗಳಲ್ಲಿ 79 (ಪಾಸ್ಕಲ್ ಮುರುಂಗಿ 34, ನಿಶಾಂತ್ ಸಿಂಧು 19ಕ್ಕೆ4, ರಾಜವರ್ಧನ್ ಹಂಗರಗೇಕರ್ 8ಕ್ಕೆ2) ಫಲಿತಾಂಶ ಭಾರತ ತಂಡಕ್ಕೆ 326 ರನ್‌ಗಳ ಜಯ.

ಪ್ರೊ ಕಬಡ್ಡಿ ಲೀಗ್: ಜಯದ ಹಾದಿಗೆ ಬೆಂಗಳೂರು ಬುಲ್ಸ್


ಪವನ್ ಕುಮಾರ್ ಶೆರಾವತ್

ಇಂದಿನ ಪಂದ್ಯ (ರಾತ್ರಿ)
ಬೆಂಗಾಲ್ ವಾರಿಯರ್ಸ್–ಜೈಪುರ ಪಿಂಕ್ ಪ್ಯಾಂಥರ್ಸ್ 7.30
ಪುಣೇರಿ ಪಲ್ಟನ್ ದಬಂಗ್ ಡೆಲ್ಲಿ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬೆಂಗಳೂರು: ನಾಯಕ ಪವನ್ ಕುಮಾರ್ ಶೆರಾವತ್ ಅವರ ಛಲದ ಆಟದಿಂದಾಗಿ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನಲ್ಲಿ ಮತ್ತೆ ಜಯದ ಹಾದಿಗೆ ಮರಳಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬುಲ್ಸ್ ತಂಡವು 36–31ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಿಸಿತು.

ಸತತ ಮೂರು ಸೋಲುಗಳಿಂದ ಕಂಗೆಟ್ಟಿದ್ದ ಬುಲ್ಸ್ ತಂಡಕ್ಕೆ ಪವನ್ ಗೆಲುವಿನ ಹಾದಿ ತೋರಿಸಿದರು. ರೇಡಿಂಗ್‌ನಲ್ಲಿ 12 ಅಂಕಗಳನ್ನು ಗಳಿಸಿದ ಅವರು ಜಯದ ರೂವಾರಿಯಾದರು.

ಭರತ್ (7) ಕೂಡ ಅವರಿಗೆ ಉತ್ತಮ ಜೊತೆ ನೀಡಿದರು. ರಕ್ಷಣಾ ವಿಭಾಗದಲ್ಲಿ ಸೌರಭ್ ನಂದಾಲ್ ಮತ್ತು ಅಮನ್ ತಲಾ ನಾಲ್ಕು ಅಂಕ ಗಳಿಸಿದರು.

ಟೈಟನ್ಸ್ ತಂಡದ ಅಂಕಿತ್ ಬೆನಿವಾಲ್ (7), ರಾಕೇಶ್ ಗೌಡ (5) ಮತ್ತು ಆಕಾಶ್ ಚೌಧರಿ (5) ಅವರು ಉತ್ತಮವಾಗಿ ಆಡಿದರು. ಆದರೆ, ಅವರ ಪ್ರಯತ್ನಕ್ಕೆ ಗೆಲುವಿನ ಫಲ ಒಲಿಯಲಿಲ್ಲ.

ಹರಿಯಾಣಕ್ಕೆ ರೋಚಕ ಜಯ: ರೇಡಿಂಗ್ ಪಡೆಯ ಅಮೋಘ ಆಟದ ಬಲದಿಂದ ಹರಿಯಾಣ ಸ್ಟೀಲರ್ಸ್ ತಂಡವು ಕೇವಲ ಒಂದು ಅಂಕದ ಅಂತರದಿಂದ ಯುಪಿ ಯೋಧಾ ಎದುರು ಜಯಭೇರಿ ಬಾರಿಸಿತು.

ಹರಿಯಾಣ ತಂಡವು 36–35ರಿಂದ ಗೆದ್ದಿತು. ಹರಿಯಾಣದ ರೋಹಿತ್ ಗುಲಿಯಾ ಏಳು, ವಿಶಾಲ್ ಖಂಡೊಲಾ, ಜೈದೀಪ್, ವಿನಯ್ ಮತ್ತು ಮೋಹಿತ್ ಅವರು ತಲಾ ಐದು ಪಾಯಿಂಟ್ಸ್ ಗಳಿಸಿದರು. ಇದರೊಂದಿಗೆ ತಂಡದ ಜಯಕ್ಕೆ ಮಹತ್ವದ ಕಾಣಿಕೆ ನೀಡಿದರು.

ಯೋಧಾ ತಂಡದ ಆಟಗಾರರೂ ಕಠಿಣ ಪೈಪೋಟಿಯೊಡ್ಡಿದರು. ಶ್ರೀಕಾಂತ್ ಜಾಧವ್ 10 ಅಂಕಗಳನ್ನು ಗಳಿಸುವ ಮೂಲಕ ತಂಡವನ್ನು ಜಯದ ಸನಿಹ ತಂದಿದ್ದರು. ಅವರಿಗೆ ಪ್ರದೀಪ್ ನರ್ವಾಲ್ ಮತ್ತು ಮೊಹಮ್ಮದ್ ತಫಿ ಕ್ರಮವಾಗಿ ಆರು ಹಾಗೂ ಐದು ಅಂಕ ಗಳಿಸಿ ಉತ್ತಮ ಜೊತೆ ನೀಡಿದರು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	14	8	5	1	46
ದಬಂಗ್ ಡೆಲ್ಲಿ	12	7	3	2	43
ಪಟ್ನಾ ಪೈರೇಟ್ಸ್	11	7	3	1	40
ಯುಪಿ ಯೋಧಾ	13	5	5	3	39
ಹರಿಯಾಣ ಸ್ಟೀಲರ್ಸ್	13	6	5	2	39
ಯು ಮುಂಬಾ	12	4	3	5	36
ಬೆಂಗಾಲ್ ವಾರಿಯರ್ಸ್	13	6	6	1	36
ಜೈಪುರ ಪಿಂಕ್ ಪ್ಯಾಂಥರ್ಸ್	12	5	5	2	35
ತಮಿಳ್ ತಲೈವಾಸ್	12	3	3	6	34
ಗುಜರಾತ್ ಜೈಂಟ್ಸ್	11	3	5	3	28
ಪುಣೇರಿ ಪಲ್ಟನ್	12	5	7	-	27
ತೆಲುಗು ಟೈಟನ್ಸ್	13	1	10	2	19

ಭಾನುವಾರದ ಪಂದ್ಯಗಳ ಅಂತ್ಯಕ್ಕೆ)

ಕಾರ್ಲ್‌ಸನ್‌ಗೆ ಮಣಿದ ಪ್ರಜ್ಞಾನಂದ


ಆರ್. ಪ್ರಜ್ಞಾನಂದ– ಎಎಫ್‌ಪಿ ಚಿತ್ರ

ವಿಜ್ಕ್ ಆನ್‌ಜಿ, ನೆದರ್ಲೆಂಡ್ಸ್ (ಪಿಟಿಐ): ಭಾರತದ ಆರ್. ಪ್ರಜ್ಞಾನಂದ ಅವರು ಪ್ರತಿಷ್ಠಿತ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ವಿಶ್ವದ ಅಗ್ರ ಕ್ರಮಾಂಕದ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಮಣಿದರು. ವಿದಿತ್ ಸಂತೋಷ್ ಗುಜರಾತಿ ಕೂಡ ಸೋಲು ಅನುಭವಿಸಿದರು.

ಈ ಗೆಲುವಿನೊಂದಿಗೆ ನಾರ್ವೆಯ ಕಾರ್ಲ್‌ಸನ್ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದರು. ಪ್ರಜ್ಞಾನಂದ ಜಂಟಿ 12ನೇ ಸ್ಥಾನದಲ್ಲಿದ್ದಾರೆ.

ಏಳನೇ ಸುತ್ತಿನಲ್ಲಿ ವಿದಿತ್ ಅವರು ಸ್ಥಳೀಯ ಆಟಗಾರ ಜೋರ್ಡನ್ ವ್ಯಾನ್ ಫೊರೀಸ್ಟ್ ಎದುರು ನಿರಾಸೆ ಅನುಭವಿಸಿದರು.

ಟೂರ್ನಿಯಲ್ಲಿ ವಿದಿತ್ ಅವರಿಗೆ ಇದು ಮೊದಲ ಸೋಲು. ಸದ್ಯ ಅವರು ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ಮಾಸ್ಕ್ ಧರಿಸಿ ಆಡಲು ನಿರಾಕರಿಸಿದ ರಷ್ಯಾದ ಡ್ಯಾನಿಲ್ ದುಬೊವ್ ಅವರಿಗೆ ಭಾರತದ ಅನೀಶ್ ಗಿರಿ ಎದುರು ಆಡುವ ಅವಕಾಶ ಸಿಗಲಿಲ್ಲ. ಭಾರತದ ಇನ್ನೊರ್ವ ಆಟಗಾರ ಸೂರ್ಯಶೇಖರ್ ಗಂಗೂಲಿ ಜಂಟಿ ನಾಲ್ಕನೇ ಸ್ಥಾನದಲ್ಲಿದ್ದಾರೆ.

ಸೋಂಕು: ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯಿಂದ ಭಾರತ ಹೊರಕ್ಕೆ

ನವಿ ಮುಂಬೈ (ಪಿಟಿಐ): 12 ಮಂದಿ ಸದಸ್ಯರಿಗೆ ಕೋವಿಡ್–19 ಖಚಿತಪಟ್ಟ ಕಾರಣ ಭಾರತ ತಂಡವು ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯಿಂದ ಹೊರಬಿದ್ದಿದೆ. ಇದರಿಂದಾಗಿ ಭಾನುವಾರ ನಡೆಯಬೇಕಿದ್ದ ಚೀನಾ ತೈಪೆ ಎದುರಿನ ಪಂದ್ಯವೂ ರದ್ದಾಯಿತು.

ಕೋವಿಡ್ ಪ್ರಕರಣಗಳು ಅಲ್ಲದೆ ಇಬ್ಬರು ಆಟಗಾರ್ತಿಯರು ಗಾಯಗೊಂಡಿದ್ದ ಹಿನ್ನೆಲೆಯಲ್ಲಿ ಪಂದ್ಯಕ್ಕೆ ತಂಡವನ್ನು ಕಣಕ್ಕಿಳಿಸಲು ಸಾಧ್ಯವಾಗಲಿಲ್ಲ. ಈ ಮೊದಲಿ ಇಬ್ಬರು ಆಟಗಾರ್ತಿಯರು ಕೋವಿಡ್ ಕಾರಣದಿಂದ ಹೊರಗುಳಿದಿದ್ದರು.

ಏಷ್ಯನ್ ಫುಟ್ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ಪಂದ್ಯಾವಳಿಯ ನಿಯಮಗಳ ಅನ್ವಯ ತಂಡವು ಪಂದ್ಯಕ್ಕೆ ಆಟಗಾರ್ತಿಯರನ್ನು ಕಣಕ್ಕಿಳಿಸಲು ಸಾಧ್ಯವಾಗದಿದ್ದರೆ ಸ್ಪರ್ಧೆಯಿಂದ ಹಿಂದೆ ಸರಿದಿದೆ ಎಂದು ಪರಿಗಣಿಸಲಾಗುತ್ತದೆ.

ಜನವರಿ 21ರಂದು ಆಟಗಾರ್ತಿಯರನ್ನು ಆರ್‌ಟಿ- ಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಭಾನುವಾರ ಅದರ ಫಲಿತಾಂಶ ಬಂದಿದೆ.

ಚೀನಾಗೆ ಗೆಲುವು: ಎಂಟು ಬಾರಿಯ ಚಾಂಪಿಯನ್ ಚೀನಾ ತಂಡವು ಟೂರ್ನಿಯಲ್ಲಿ ಮತ್ತೊಂದು ಸೊಗಸಾದ ಗೆಲುವು ದಾಖಲಿಸಿತು. ಭಾನುವಾರ ನಡೆದ ಪಂದ್ಯದಲ್ಲಿ ವ್ಯಾಂಗ್ ಶುಯಾಂಗ್ ಮತ್ತು ವಾಂಗ್ ಶನ್ಶೇನ್ ಅವರ ಭರ್ಜರಿ ಆಟದ ಬಲದಿಂದ ಚೀನಾ 7–0ಯಿಂದ ಇರಾನ್ ವಿರುದ್ಧ ಜಯ ಗಳಿಸಿತು.

ಹಾಕಿ: ಜಪಾನ್‌ಗೆ ಮಣಿದ ಭಾರತ

ಮಸ್ಕತ್ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಮಹಿಳಾ ಏಷ್ಯಾಕಪ್ ಹಾಕಿ ಟೂರ್ನಿಯಲ್ಲಿ ಭಾನುವಾರ ಜಪಾನ್ ಎದುರು ಮಣಿಯಿತು.

‘ಎ’ ಗುಂಪಿನ ಪಂದ್ಯದಲ್ಲಿ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಜಪಾನ್ 2–0ಯಿಂದ ಭಾರತಕ್ಕೆ ಸೋಲುಣಿಸಿತು. ವಿಜೇತ ತಂಡದ ನಾಗಾ ಯೂರಿ (2ನೇ ನಿಮಿಷ) ಮತ್ತು ಸಾಕಿ ತನಕ (42ನೇ ನಿಮಿಷ) ಕಾಲ್ಚಳಕ ತೋರಿದರು.

ಭಾರತ ತಂಡವು ಮುಂದಿನ ಪಂದ್ಯದಲ್ಲಿ ಸೋಮವಾರ ಸಿಂಗಪುರ ತಂಡವನ್ನು ಎದುರಿಸಲಿದೆ. ಮೊದಲ ಪಂದ್ಯದಲ್ಲಿ ಭಾರತವು 9–0ಯಿಂದ ಮಲೇಷ್ಯಾ ತಂಡವನ್ನು ಪರಾಭವಗೊಳಿಸಿತ್ತು. ಜಪಾನ್ ತಂಡವು ಮೊದಲ ಪಂದ್ಯದಲ್ಲಿ ಸಿಂಗಪುರ ತಂಡವನ್ನು ಸೋಲಿಸಿತ್ತು.


ಎ.ಎಸ್‌.ರಿತೀಶ್ ಅಭಿನವ್ ಮತ್ತು ಆದ್ಯ ಚೌರಾಸಿಯಾ

ಟೆನಿಸ್: ರಿತೀಶ್, ಆದ್ಯಗೆ ಪ್ರಶಸ್ತಿ

ಬೆಂಗಳೂರು: ತಮಿಳುನಾಡಿನ ಎ.ಎಸ್. ರಿತೀಶ್ ಅಭಿನವ್ ಮತ್ತು ಆತಿಥೇಯ ಕರ್ನಾಟಕದ ಆದ್ಯ ಚೌರಾಸಿಯಾ ಅವರು ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆ ಆಯೋಜಿಸಿರುವ ಎಂಎಟಿ–ಎಐಟಿಎ ಟಿಎಸ್–7 ಸರಣಿಯ 12 ವರ್ಷದೊಳಗಿನವರ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ಪ್ರಶಸ್ತಿ ಗೆದ್ದುಕೊಂಡರು.

ಮುರುಗನ್ ಅಕಾಡೆಮಿ ಆಫ್ ಟೆನಿಸ್ ಆವರಣದಲ್ಲಿ ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ ರಿತೀಶ್ 6–3, 6–0 ಅಂತರದಲ್ಲಿ ಕರ್ನಾಟಕದ ಆರುಷ್ ಗುರುರಾಜ್ ವಿರುದ್ಧ ಜಯ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಆದ್ಯ 6–3, 1–6, 6–4ರಲ್ಲಿ ಕರ್ನಾಟಕದವರೇ ಆದ ಪೂಜಾ ನಾಗರಾಜ್ ವಿರುದ್ಧ ಜಯ ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಆದ್ಯ 3–1ರ ಮುನ್ನಡೆಯಲ್ಲಿದ್ದಾಗ ಪೂಜಾ ತಿರುಗೇಟು ನೀಡಿದ್ದರು. ಆದರೆ ನಿರ್ಣಾಯಕ ಸೆಟ್‌ನಲ್ಲಿ ಆದ್ಯ ಮತ್ತೆ ನೈಜ ಸಾಮರ್ಥ್ಯ ತೋರಿದರು.